ವಿಶ್ವವಾಣಿ
ವಿಶ್ವಾಸವೇ ವಿಶ್ವ

ನದಿಗಳಿಗೂ ಜೀವಿಸುವ ಹಕ್ಕು ನೀಡಿ

ಉತ್ತರ ಕನ್ನಡದಲ್ಲಿ ನದಿ ತಿರುವು ಯೋಜನೆ ಸ್ಥಗಿತಗೊಳಿಸಬೇಕು. ಮಾನವ ಹಕ್ಕು ಕಾಯಿದೆ ಜಾರಿಗೆ ತಂದ ಮಾದರಿಯಲ್ಲಿ ನದಿಗಳಿಗೂ ಜೀವಿಸುವ ಹಕ್ಕು ಹಾಗೂ ನೈಸರ್ಗಿಕ ಹರಿವು ಉಳಿಸಿಕೊಳ್ಳುವ ಹಕ್ಕು ನೀಡುವ ಕಾನೂನು ಜಾರಿಗೆ ತರಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮುಂದಾಗಬೇಕು ಎಂದು ನದಿ ತಿರುವು ಯೋಜನೆ ವಿರೋಧಿಸಿ ಶಿರಸಿಯಲ್ಲಿ ಭಾನುವಾರ ನಡೆದ ಸಮಾವೇಶದಲ್ಲಿ ಬೇಡ್ತಿ–ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ವತಿಯಿಂದ ನಿರ್ಣಯ ಮಂಡಿಸಲಾಯಿತು.

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ ಹಾಗೂ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ
ಮತ್ತು
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ.ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ದಿನಾಂಕ : 12.01.2026 ಸೋಮವಾರ,
ಬೆಳಿಗ್ಗೆ : 11.00 ಗಂಟೆಗೆ
ಸ್ಥಳ :- ಯಡ್ರಾಮಿ ತಾಲೂಕು, ಜೇವರ್ಗಿ ಮತಕ್ಷೇತ್ರ,
ಕಲಬುರಗಿ ಜಿಲ್ಲೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ.

ಶ್ರೀ ಕೃಷ್ಣ ಭೈರೆ ಗೌಡ ರವರು, ಮಾನ್ಯ ಕಂದಾಯ ಸಚಿವರು, ಶ್ರೀ ಪ್ರಿಯಾಂಕ್ ಖರ್ಗೆ ರವರು, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ & ಬಿ.ಟಿ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು, ಶ್ರೀ ಡಿ.ಸುಧಾಕರ್ ರವರು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು ಮತ್ತು ಡಾ. ಅಜಯ್ ಧರ್ಮಸಿಂಗ್ ರವರು ಅಧ್ಯಕ್ಷರು ಕೆ.ಕೆ.ಆರ್.ಡಿ.ಬಿ ಇವರ ನೇತೃತ್ವದಲ್ಲಿ ನಡೆದ ಪ್ರಜಾಸೌಧಗಳ ನಿರ್ಮಾಣ ಮತ್ತು ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿರುವ ಸಾಂದರ್ಭಿಕ ಚಿತ್ರ.

ಶ್ರೀ ಮಧು ಬಂಗಾರಪ್ಪ ರವರು, ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತ ಸಚಿವರು, ಡಾ. ಶರಣಪ್ರಕಾಶ್ ಆರ್. ಪಾಟೀಲ್ ರವರು, ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ , ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಮತ್ತು ಡಾ. ಅಜಯ್ ಧರ್ಮಸಿಂಗ್ ರವರು ಅಧ್ಯಕ್ಷರು ಕೆ.ಕೆ.ಆರ್.ಡಿ.ಬಿ ಇವರ ನೇತೃತ್ವದಲ್ಲಿ ನಡೆದ ಅಕ್ಷರ ಆವಿಷ್ಕಾರ ಯೋಜನಾ ಸಭೆಯಲ್ಲಿ ಭಾಗವಹಿಸಿರುವ ಸಾಂದರ್ಭಿಕ ಚಿತ್ರ.

ನೂತನ ಪ್ರಜಾಸೌಧಗಳ ಅಡಿಗಲ್ಲು

ಕಲ್ಯಾಣ ಕರ್ನಾಟಕದ ನೂತನ ತಾಲ್ಲೂಕುಗಳಲ್ಲಿ
ರೂ. **163.55** ಕೋಟಿಗಳ ವೆಚ್ಚದಲ್ಲಿ
ನೂತನ **ಪ್ರಜಾಸೌಧಗಳು**

300 ಕೆ. ಪಿ. ಎಸ್. ಶಾಲೆಗಳ ಮಂಜೂರಾತಿ

ಅಂದಾಜು ಮೊತ್ತ **ರೂ. 600** ದಿಂದ **ರೂ. 900** ಕೋಟಿಗಳ ವೆಚ್ಚದಲ್ಲಿ ಒಟ್ಟು **300** ನೂತನ **KPS ಶಾಲೆಗಳು**
KKRDB ವತಿಯಿಂದ **200 KPS** ಶಾಲೆಗಳು. ಶಿಕ್ಷಣ ಇಲಾಖೆಯಿಂದ **100 KPS** ಶಾಲೆಗಳು.

ಜೇವರ್ಗಿ ಮತ್ತು ಯಡ್ರಾಮಿ ಅವಳಿ ತಾಲ್ಲೂಕುಗಳ ಸರ್ವತೋಮುಖ ಏಳಿಗೆಗೆ,
ಸುಮಾರು **ರೂ. 879.16** ಕೋಟಿಗಳ ಬೃಹತ್ ಮೊತ್ತದಲ್ಲಿ ಒಟ್ಟು **96 ವಿವಿಧ** ಜನಪರ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ.

ಸರ್ವರಿಗೂ ಆದರದ ಸ್ವಾಗತ

ವಾ.ಸಾ.ಸಂ.ಇ/ಕಲಬುರಗಿ/960/ಕೆ.ಎಸ್.ಎಂ.ಸಿ.&ಎ/2025–26

ಸಮಾಚಾರ ಸಣ್ಣದಲ್ಲ

ಹೋಂ ಗಾರ್ಡ್ ಮಹಿಳೆಗೆ ಥಳಿಸಿದ ಯುವತಿ ಬಂಧನ

ಬೆಂಗಳೂರು: ಬಟ್ಟೆ ವಿಚಾರಕ್ಕೆ ಬುದ್ಧಿವಾದ ಹೇಳಿದ ಮಹಿಳಾ ಹೋಂಗಾರ್ಡ್‌ಗೆ ಜುಟ್ಟು ಹಿಡಿದು ಥಳಿಸಿದ್ದ ಯುವತಿಯನ್ನು ಬಂಧಿಸಲಾಗಿದೆ. ಹೋಮ್ ಗಾರ್ಡ್ ಲಕ್ಷ್ಮೀ ನರಸಮ್ಮ ಎಂಬುವರನ್ನು ರಸ್ತೆಯಲ್ಲಿ ರಕ್ತ ಬರುವಂತೆ ಥಳಿಸಿದ್ದ ಯುವತಿ ವಿರುದ್ಧ ರಾಮ ಮೂರ್ತಿ ನಗರ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡ ಯುವತಿಯನ್ನು ವಶಕ್ಕೆ ಪಡೆದು ನ್ಯಾಯಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹಲವು ವರ್ಷದಿಂದ ಹೋಮ್ ಗಾರ್ಡ್ ಆಗಿ ಕೆಲಸ ಮಾಡ್ತಿದ್ದ ಲಕ್ಷ್ಮೀ ನರಸಮ್ಮ, ಯುವತಿ ಮೋಹಿನಿಗೆ ಬಟ್ಟೆ ವಿಚಾರವಾಗಿ ಬುದ್ಧಿವಾದ ಹೇಳಿದ್ದರು. ತುಂಡು ಬಟ್ಟೆ ಹಾಕಿಕೊಂಡು ಬೀದಿಗೆ ಬಂದು ಸುತ್ತಾಡುತ್ತಿದ್ದ ಯುವತಿ ಮೋಹಿನಿಯನ್ನು ಕಂಡು ಯುವಕರು ಚುಡಾಯಿಸಲು ಶುರು ಮಾಡಿದ್ದರು. ಹೀಗಾಗಿ ಹೋಮ್‌ಗಾರ್ಡ್ ಲಕ್ಷ್ಮೀ ನರಸಮ್ಮ, ಯುವತಿ ಮೋಹಿತಿ ಬಟ್ಟೆ ವಿಚಾರವಾಗಿ ಬುದ್ಧಿವಾದ ಹೇಳಿದ್ದರು. ಯುವತಿ ಮೋಹಿನಿ ಹೋಮ್‌ಗಾರ್ಡ್ ಲಕ್ಷ್ಮೀ ನರಸಮ್ಮಗೆ ಥಳಿಸುವ ವಿಡಿಯೊ ವೈರಲ್ ಆಗಿತ್ತು. ಯುವತಿಯ ವರ್ತನೆಗೆ ಆಕ್ರೋಶ ಕೂಡ ವ್ಯಕ್ತವಾಗಿತ್ತು.

ವಿದೇಶಿಯರಿಗೆ ಮನೆ ಬಾಡಿಗೆ: ಎಫ್‌ಐಆರ್

ಬೆಂಗಳೂರು: ವಿದೇಶಿ ಪ್ರಜೆಗಳಿಗೆ ಮನೆ ಬಾಡಿಗೆ ನೀಡಿದ ಬಳಿಕ ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡದ ಮನೆ ಮಾಲೀಕರೊಬ್ಬರ ವಿರುದ್ಧ ವೈಟ್‌ಫೀಲ್ಡ್ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ನಾಗೊಂಡನಹಳ್ಳಿ ನಿವಾಸಿ ರಾಘವೇಂದ್ರ ಎಂಬುವವರ ವಿರುದ್ಧ ವಲಸೆ ಮತ್ತು ವಿದೇಶಿಯರ ಕಾಯಿದೆ ಹಾಗೂ ಸರಕಾರಿ ಅಧಿಕಾರಿಗಳಿಗೆ ಮಾಹಿತಿ ನೀಡದೆ ವಂಚಿಸಿದ ಆರೋಪದ ಮೇಲೆ ಎಫ್‌ಐಆರ್ ದಾಖಲಾಗಿದೆ. ರಾಘವೇಂದ್ರ ಅವರು ತಮ್ಮ ಮನೆಯನ್ನು ಆಫ್ರಿಕಾದ ಇಬ್ಬರು ಮಹಿಳೆಯರಿಗೆ ಬಾಡಿಗೆಗೆ ನೀಡಿದರು. ಆದರೆ, ಕಾನೂನಿನ ಪ್ರಕಾರ ಸ್ಥಳೀಯ ಪೊಲೀಸ್ ಠಾಣಾ ಹಾಗೂ ವಿದೇಶಿಯರ ಪ್ರಾದೇಶಿಕ ನೋಂದಣಿ ಪ್ರಾಧಿಕಾರಕ್ಕೆ ಮಾಹಿತಿ ನೀಡಿರಲಿಲ್ಲ, ಹಾಗಾಗಿ ಮಾಲೀಕರ ವಿರುದ್ಧ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಪರಸ್ಪರ ಒಪ್ಪಿತ ಹದಿಹರೆಯದ ಪ್ರೇಮ ಪೋಕ್ಸೊ ಅಡಿ ದುರುಪಯೋಗಕ್ಕೆ ಗರಂ

ರೋಮಿಯೊ ಜ್ಯೂಲಿಯೆಟ್ ಅನುಚ್ಛೇದ ಜಾರಿಗೆ ಸಲಹೆ

ವಿಶ್ವವಾಣಿ ಸುದ್ದಿಮನೆ ದೆಹಲಿ/ಬೆಂಗಳೂರು

ಮಕ್ಕಳ ರಕ್ಷಣೆಯ ಆಶಯ ಹೊಂದಿರುವ ಕಾಯಿದೆಗಳನ್ನು ಹದಿಹರೆಯದವರ ಪರಸ್ಪರ ಸಮ್ಮತಿಯ ಪ್ರೇಮ ಸಂಬಂಧವನ್ನು ಶಿಕ್ಷಿಸಲು ದುರುಪಯೋಗ ಮಾಡಿಕೊಳ್ಳಲಾಗುತ್ತಿದ್ದು ಅಂತಹ ಜೋಡಿಗಳನ್ನು ಕಠಿಣ ಕ್ರಿಮಿನಲ್ ಕ್ರಮಗಳಿಂದ ರಕ್ಷಿಸುವುದಕ್ಕಾಗಿ 'ರೋಮಿಯೋ ಜ್ಯೂಲಿಯೆಟ್ ಅನುಚ್ಛೇದ' ಜಾರಿಗೆ ತರಬೇಕು ಎಂದು ಕೇಂದ್ರ ಸರಕಾರಕ್ಕೆ ಸುಪ್ರೀಂಕೋರ್ಟ್ ಸಲಹೆ ನೀಡಿದೆ.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯಿದೆ- 2012ರ (ಪೋಕ್ಸೊ ಕಾಯಿದೆ) ಕುರಿತಾದ ಜಾಮೀನು ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ಹೊರಡಿಸಿದ್ದ ವಿವಿಧ ನಿರ್ದೇಶನಗಳನ್ನು ಬದಿಗೆ ಸರಿಸಿದ ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಮತ್ತು ಎನ್.ಕೆ. ಸಿಂಗ್ ಅವರಿದ್ದ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು. ಪೋಕ್ಸೊ ಪ್ರಕರಣಗಳಲ್ಲಿ ತನಿಖೆಯ ಆರಂಭದಲ್ಲೇ ಸಂತ್ರಸ್ತರ ವಯಸ್ಸನ್ನು ನಿರ್ಧರಿಸಲು ಪೊಲೀಸರು ಕಡ್ಡಾಯವಾಗಿ ವೈದ್ಯಕೀಯ ಪರೀಕ್ಷೆ ನಡೆಸಬೇಕು ಮತ್ತು ಜಾಮೀನು ಅರ್ಜಿಗಳನ್ನು ಆಲಿಸುವ ನ್ಯಾಯಾಲಯಗಳು ಶಾಲಾ ದಾಖಲಾತಿ ಅಥವಾ ಜನನ ಪ್ರಮಾಣಪತ್ರ ಸಂಶಯಾಸ್ಪದವೆಂದು ಕಂಡರೆ ಅವುಗಳನ್ನು ಪರಿಶೀಲಿಸಿ ತಿರಸ್ಕರಿಸಬಹುದೆಂದು ಹೈಕೋರ್ಟ್ ನಿರ್ದೇಶಿಸಿತ್ತು.

ಆದರೆ ಜಾಮೀನು ಅರ್ಜಿಯನ್ನು ವಿಚಾರಿಸುವ ಸಂದರ್ಭದಲ್ಲೇ ಇಂತಹ ನಿರ್ದೇಶನಗಳನ್ನು ನೀಡುವ ಮೂಲಕ ಹೈಕೋರ್ಟ್ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಜಾಮೀನು ನ್ಯಾಯಾಲಯಗಳು ಪರ್ಯಾಯ ವಿಚಾರಣೆ (ಮಿನಿ ಟ್ರಯಲ್) ನಡೆಸಲು ಸಾಧ್ಯವಿಲ್ಲ, ವಯಸ್ಸು ಮುಂತಾದ ವಿವಾದಿತ ವಾಸ್ತವಾಂಶಗಳನ್ನು ಅಂತಿಮವಾಗಿ ನಿರ್ಧರಿಸಲು ಸಾಧ್ಯವಿಲ್ಲ ಹಾಗೂ ವಯಸ್ಸು ನಿರ್ಧಾರಕ್ಕೆ ಸಂಸತ್ತು ನಿಗದಿಪಡಿಸಿರುವ ಕ್ರಮ ಮೀರುವಂತಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟಪಡಿಸಿತು. ಆದರೆ ಇದೇ ವೇಳೆ, ಪರಸ್ಪರ ಸಮ್ಮತಿ ಇರುವ ಹದಿಹರೆಯದವರ ನಡುವಿನ ಪ್ರೇಮ ಸಂಬಂಧ ಪ್ರಕರಣಗಳಲ್ಲಿ ಪೋಕ್ಸೊ ಕಾಯಿದೆಯ ದುರುಪಯೋಗ ಎಂಬ ವ್ಯಾಪಕ ಹಾಗೂ ವೃದ್ಧಿಸುತ್ತಿರುವ ಸಮಸ್ಯೆ ಕುರಿತು ಸುಪ್ರೀಂ ಕೋರ್ಟ್ ವಿವರವಾಗಿ ಚರ್ಚಿಸಿತು.

ಸುಪ್ರೀಂ ನಿರ್ದೇಶನಗಳೇನು?

- ಪೋಕ್ಸೊ ಕಾಯಿದೆಯ ದುರುಪಯೋಗ ತಡೆಗಟ್ಟಲು ಕ್ರಮ ವಹಿಸಿ
- ಹದಿ ಹರೆಯದವರ ನೈಜ ಸಂಬಂಧ ಅಪರಾಧ ವ್ಯವಸ್ಥೆಯೊಳಗೆ ಬೇಡ
- ಇಂತಹ ಪ್ರಕರಣ ಇತ್ಯರ್ಥಕ್ಕೆ ರೋಮಿಯೋ-ಜ್ಯೂಲಿಯೆಟ್ ಅನುಚ್ಛೇದ ಆಗಲಿ
- ಅನುಚ್ಛೇದ ಜಾರಿ ಮಾಡಲು ಕೇಂದ್ರ ಸರಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳಲಿ

ಪ್ರತೀಕಾರದ ಉದ್ದೇಶ ಬೇಡ: ಕೋರ್ಟ್ ತನ್ನ ತೀರ್ಪಿನ ಪ್ರತಿಯನ್ನು ಕೇಂದ್ರ ಸರಕಾರದ ಕಾನೂನು ಕಾರ್ಯದರ್ಶಿಗೆ ಕಳುಹಿಸಲು ನಿರ್ದೇಶಿಸಿ, ಪೋಕ್ಸೊ ಕಾಯಿದೆಯ ದುರುಪಯೋಗ ತಡೆಗಟ್ಟಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದೆ. ಹದಿ ಹರೆಯದವರ ನೈಜ ಸಂಬಂಧಗಳನ್ನು ಅಪರಾಧ ವ್ಯವಸ್ಥೆಯೊಳಗೆ ತರದಂತೆ ರೋಮಿಯೋ-ಜ್ಯೂಲಿಯೆಟ್ ಅನುಚ್ಛೇದ ಪ್ರಮುಖ ಪರಿಹಾರವಾಗಬಹುದು ಎಂದು ಪೀಠ ಸಲಹೆ ನೀಡಿದೆ. ಇದಲ್ಲದೆ, ಇಂತಹ ಪ್ರಕರಣಗಳಲ್ಲಿ ವಕೀಲರ ಪಾತ್ರ ಅತ್ಯಂತ ಮಹತ್ವದ್ದೆಂದು ಹೇಳಿರುವ ಅದು. ಪ್ರತೀಕಾರದ ಉದ್ದೇಶ ಸ್ಪಷ್ಟವಾಗಿರುವ ಸಂದರ್ಭಗಳಲ್ಲಿ ಅಂಧವಾಗಿ ಪ್ರಕರಣಗಳನ್ನು ದಾಖಲಿಸದೆ, ವಕೀಲ ವರ್ಗ ಜರಡಿಯಂತೆ ಕಾರ್ಯ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದೆ.

ಬಾಲಕಿಯ ವಯಸ್ಸೇ ಸುಳ್ಳಿಗೆ ಹುನ್ನಾರ

ದೇಶದ ನ್ಯಾಯಾಲಯಗಳು ಅನೇಕ ಬಾರಿ ಗಮನಿಸಿರುವಂತೆ, ಪರಸ್ಪರ ಒಪ್ಪಿಗೆಯೊಂದಿಗೆ ಮತ್ತು ಸಮೀಪ ವಯಸ್ಸಿನ ಹದಿಹರೆಯದವರ ನಡುವಿನ ಸಂಬಂಧಗಳಿದ್ದರೂ, ಬಾಲಕನನ್ನು ಪೋಕ್ಸೊ ಕಾಯಿದೆಯ ಕಠಿಣ ವಿಧಿಗಳ ವ್ಯಾಪ್ತಿಗೆ ತರುವ ಉದ್ದೇಶದಿಂದ ಬಾಲಕಿಯ ವಯಸ್ಸನ್ನು ಸುಳ್ಳೇ 18ಕ್ಕಿಂತ ಕಡಿಮೆ ಎಂದು ತೋರಿಸಲಾಗುತ್ತಿದೆ ಎಂದು ಪೀಠ ಹೇಳಿದೆ. ಯುವಕರ ನಡುವಿನ ಸಂಬಂಧಗಳನ್ನು ವಿರೋಧಿಸುವ ಕುಟುಂಬಗಳು ಈ ಕಾಯಿದೆಯನ್ನು ಪ್ರತೀಕಾರ ಅಥವಾ ಒತ್ತಡದ ಸಾಧನವಾಗಿ ಬಳಸುತ್ತಿರುವುದು ಗಂಭೀರ ಅನ್ಯಾಯಕ್ಕೆ ಕಾರಣವಾಗುತ್ತಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ. ನಿಜವಾಗಿಯೂ ರಕ್ಷಣೆ ಅಗತ್ಯವಿರುವ ಮಕ್ಕಳು ಬಡತನ, ಭಯ ಅಥವಾ ಸಾಮಾಜಿಕ ಮುದ್ರೆಯ ಕಾರಣದಿಂದ ನ್ಯಾಯ ವ್ಯವಸ್ಥೆಯನ್ನು ತಲುಪಲಾಗದೆ ಉಳಿಯುತ್ತಿರುವಾಗ, ಅಧಿಕಾರ, ಶಿಕ್ಷಣ, ಸಾಮಾಜಿಕ ಹಾಗೂ ಆರ್ಥಿಕ ಬಲ ಹೊಂದಿರುವವರು ಕಾನೂನನ್ನು ತಮ್ಮ ಲಾಭಕ್ಕೆ ದುರುಪಯೋಗಪಡಿಸಿಕೊಳ್ಳುತ್ತಿರುವ ಸಮಾಜದ ಅಸಮಾನತೆಯನ್ನು ಪೀಠ ತೀವ್ರವಾಗಿ ಟೀಕಿಸಿದೆ.

ಬೃಹತ್ ಆರೋಗ್ಯ ಉಚಿತ ತಪಾಸಣೆ ಶಿಬಿರ ಆಯೋಜನೆ

ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್‌ನಿಂದ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಶಾಸಕ ಉದಯ್ ಗರುಡಾಚಾರ್ ಚಾಲನೆ ನೀಡಿದರು. ಎನ್.ನಾಗರಾಜು, ಬ್ಯಾಂಕ್ ಅಧ್ಯಕ್ಷ ಡಿ.ಆರ್. ವಿಜಯಸಾರಥಿ, ಉಪಾಧ್ಯಕ್ಷ ರಂಗಧಾಮ ಶೆಟ್ಟಿ ಇದ್ದರು.

ಬೆಂಗಳೂರು: ಶ್ರೀ ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನಿಂದ ನಗರದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಚಿಕ್ಕಪೇಟೆ ಶಾಸಕ ಉದಯ್ ಬಿ. ಗರುಡಾಚಾರ್ ಹಾಗೂ ಜಯನಗರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎನ್.ನಾಗರಾಜು, ಬ್ಯಾಂಕ್ ಅಧ್ಯಕ್ಷ ಡಿ.ಆರ್.ವಿಜಯಸಾರಥಿ, ಉಪಾಧ್ಯಕ್ಷ ರಂಗಧಾಮ ಶೆಟ್ಟಿ ಭಾಗವಹಿಸಿದರು.

ಶಾಸಕ ಉದಯ್ ಬಿ.ಗರುಡಾಚಾರ್ ಮಾತನಾಡಿ, ಸಹಕಾರ ವಲಯದ ಬ್ಯಾಂಕ್ ನಡೆಸುವುದು ಸುಲಭವಲ್ಲ, ಸಾರ್ವಜನಿಕರು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಸುಬ್ರಮಣ್ಯೇಶ್ವರ ಕೋ ಆಪರೇಟಿವ್ ಬ್ಯಾಂಕ್‌ಗೆ ಧನ ಸಹಾಯ ಮಾಡುವುದಾಗಿ ಹೇಳಿದರು.

ಡಿ.ಆರ್.ವಿಜಯಸಾರಥಿ ಮಾತನಾಡಿ, ನಮ್ಮ ಬ್ಯಾಂಕ್ ಸಮಾಜಮುಖಿ ಕಾರ್ಯಗಳು ಮಾಡುತ್ತಾ ಬಂದಿದೆ. ಗುರಿ ಮತ್ತು ಗುರುಗಳ ಆಶೀರ್ವಾದ ಮತ್ತು ಆರೋಗ್ಯವಂತರಾಗಿ ಇದ್ದಾಗ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ನಮ್ಮ ಬ್ಯಾಂಕ್ ವತಿಯಿಂದ ಪ್ರಥಮ ಬಾರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

> ರಾಷ್ಟ್ರೀಯ ಬ್ಯಾಂಕ್‌ಗಳು ಸಮಾಜಮುಖಿ ಕಾರ್ಯಗಳು ಮಾಡವುದಿಲ್ಲ, ಕೋ ಆಪರೇಟಿವ್ ಬ್ಯಾಂಕ್‌ಗಳು ಸ್ಥಳೀಯರು ಮತ್ತು ಸದಸ್ಯರಿಗೆ ಉತ್ತಮ ಸೇವೆ ಮತ್ತು ಸಮಾಜಕ್ಕೆ ಬೇಕಾದ ಕೆಲಸಗಳು ಮಾಡುತ್ತದೆ. ಸಮಾಜ ಸೇವೆ ಕೆಲಸಕ್ಕೆ ಎಲ್ಲರು ಕೈಜೋಡಿಸಬೇಕು. ಬ್ಯಾಂಕ್ ಅಭಿವೃದ್ಧಿ ಜತೆಯಲ್ಲಿ ಸದಸ್ಯರ ಕ್ಷೇಮಾಭಿವೃದ್ಧಿ ಕುರಿತು ಕೆಲಸ ಮಾಡಬೇಕು.
> -ಎನ್.ನಾಗರಾಜು

ನಮ್ಮ ಸದಸ್ಯರಿಗೆ ಖಾಸಗಿ ಆಸ್ಪತ್ರೆ ಜತೆಯಲ್ಲಿ ಒಪ್ಪಂದವಾಗಿದೆ. ಸದಸ್ಯರು ಮತ್ತು ಆಡಳಿತ ಮಂಡಳಿ ಜತೆಯಲ್ಲಿ ಉತ್ತಮ ಸಹಕಾರವಿರಬೇಕು. ಏಪ್ರಿಲ್ ತಿಂಗಳಲ್ಲಿ 25 ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ನಮ್ಮ ಸದಸ್ಯರ ಮಕ್ಕಳಿಗೆ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದರು.

ಹೃದಯ, ಕಿಡ್ನಿ, ನರರೋಗ (ನ್ಯೂರಾಲಜಿ), ಕಣ್ಣು,ಮೂಗು-ಕಿವಿ-ಗಂಟಲು (ಇಎನ್‌ಟಿ), ಮಕ್ಕಳ ವೈದ್ಯಕೀಯ (ಪೀಡಿಯಾಟ್ರಿಕ್ಸ್) ಮತ್ತು ಸಾಮಾನ್ಯ ತಪಾಸಣೆಯನ್ನು ವೈದೇಹಿ ಆಸ್ಪತ್ರೆ ಸಹಯೋಗ ನೀಡಿತು.

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 31.01.2026 (ಬೆಳಿಗ್ಗೆ 10.30 ರಿಂದ 11.00 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,17,76,853.78 (ರೂಪಾಯಿ ಒಂದು ಕೋಟಿ ಹದಿನೇಳು ಲಕ್ಷದ ಎಪ್ಪತ್ತಾರು ಸಾವಿರದ ಎಂಟುನೂರ ಐವತ್ತಮೂರು ಮತ್ತು ಎಪ್ಪತ್ತೆಂಟು ಪೈಸೆ ಮಾತ್ರ) ಜೊತೆಗೆ ದಿನಾಂಕ: 07.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: **(1) ಎಸ್‌ಡಿಡಿಪಿ ಎಂಟರ್‌ಪ್ರೈಸಸ್,** ನಂ.4, ಖಾತಾ ನಂ.149 1, ಆರ್ ಎಸ್ ಪಾಳ್ಯ, ಬೆಂಗಳೂರು-560033. **(2) ಲಕ್ಷ್ಮೀಪತಿ ವಿ, 253, 8ನೇ ಕ್ರಾಸ್,** ಸೇಂಟ್ ಆನ್ಸ್ ಸ್ಕೂಲ್ ರಸ್ತೆ, ಭೋವಿ ಕಾಲೋನಿ, ದೊಡ್ಡಮ್ಮ ದೇವಸ್ಥಾನದ ಹತ್ತಿರ, ರಾಮ ಮೂರ್ತಿ ನಗರ, ಬೆಂಗಳೂರು- 560016. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 30.01.2026 ರ ಸಂಜೆ 5.00 ಗಂಟೆಯೊಳಗೆ** ತೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ ನಿವೇಶನ ನಂ.70, ಖಾತಾ ನಂ.166, ಮನೆಯ ಲಿಸ್ಟ್ ನಂ.193, ಈ ಆಸ್ತಿಯು ಐಟಿಐ ಸೂಚಿಸಲಾದ ಪ್ರದೇಶ, ಕೌಡನಹಳ್ಳಿ ಗ್ರಾಮ, ಕೆ ಆರ್ ಪುರ, ಬೆಂಗಳೂರು ಪೂರ್ವ ತಾಲ್ಲೂಕು ಹೋಬಳಿಯಲ್ಲಿದೆ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 33 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 45 ಅಡಿ, ಒಟ್ಟು ವಿಸ್ತೀರ್ಣ 1485 ಚದರ ಅಡಿ ಮತ್ತು ಪ್ರಸ್ತುತ ಆಸ್ತಿಯು ಬಿಬಿಎಂಪಿ ವ್ಯಾಪ್ತಿಯಲ್ಲಿದ್ದು, ಮುನಿಸಿಪಲ್ ನಂ.70, ಹೆಚ್‌ಎಲ್ ನಂ.166, ಬಿಬಿಎಂಪಿ ವಾರ್ಡ್ ನಂ.26, ಬೆಂಗಳೂರಿನಲ್ಲಿದೆ ಮತ್ತು ಈ ಆಸ್ತಿಯು ಶ್ರೀ ವಿ. ಲಕ್ಷ್ಮೀಪತಿ ಬಿನ್ ಲೇಟ್ ಶ್ರೀ ವೆಂಕಟಪ್ಪ ಅವರ ಹೆಸರಿನಲ್ಲಿದೆ ಮತ್ತು ಪ್ರಸ್ತುತ ಭದ್ರತಾ ಸಾಲ ನೀಡಲು ಉದ್ದೇಶಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀಮತಿ ಕಮಲಮ್ಮರವರ ನಿವೇಶನ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಸರ್ಕಾರಿ ಆಸ್ತಿ, ದಕ್ಷಿಣಕ್ಕೆ: ನಿವೇಶನ ನಂ.69.	₹. 104.30 ಲಕ್ಷಗಳು	₹. 10.43 ಲಕ್ಷಗಳು	₹. 1.00 ಲಕ್ಷಗಳು

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **9483544116 ಮತ್ತು 8598009010** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 08.01.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ-1 ಶಾಖೆ,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001
ದೂ: 080-25310066, ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಜೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯೂರಿಟೈಜೇಷನ್ ಆಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸ್ಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ ಭದ್ರತಾ ಸಾಲದಾತರಿಗೆ ಈ ಕೆಳಗೆ ವಿವರಿಸಿದ ಅಡಮಾನಾದ/ವಿಧಿಸಿದ ಚರಾಸ್ತಿ/ಸ್ಥಿರಾಸ್ತಿಯನ್ನು ಅಧಿಕೃತ ಅಧಿಕಾರಿ, **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು **ದಿನಾಂಕ: 31.01.2026 (ಬೆಳಿಗ್ಗೆ 10.30 ರಿಂದ 11.30 ರವರೆಗೆ)** ರಂದು ಸ್ವತ್ತನ್ನು **"ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ"** ಆಧಾರದಲ್ಲಿ ಸಾಲ ವಸೂಲಾತಿಗಾಗಿ ಮಾರಾಟ ಮಾಡಲಾಗುವುದು ಸಂದಾಯವಾಗತಕ್ಕ ಮೊಬಲಗು: **ರೂ. 1,06,82,99,867.68/- ಜೊತೆಗೆ ದಿನಾಂಕ: 07.01.2026** ರಂದು ಇದ್ದಂತೆ ಮತ್ತು ಜೊತೆಗೆ ಬಡ್ಡಿ ಇತರೆ ಖರ್ಚು ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಋಣ ಬಾಧ್ಯವಾಗಿರುತ್ತದೆ. **ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ರವರಿಂದ ಸಾಲಗಾರರಾದ: (1) **ಮೆ॥ ಪಾಲಿಬಾಂಡ್ ಆರ್ಗಾನಿಕ್ಸ್ ಪ್ರೈವೇಟ್ ಲಿಮಿಟೆಡ್** "ನಾರಂಗ್ ಛೇಂಬರ್ಸ್" ಯೂನಿಟ್ ನಂ.4 & 5, 4ನೇ ಮಹಡಿ, ಕಾರ್ಪೊರೇಷನ್ ನಂ.2/15 & 16 ನರಸಿಂಹರಾಜ ರಸ್ತೆ, ಬೆಂಗಳೂರು-560002. (2) **ಶ್ರೀ ದಿನೇಶ್ ವಿ ಬಲಿಗಾ,** ನಂ.1268, 2ನೇ ಹಂತ, ಬಿಟಿಎಂ ಲೇಔಟ್, ಬೆಂಗಳೂರು-560076. (3) **ಶ್ರೀ ಬಾಲಕೃಷ್ಣ** ವಿ ಬಲಿಗಾ, ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. (4) **ಶ್ರೀ ಹರೀಶ್ ವಿ ಬಲಿಗಾ,** ನಂ.1267, ಗುರುರಾಜ್, 1ನೇ ಮುಖ್ಯರಸ್ತೆ, ಬಿಟಿಎಂ ಲೇಔಟ್ 2ನೇ ಹಂತ, ಬೆಂಗಳೂರು-560076. (5) **ಶ್ರೀ ಜಗದೀಶ್ ವಿ ಬಲಿಗಾ,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. (6) **ಶ್ರೀಮತಿ ದಿವ್ಯಾ ಬಲಿಗಾ,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076. (7) **ಶ್ರೀ ಎನ್ ವಿ ಪವನ್ ರಾಮ್,** ನಂ.35, ಸ್ನೇಹ, 4ನೇ ಕ್ರಾಸ್, ವೆಂಕಟಾದ್ರಿ ಲೇಔಟ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560076.ಇವರುಗಳಿಗೆ ಸಾಲವನ್ನು ನೀಡಿರುತ್ತದೆ.
ಅರ್ನೆಸ್ಟ್ ಹಣವನ್ನು **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ ಮೂಲಕ ನೇರವಾಗಿ ಅಥವಾ ಚಲನ್ ಅನ್ನು ರಚಿಸುವ ಮುಖಾಂತರ RTGS/NEFT ಮೂಲಕ ಖಾತೆಯ ವಿವರಗಳಲ್ಲಿ ನಮೂದಿಸಿರುವ ಖಾತೆ ವಿವರಗಳ ಪ್ರಕಾರ **ದಿನಾಂಕ: 30.01.2026ರ ಸಂಜೆ 5.00 ಗಂಟೆಯೊಳಗೆ** ತೇವಣಿ ಮಾಡಬೇಕು.

(₹. ಲಕ್ಷಗಳಲ್ಲಿ)

ಕ್ರ ಸಂ	ಸ್ಥಿರಾಸ್ತಿ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚುತ್ತಿರುವ ಮೌಲ್ಯ
1	ವಾಣಿಜ್ಯ ಅಪಾರ್ಟ್‌ಮೆಂಟ್ ಒಳಗೊಂಡಿರುವ ಯೂನಿಟ್ ನಂ.4, 4ನೇ ಮಹಡಿ ಸಬ್ ನಂ.2/15, "ನಾರಂಗ್ ಛೇಂಬರ್ಸ್" ಎಂದು ಕರೆಯಲ್ಪಡುವ ಈ ಕಟ್ಟಡದ ಪಿಐಡಿ ನಂ.45-47-2/15, ಜೊತೆಗೆ ಆಸ್ತಿ ನಂ.2/3 ರಲ್ಲಿದೆ. ವಾರ್ಡ್ ನಂ.47, ನರಸಿಂಹರಾಜ ರಸ್ತೆ, ಬೆಂಗಳೂರು-560002, ವಿಸ್ತೀರ್ಣ 415 ಚದರ ಅಡಿಗಳ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನು ಜೊತೆಗೆ 89.52 ಚದರ ಅಡಿ ಅವಿಭಜಿತ ಪಾಲು ಹೊಂದಿದ್ದು ಮತ್ತು ಫ್ಲಾಟ್‌ನ ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ: ಸಾಮಾನ್ಯ ಮಾರ್ಗ, ಪೂರ್ವಕ್ಕೆ: ಯೂನಿಟ್‌ನ ಸಬ್ ನಂ.2/16 ಮತ್ತು ಪಶ್ಚಿಮಕ್ಕೆ : ಯೂನಿಟ್‌ನ ಸಬ್ ನಂ.2/14 ಮತ್ತು ನಿವೇಶನ, ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ಲೇನ್, ಪೂರ್ವಕ್ಕೆ: ಖಾಸಗಿ ಆಸ್ತಿ ಮತ್ತು ಪಶ್ಚಿಮಕ್ಕೆ : ಕುಂಬಾರಗುಂಡಿ ಆಸ್ತಿ. **Coordinates of the property Latitude - 12.9635787, Longitude - 77.5843143**	₹. 27.00	₹. 2.70	₹. 1.00
	ವಾಣಿಜ್ಯ ಅಪಾರ್ಟ್‌ಮೆಂಟ್ ಒಳಗೊಂಡಿರುವ ಯೂನಿಟ್ ನಂ.5, 4ನೇ ಮಹಡಿ ಸಬ್ ನಂ.2/16, "ನಾರಂಗ್ ಛೇಂಬರ್ಸ್" ಎಂದು ಕರೆಯಲ್ಪಡುವ ಈ ಕಟ್ಟಡದ ಆಸ್ತಿ ನಂ.2/3, ವಾರ್ಡ್ ನಂ.47, ನರಸಿಂಹರಾಜ ರಸ್ತೆ, ಬೆಂಗಳೂರು-560002, ವಿಸ್ತೀರ್ಣ 965 ಚದರ ಅಡಿಗಳ ಸೂಪರ್ ಬಿಲ್ಟ್‌ಅಪ್ ಪ್ರದೇಶವನ್ನು ಜೊತೆಗೆ 203.78 ಚದರ ಅಡಿ ಅವಿಭಜಿತ ಪಾಲು ಹೊಂದಿದ್ದು ಮತ್ತು ಫ್ಲಾಟ್‌ನ ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ: ಯೂನಿಟ್‌ನ ಸಬ್ ನಂ.2/17, ಪೂರ್ವಕ್ಕೆ: ಖಾಸಗಿ ಆಸ್ತಿ, ಮತ್ತು ಪಶ್ಚಿಮಕ್ಕೆ : ಯೂನಿಟ್‌ನ ಸಬ್ ನಂ.2/15 ಮತ್ತು ನಿವೇಶನ, ಚಕ್ಕುಬಂದಿ: ಉತ್ತರಕ್ಕೆ : ನರಸಿಂಹರಾಜ ರಸ್ತೆ, ದಕ್ಷಿಣಕ್ಕೆ : ಕನ್ಸರ್ವೆನ್ಸಿ ಲೇನ್, ಪೂರ್ವಕ್ಕೆ: ಖಾಸಗಿ ಆಸ್ತಿ ಮತ್ತು ಪಶ್ಚಿಮಕ್ಕೆ : ಕುಂಬಾರಗುಂಡಿ ಆಸ್ತಿ. **Coordinates of the property Latitude - 12.9635787, Longitude - 77.5843143**	₹. 64.00	₹. 6.40	₹. 1.00
	ಒಟ್ಟು	₹. 91.00	₹. 9.10	

ಎನ್ಕಂಬರೆನ್ಸ್ ಯಾವುದಾದರೂ ಇದ್ದಲ್ಲಿ : ಬ್ಯಾಂಕಿನ ಗಮನಕ್ಕೆ ಬಂದಿಲ್ಲ.
ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೋವೈಡೆಡ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: **(www.canarabank.com)** ನಲ್ಲಿ ಒದಗಿಸಲಾಗಿದೆ ಅಥವಾ **M/s PSB Alliance Private Limited (https://baanknet.com/)** ಪೋರ್ಟಲ್‌ನ ಇ-ವ್ಯಾಲೆಟ್ **ಮತ್ತು ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ-1 ಶಾಖೆ, ಬೆಂಗಳೂರು** ಮೊಬೈಲ್ ಸಂಖ್ಯೆ: **080-25310066, 8598009010 ಮತ್ತು 9483544116** ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 08.01.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್

ಮೂರನೇ ಮದುವೆಯಾದ ಯುವತಿ ವಿರುದ್ಧ ದೂರು ಕೊಟ್ಟ ಗಂಡ

ಬೀದಿಗೆ ಬಂತು ಬೆತ್ತಲೆ ಫೋಟೋ ಕಿತ್ತಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೆಲವು ದಿನಗಳ ಹಿಂದೆ ಬೆಂಗಳೂರಿನ ವಿಲ್ಸನ್ ಗಾರ್ಡನ್ ವ್ಯಾಪ್ತಿಯಲ್ಲಿ ಯುವತಿಯೊಬ್ಬರು ಪತಿ ಮೇಲೆ ವಿಚಿತ್ರ ವರ್ತನೆಯ ಆರೋಪ ಮಾಡಿದ್ದರು. ಅಲ್ಲದೇ ಕೇಂದ್ರ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ಕೂಡ ನೀಡಿದ್ದರು. ಇದೀಗ ಆ ಮಹಿಳೆ ವಿರುದ್ಧ ಆರೋಪಿತ ಪತಿ ಗಂಭೀರ ಆರೋಪ ಮಾಡಿದ್ದು, ಪ್ರಕರಣಕ್ಕೆ ಟ್ವಿಸ್ಟ್ ಸಿಕ್ಕಿದೆ.

ಆರೋಪಿಯ ಹೆಸರು ಮಂಜುನಾಥ್. ಆಕೆಗೆ ನಾನು ಮೂರನೇ ಪತಿ. ಈಗಾಗಲೇ ಇಬ್ಬರನ್ನು ಮದುವೆ ಆಗಿ ವಂಚಿಸಿದ್ದಾಳೆ. ಇದೀಗ ನನಗೆ ಮೋಸ ಮಾಡಲು ಹೊರಟಿರುವ ಆಕೆ, ನಾಲ್ಕನೇ ಗಂಡ ಬೇಕಾಗಿದೆ. ಪೊಲೀಸ್ ಅಧಿಕಾರಿಗಳು ದಯವಿಟ್ಟು ಆಕೆಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿ ವಿಲ್ಸನ್ ಗಾರ್ಡನ್ ಪೊಲೀಸರಿಗೆ ದೂರು ನೀಡಿದ್ದಾನೆ.

ಆಕೆಯ ಕೆಲಸ ಬರೀ ಶೋಕಿ ಮಾಡುವುದು. ಗಂಡಸರ ಹಣವನ್ನು ಬಳಸಿಕೊಂಡು ಮೋಸ ಮಾಡುತ್ತಿದ್ದಾಳೆ. ಮೊದಲ ಪತಿಯನ್ನು ಚೆನ್ನಾಗಿ ಬಳಸಿಕೊಂಡ ನಂತರ ಆತ ಪುರುಷನಲ್ಲನೆಂದು ಬಿಟ್ಟಿದ್ದಾಳೆ. ಎರಡನೇ ಮದುವೆಯಾಗಿ ಆತನ ಜತೆ ಜಾಲಿ ಟ್ರಿಪ್ ಮಾಡಿದ್ದಾಳೆ. ಕೊನೆಗೆ ಎರಡನೇ ಗಂಡನಿಗೂ ಕೈಕೊಟ್ಟು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧವೂ ದೂರು ಕೊಟ್ಟಿದ್ದಾಳೆ.

ಈ ಪ್ರಕರಣ ಬಾಕಿ ಇರುವಾಗಲೇ ನನಗೆ ಮೋಸ ಮಾಡಲು ಹೊರಟಿದ್ದಾಳೆ. ಆಕೆಯ ಈ ಬಂಡವಾಳ ನನಗೆ ಗೊತ್ತಿರಲಿಲ್ಲ. ನನ್ನ ಬಳಿ ಬಂದು ಮದುವೆ ಎಂದಾಗ ಆಕೆಗೆ ಸಂಬಂಧಿಸಿದ ಪ್ರಮುಖ ದಾಖಲಾತಿ ಕೇಳಿದೆ. ಆದರೆ ಅವರು ನೀಡಲಿಲ್ಲ. ಕೇವಲ ದೇವಸ್ಥಾನದಲ್ಲಿ ಹಾರ ಬದಲಿಸಿಕೊಂಡೆವು. ಆದರೆ ಅಧಿಕೃತವಾಗಿ ದಾಖಲಾತಿ ಮಾಡಿಸಬೇಕು ಎಂದು ನಾನು ಹೇಳಿದ್ದೆ. ಆದರೆ, ಆ ಯುವತಿ ಹಾಗೂ ಆಕೆಯ ಮನೆಯವರು ಯಾವುದೇ ದಾಖಲಾತಿ ನೀಡಿಲ್ಲ. ಹಾರ ಬದಲಿಸಿಕೊಂಡ ಬಳಿಕ 12 ಲಕ್ಷ ಹಣ ನೀಡಿ ಮನೆಯನ್ನು ಲೀಸ್‌ಗೆ ಕೊಡಿಸಿದ್ದೆ. ನನ್ನಿಂದ 30 ಲಕ್ಷ ಹಣ, 50 ಗ್ರಾಂ ಚಿನ್ನ, ಐಫೋನ್, ಐಪ್ಯಾಡ್, ಟ್ಯಾಬ್‌ಗಳನ್ನು ಪಡೆದುಕೊಂಡಿದ್ದಾಳೆ ಎಂದು ಆರೋಪಿಸಿದ್ದಾನೆ.

ಪತಿಯಲ್ಲ ವಿಕೃತ ಕಾಮಿ ಎಂದ ಯುವತಿ

ನನಗೆ ಮಂಜುನಾಥ್ ಮದುವೆಗೂ ಮೊದಲು ಎರಡು ಮದುವೆ ಆಗಿದ್ದು ನಿಜ. ಡಿವೋರ್ಸ್ ಆಗಿದೆ. ಆ ಎಲ್ಲ ವಿಚಾರವನ್ನು ತಿಳಿಸಿಯೇ ಮಂಜುನಾಥ್ ಜತೆ ಮದುವೆ ಆಗಲು ಒಪ್ಪಿಕೊಂಡೆ. ನಮ್ಮ ಮದುವೆಗೆ ಮಂಜುನಾಥ್ ಕುಟುಂಬ ಕೂಡ ಒಪ್ಪಿಕೊಂಡಿತ್ತು. ನಾನು ಎರಡನೇ ಗಂಡನಿಗೆ ವಿಚ್ಛೇದನ ನೀಡಲು ಕಾರಣ ಈತನೇ. ಆತನಿಗೆ ನನ್ನ ಮೇಲೆ ಪ್ರೀತಿಯಾಗಿತ್ತು. 2ನೇ ಗಂಡ ಜತೆಯಲ್ಲಿದ್ದಾಗ್ಲೇ ಪ್ರಪೋಸ್ ಮಾಡಿದ್ದ. ಈಕೆ ನನಗೆ ಬೇಕು. ಆಕೆಯನ್ನು ಬಿಟ್ಟುಬಿಡು ಎಂದು ಹೆದರಿಸಿ, ಆತನಿಂದ ವಿಚ್ಛೇದನ ಕೊಡಿಸಿದ ಬಳಿಕವೇ ಮನೆಯವರನ್ನು ಒಪ್ಪಿಸಿ ಮದುವೆಯಾದೆವು. ಕಳೆದ ಸೆಪ್ಟೆಂಬರ್‌ನಲ್ಲಿ ನಾವು ಮದುವೆ ಆಗಿದ್ದೇವೆ. ಮೂರು ತಿಂಗಳ ನನ್ನ ಜತೆ ಸಂಸಾರ ಮಾಡಿದ್ದಾನೆ. ಕೆಲ ತಿಂಗಳ ಹಿಂದೆ ಚೆನ್ನಾಗಿದ್ದ ಮಂಜುನಾಥ್ ಇತ್ತೀಚೆಗೆ ವಿಚಿತ್ರ ವರ್ತನೆ ಮಾಡಲು ಶುರುಮಾಡಿದ್ದ. ಫೋನ್ ನೋಡಿ ಲೈಂಗಿಕ ಕ್ರಿಯೆಗೆ ಒತ್ತಾಯ ಮಾಡುತ್ತಿದ್ದ. ಮನೆಯಲ್ಲಿ, ಪ್ಯಾಸೆಜ್‌ನಲ್ಲಿ ಬೆತ್ತಲೆಯಾಗಿ ಓಡಾಟ ನಡೆಸ್ತಿದ್ದ. ನನ್ನ ಅಪ್ಪ, ಅಮ್ಮನ ಮುಂದೆಯೂ ಬೆತ್ತಲೆಯಾಗಿ ಓಡಾಡುತ್ತಿದ್ದ. ನಿಜ ಹೇಳಬೇಕು ಅಂದರೆ ಇವನು ಪತಿಯಲ್ಲ ವಿಕೃತ ಕಾಮಿ. ಈತನ ಈ ರೀತಿಯ ವರ್ತನೆಗಳನ್ನು ಸಹಿಸಲಾಗದೇ ಕೇಂದ್ರ ವಿಭಾಗದ ಮಹಿಳಾ ಠಾಣೆಗೆ ದೂರು ನೀಡಿದ್ದೆ. ಅವರ ಆರೋಪಕ್ಕೆ ನಾನು ಕೋರ್ಟ್‌ನಲ್ಲಿ ಉತ್ತರ ಕೊಡ್ತೀನಿ. ನಾನು ಈತನ ಸುಮ್ಮನೆ ಬಿಡಲ್ಲ. ನಾಳೆ ನನಗೆ ಏನಾದರೂ ಆದರೆ ಈತನೇ ಕಾರಣ ಎಂದು ಯುವತಿ ಆರೋಪಿಸಿದ್ದಾಳೆ.

ಪೊಲೀಸ್ ತನಿಖೆಯಲ್ಲಿ ರಹಸ್ಯ ಬಯಲು

ಟೆಕ್ಕಿ ಶರ್ಮಿಳಾ ಸಾವು ಕೊಲೆ

ಬೆಂಗಳೂರು: ರಾಮಮೂರ್ತಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಮಂಗಳೂರಿನ ಟೆಕ್ಕಿ ಶರ್ಮಿಳಾ ಸಾವಿನ ಪ್ರಕರಣ ತಿರುವು ಪಡೆದುಕೊಂಡಿದೆ. ಶರ್ಮಿಳಾ ಶಾರ್ಟ್ ಸರ್ಕ್ಯೂಟ್‌ನಿಂದ ಉಂಟಾದ ಬೆಂಕಿ ಅವಘಡದಲ್ಲಿ ಉಸಿರುಗಟ್ಟಿ ಸಾವನ್ನಪ್ಪಿಲ್ಲ. ಬದಲಾಗಿ ಯುವಕನೊಬ್ಬ ಕೊಲೆ ಮಾಡಿ ಬಳಿಕ ಸಾಕ್ಷ್ಯ ನಾಶ ಮಾಡಲು ಮನೆಗೆ ಬೆಂಕಿ ಇಟ್ಟಿದ್ದಾನೆ ಎಂಬ ಅಂಶ ತನಿಖೆಯಲ್ಲಿ ಬಯಲಿಗೆ ಬಂದಿದೆ.

ಅಪರಾಧ ಸುದ್ದಿಗಳು

ಈ ಸಂಬಂಧ ಶರ್ಮಿಳಾ ಪ್ರಿಯಕರ ಕೇರಳ ಮೂಲದ ಕರ್ನಲ್ ಕುರೈ ಎಂಬುವವನನ್ನು ಪೊಲೀಸರು ಬಂಧಿಸಿದ್ದಾರೆ. 34 ವರ್ಷದ ಟೆಕ್ಕಿ ಶರ್ಮಿಳಾಳನ್ನು ಒನ್ ಸೈಡ್ ಪ್ರೀತಿ ಮಾಡುತ್ತಿದ್ದ ಎದುರು ಮನೆಯ ಕೇರಳ ಮೂಲದ 18 ವರ್ಷದ ಯುವಕ ಕರ್ನಲ್ ಕುರೈ ಕೊಲೆಗಾರ ಎಂದು ಬಯಲಾಗಿದೆ. ತನ್ನ ವಯಸ್ಸಿಗಿಂತ ದೊಡ್ಡವಳಾಗಿದ್ದ ಟೆಕ್ಕಿ ಶರ್ಮಿಳಾ ಮೇಲೆ ಕರ್ನಲ್ ಕುರೈಗೆ ಪ್ರೀತಿ ಆಗಿದೆ. ಪ್ರೀತಿಯ ವಿಚಾರವನ್ನು ಶರ್ಮಿಳಾಗೆ ಹೇಳಿರಲಿಲ್ಲ. ತಾನೇ ಮನಸ್ಸಲ್ಲಿ ಇಟ್ಟುಕೊಂಡು ಕೊನೆಗೆ ಆಕೆಯನ್ನು ಭೀಕರವಾಗಿ ಹತ್ಯೆಗೈದಿದ್ದಾನೆ.

ಏನಿದು ಪ್ರಕರಣ?: ಜ. 3ರಂದು ರಾತ್ರಿ ಸುಮಾರು 11 ಗಂಟೆ ಸುಮಾರಿಗೆ ಮನೆಯ ಒಂದು ಕೋಣೆಯಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ದಟ್ಟವಾದ ಹೊಗೆ ಆವರಿಸಿತ್ತು. ಬೆಂಕಿ ಕಾಣಿಸಿಕೊಂಡ ಕೂಡಲೇ ಶರ್ಮಿಳಾ ಆ ಕೋಣೆಯತ್ತ ತೆರಳಲು ಯತ್ನಿಸಿದ್ದಾರೆ. ಕತ್ತಲೆ ಮತ್ತು ದಟ್ಟ ಹೊಗೆಯಿಂದಾಗಿ ಕಿಟಕಿ ಅಥವಾ ಬಾಗಿಲು ತೆರೆಯಲು ಸಾಧ್ಯವಾಗದೆ, ಶರ್ಮಿಳಾ ಉಸಿರುಗಟ್ಟಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂಬ ಪ್ರಾಥಮಿಕ ಮಾಹಿತಿ ಹೊರಬಿದ್ದಿತ್ತು. ಸ್ಥಳೀಯರು ನೀಡಿದ ಮಾಹಿತಿ ಮೇರೆಗೆ ಅಗ್ನಿಶಾಮಕ ದಳ ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸಿದ್ದರು. ನಂತರ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿತ್ತು. ತನಿಖೆ ವೇಳೆ ಟೆಕ್ಕಿ ಶರ್ಮಿಳಾ ಕೊಲೆ ಎಂಬುದು ಬೆಳಕಿಗೆ ಬಂದಿದೆ.

ತಾಯಿ ಮೇಲಿನ ಕೋಪಕ್ಕೆ ಮಗುವಿನ ಮೇಲೆ ಕ್ರೌರ್ಯ

6 ವರ್ಷದ ಮಗುವಿನ ಹತ್ಯಾಚಾರ

ಬೆಂಗಳೂರು: ವೈಟ್‌ಫೀಲ್ಡ್‌ನಲ್ಲಿ ಇತ್ತೀಚೆಗೆ ಆರು ವರ್ಷದ ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಲು ಮಗುವಿನ ತಾಯಿಯ ಮೇಲಿದ್ದ ದ್ವೇಷವೇ ಕಾರಣ ಎಂಬ ಆಘಾತಕಾರಿ ಸಂಗತಿ ಬಯಲಾಗಿದೆ.

ಪ್ರಕರಣದಲ್ಲಿ ಬಂಧಿತನಾಗಿರುವ ಆರೋಪಿ ಯೂಸಫ್ ಮೀರ್‌ನನ್ನು ಪೊಲೀಸರು ತೀವ್ರ ವಿಚಾರಣೆಗೆ ಒಳಪಡಿಸಿದ್ದು, ಮಗುವನ್ನು ಅಪಹರಿಸಿ ಅತ್ಯಾಚಾರ ಎಸಗಿದ ನಂತರ ತಾನೇ ಕತ್ತು ಹಿಸುಕಿ ಕೊಲೆ ಮಾಡಿದ್ದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ. ಆರೋಪಿಯು ವೈಟ್‌ಫೀಲ್ಡ್‌ನಲ್ಲಿ ವಾಸಿಸುತ್ತಿದ್ದು ಬಾಲಕಿಯ ತಾಯಿಗೆ ಪರಿಚಿತನಾಗಿದ್ದ. ಕ್ಷುಲ್ಲಕ ವಿಚಾರಗಳಿಗೆ ಆಗಾಗ್ಗೆ ಜಗಳ ಮಾಡುತ್ತಿದ್ದ. ಇದೇ ದ್ವೇಷದ ಹಿನ್ನೆಲೆಯಲ್ಲಿ ಆರು ವರ್ಷದ ಮಗುವನ್ನು ಅಪಹರಿಸಿ, ಲೈಂಗಿಕ ದೌರ್ಜನ್ಯ ಎಸಗಿದ ಮೇಲೆ ಪ್ಲಾಸ್ಟಿಕ್ ವೈರ್‌ನಿಂದ ಕತ್ತು ಬಿಗಿದು ಕೊಲೆ ಮಾಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ಯುಸೂಫ್ ಮೀರ್‌ನ ವಿರುದ್ಧ ಈಗಾಗಲೇ ಎರಡು ಗಂಭೀರ ಪ್ರಕರಣಗಳು ದಾಖಲಾಗಿವೆ. ಪಶ್ಚಿಮ ಬಂಗಾಳದಲ್ಲಿ ಒಂದು ಪೋಕ್ಸೋ ಪ್ರಕರಣ ಹಾಗೂ ಮತ್ತೊಂದು ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿದೆ. ಬೆಂಗಳೂರಿನಲ್ಲಿ ಬಾಲಕಿಯ ಅತ್ಯಾಚಾರ ಹಾಗೂ ಕೊಲೆಗೆ ಸಂಬಂಧಿಸಿದಂತೆ ಆರೋಪಿಯ ವಿರುದ್ಧ ಪೋಕ್ಸೋ ಕಾಯ್ದೆ ಸೇರಿದಂತೆ ಹಲವು ಗಂಭೀರ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ.

ಪ್ಲಾಸ್ಟಿಕ್ ಚೀಲದಲ್ಲಿ ಚರಂಡಿಗೆ ಮೃತದೇಹ

ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಬಳಿಕ ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ರಸ್ತೆ ಬದಿಯ ಚರಂಡಿಗೆ ಎಸೆದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿ ನಾಪತ್ತೆಯಾದ ಒಂದು ದಿನದ ನಂತರ ಪೋಷಕರು ವೈಟ್‌ಫೀಲ್ಡ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ದಾಖಲಾದ 12 ಗಂಟೆಗಳೊಳಗೆ ರಸ್ತೆ ಬದಿಯ ಚರಂಡಿಯಲ್ಲಿ ಪ್ಲಾಸ್ಟಿಕ್ ಚೀಲದೊಳಗೆ ಬಾಲಕಿಯ ಮೃತದೇಹ ಪತ್ತೆಯಾಗಿತ್ತು. ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸಿದಾಗ ಅತ್ಯಾಚಾರ ನಡೆದಿರುವುದು ದೃಢಪಟ್ಟಿತ್ತು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು, ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿ, ಪಶ್ಚಿಮ ಬಂಗಾಳದಲ್ಲಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿ ಕರೆತಂದಿದ್ದಾರೆ.

ಯುವಕನ ವಿವಸ್ತ್ರ ವಿಡಿಯೊ ಇಟ್ಟುಕೊಂಡು 1.5 ಲಕ್ಷ ರು. ಹಣ ಸುಲಿಗೆ

ಎಐ ಬೆಡಗಿಗಾಗಿ ಬೆತ್ತಲಾದವನಿಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ರಾಜ್ಯದಲ್ಲಿ ಡೇಟಿಂಗ್ ಅಪ್ಲಿಕೇಶನ್‌ಗಳಿಂದ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದೆ. ಯುವಕನೊಬ್ಬ ಡೇಟಿಂಗ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಬಳಸಿ ರಚಿಸಲಾದ ಇಶಾನಿ ಹೆಸರಿನ ಪ್ರೊಫೈಲ್‌ನಿಂದ ಬಂದ ರಿಕ್ವೆಸ್ಟ್‌ಗೆ ಕ್ಲಿಕ್ ಮಾಡಿದ್ದಾನೆ. ಈ ಇಶಾನಿ ಎಂಬ ಎಐ ಹುಡುಗಿ, ಯುವಕನನ್ನು ವಿವಸ್ತ್ರಗೊಳಿಸಿ, ಆ ವಿಡಿಯೊವನ್ನು ಇಟ್ಟುಕೊಂಡು ಹಣಕ್ಕೆ ಬೇಡಿಕೆ ಇಟ್ಟಿದ್ದಾಳೆ. ಇದರಿಂದ ಭಯಗೊಂಡ ಯುವಕ ನಕಲಿ ಖಾತೆಗೆ ಒಟ್ಟು 1.5 ಲಕ್ಷ ರು. ವರ್ಗಾಯಿಸಿದ್ದಾನೆ.



ಈಜಿಪುರದ ಈ ಯುವಕ, ಖಾಸಗಿ ಸಂಸ್ಥೆಯಲ್ಲಿ ಕ್ಲೌಡ್ ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ಜನವರಿ 5 ರಂದು ಡೇಟಿಂಗ್ ಆ್ಯಪ್‌ನಲ್ಲಿ ಪ್ರೊಫೈಲ್ ರಚಿಸಿದ ತಕ್ಷಣ ಇಶಾನಿ ಎಂಬ ಯುವತಿಯಿಂದ ರಿಕ್ವೆಸ್ಟ್ ಬಂದಿದೆ. ಇಬ್ಬರು ಏಕಾಂತವಾಗಿ ಮಾತನಾಡಲು ಶುರು ಮಾಡಿದ್ದರು. ಖಾಸಗಿ ವಿಚಾರಗಳನ್ನು ಹಂಚಿಕೊಂಡಿದ್ದರು. ನಂತರ ಈ ಇಬ್ಬರು ಕೂಡ ಮೊಬೈಲ್ ನಂಬರ್ ಶೇರ್ ಮಾಡಿಕೊಂಡು ಅಲ್ಲಿಯೂ ಮಾತನಾಡಲು ಶುರು ಮಾಡಿಕೊಂಡಿದ್ದರು. ಅದೇ ದಿನ ಈ ಯುವಕನಿಗೆ ಯುವತಿ ಕಡೆಯಿಂದ ವಿಡಿಯೊ ಕಾಲ್ ಬಂದಿದೆ. ಬಟ್ಟೆಯನ್ನು ಬಿಚ್ಚಿ, ಆತನ ಮುಂದೆ ಬೆತ್ತಲೆಯಾಗಿದ್ದಾಳೆ. ನೀನು ಬಟ್ಟೆ ಬಿಚ್ಚು ಎಂದು ಹೇಳಿ, ಅವನನ್ನು ಬೆತ್ತಲೆ ಮಾಡಿದ್ದಾಳೆ. ಯುವತಿ ಹೇಳಿದಂತೆ ಯುವಕನೂ ಬೆತ್ತಲಾಗಿದ್ದಾನೆ.

ಹಣ ನೀಡದಿದ್ದರೆ ವಿಡಿಯೊ ಹಂಚುವ ಬೆದರಿಕೆ

ವಿಡಿಯೊ ಕರೆ ಸಮಯದಲ್ಲಿ ಸೆರೆಹಿಡಿಯಲಾದ ತನ್ನ ಖಾಸಗಿ ಚಿತ್ರಗಳ ಬಗ್ಗೆ ಸಂದೇಶ ಬಂದಿದೆ. ಈ ವೇಳೆ ಹಣಕ್ಕೆ ಬೇಡಿಕೆ ಇಟ್ಟಿದ್ದಾಳೆ. ಒಂದು ವೇಳೆ ಹಣ ನೀಡದಿದ್ದರೆ ಈ ವಿಡಿಯೊ ನಿನ್ನ ಸ್ನೇಹಿತರು, ಕುಟುಂಬಕ್ಕೆ ಕಳುಹಿಸುವೆ. ಸಾಮಾಜಿಕ ಜಾಲತಾಣದಲ್ಲೂ ಹಂಚಿಕೊಳ್ಳುವೆ ಎಂದು ಹೇಳಿದ್ದಾಳೆ. ಇದರಿಂದ ಭಯಗೊಂಡ ಯುವಕ ಮೊದಲು 60 ಸಾವಿರ ಹಾಗೂ ನಂತರ 93,000 ರು. ಕಳುಹಿಸಿದ್ದಾನೆ. ಇಷ್ಟು ಹಣ ನೀಡಿದ ನಂತರವೂ ಮತ್ತೆ ಹಣಕ್ಕೆ ಬೇಡಿಕೆ ಇಟ್ಟಿದ್ದಾಳೆ. ಇದರಿಂದ ಬೇಸತ್ತು ಯುವಕ ತನ್ನ ಸ್ನೇಹಿತನಿಗೆ ಎಲ್ಲ ವಿಷಯ ಹೇಳಿದ್ದಾನೆ. ನಂತರ ಪೊಲೀಸರಿಗೆ ದೂರು ನೀಡಿದ್ದಾನೆ. ಪ್ರಕರಣ ದಾಖಲು ಮಾಡಿಕೊಂಡು ಪೊಲೀಸರು ತನಿಖೆ ಕೈಗೊಂಡಿದ್ದಾರೆ.

₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಸೋಮವಾರ 12.01.2026 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೊಹ್ಲಿ ದಾಖಲೆ: ಭಾರತಕ್ಕೆ ಜಯ

ವಿರಾಟ್ ಕೊಹ್ಲಿ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಒಟ್ಟು 28,017 ರನ್ ಗಳಿಸಿ, ಶ್ರೀಲಂಕಾದ ಕುಮಾರ ಸಂಗಕ್ಕಾರ ಅವರನ್ನು ಹಿಂದಿಕ್ಕಿ 2ನೇ ಸ್ಥಾನ ತಲುಪಿದರು. ಕೊಹ್ಲಿಯ ಭರ್ಜರಿ ಬ್ಯಾಟಿಂಗ್‌ನಿಂದಾಗಿ ಭಾರತವು ನ್ಯೂಜಿಲೆಂಡ್ ವಿರುದ್ಧ 4 ವಿಕೆಟ್ ಜಯ ಗಳಿಸಿತು.

ಗುಜರಾತ್‌ನ ಸೋಮನಾಥ ದೇವಾಲಯದಲ್ಲಿ ನಡೆದ 'ಸೋಮನಾಥ ಸ್ವಾಭಿಮಾನ ಪರ್ವ' ಆಧ್ಯಾತ್ಮಿಕ, ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಡಮರು ಬಾರಿಸಿದರು.

ಸೊಂಪಾದ ಪುಟಗಳು

ಬೊಮ್ಮಾಯಿ ರೂಪಿಸಿದ ಸಂಕಷ್ಟ ಸೂತ್ರ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಇರಾಣ... ಯಾಕಿಷ್ಟು ಹೈರಾಣ...!?

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಜೀವನದಲ್ಲಿ ಒಂದೇ ಬಾರಿಗೆ ದೊಡ್ಡ ಬದಲಾವಣೆ ಆಗಬೇಕು ಎಂದು ನಿರೀಕ್ಷಿಸಬಾರದು. ಪ್ರತಿದಿನ ಸಣ್ಣ ಸಣ್ಣ ಬದಲಾವಣೆ ಮೂಲಕ ಅಗಾಧ ಸುಧಾರಣೆ ಮಾಡಬಹುದು.

ವಕ್ರತುಂಡೋಕ್ತಿ

ನಿಮ್ಮ ಪತ್ನಿಗೆ ಎಷ್ಟೇ ಸಿಟ್ಟು ಬಂದರೂ ನಿಮಗೆ ಬೈಯುವುದಿಲ್ಲ ಅಂದ್ರೆ, ನೀವು ಮನೆ ಕೆಲಸ ಮಾಡುತ್ತಿದ್ದೀರಿ ಎಂದರ್ಥ.

ಸಿರಿಯ ಮೇಲೆ ಆಪರೇಷನ್ ಹಾಕ್ ಐ

ವಾಷಿಂಗ್ಟನ್: 'ಇಸ್ಲಾಮಿಕ್ ಸ್ಟೇಟ್' (ಐಎಸ್ ಐಎಸ್) ಉಗ್ರ ಸಂಘಟನೆ ನಾಮಾವಶೇಷಕ್ಕೆ ಮುಂದಾಗಿರುವ ಅಮೆರಿಕ, ಸಿರಿಯ ದೇಶದ ಮೇಲೆ ಮತ್ತೊಮ್ಮೆ ದಾಳಿ ನಡೆಸಿದೆ. 'ಆಪರೇಷನ್ ಹಾಕ್ ಐ' ಹೆಸರಿನಲ್ಲಿ ಶನಿವಾರ ರಾತ್ರಿ ಭಾರೀ ಪ್ರಮಾಣದಲ್ಲಿ ವೈಮಾನಿಕ ಕಾರ್ಯಾಚರಣೆ ನಡೆಸಿದ್ದು, ಸಿರಿಯ ದೇಶದ ವಿವಿಧೆಡೆ ಇರುವ ಐಎಸ್ ಐಎಸ್ ಉಗ್ರರ 36 ಅಡಗುತಾಣಗಳ ಮೇಲೆ ಪ್ರಬಲ ಬಾಂಬ್ ಎಸೆದಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ತೆನೆ ಹೊತ್ತ ಮಹಿಳೆಯ ಜೊತೆ ಚಕ್ರ ಸೇರಿಸಲು ಮುಂದಾದ ಜೆಡಿಎಸ್

ಸುದ್ದಿ



ಬಜೆಟ್ ಪೂರ್ವ ಮಾಹಿತಿ ಕಲೆಹಾಕಲು ಸೂಚನೆ | ಗಣರಾಜ್ಯೋತ್ಸವದ ಬಳಿಕ ಬಜೆಟ್ ಸರಣಿ ಸಭೆ

ಮಾ.6ಕ್ಕೆ ಸಿದ್ದು 17ನೇ ಬಜೆಟ್?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ನಾಲ್ಕು ತಿಂಗಳಿನಿಂದ ರಾಜ್ಯ ಕಾಂಗ್ರೆಸ್‌ನಲ್ಲಿನ ಗೊಂದಲದ ನಡುವೆಯೂ ಸಿಎಂ ಸಿದ್ದರಾಮಯ್ಯ ಅವರು ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸಲು ಸಿದ್ಧತೆ ಆರಂಭಿಸಿದ್ದು, ಮಾರ್ಚ್ 6ರಂದು ರಾಜ್ಯದ ಬಜೆಟ್ ಮಂಡನೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಕಳೆದ ಕೆಲ ವರ್ಷಗಳಿಂದ ಫೆಬ್ರವರಿ ಕೊನೆಯ ವಾರದಲ್ಲಿ ರಾಜ್ಯ ಬಜೆಟ್ ಮಂಡನೆಯಾಗುತ್ತಿತ್ತು. ಆದರೆ ಈ ಬಾರಿ ರಾಜ್ಯ ಕಾಂಗ್ರೆಸ್‌ನಲ್ಲಿರುವ ಹಲವು ಗೊಂದಲಗಳಿಂದ ಸಿಎಂ ಸಿದ್ದರಾಮಯ್ಯ ಅವರು ಅಧಿಕೃತವಾಗಿ ಬಜೆಟ್ ಸಭೆಗಳನ್ನು ಆರಂಭಿಸಿರಲಿಲ್ಲ. ಆದರೀಗ ಗಣರಾಜ್ಯೋತ್ಸವದ ಬಳಿಕ ಸರಣಿ ಸಭೆ ನಡೆಸಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಜನವರಿ 26ರಿಂದ ಸರಣಿ ಸಭೆ ನಡೆಸಿದ ಬಳಿಕ, ಮಾರ್ಚ್ ಮೊದಲ ಶುಕ್ರವಾರ ಬಜೆಟ್ ಮಂಡಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಡಿಸಿಎಂ ಡಿ.ಕೆ.ಶಿವಕುಮಾರ್ ಆಪ್ತರು ಸಂಕ್ರಾಂತಿಯ ನಂತರ ನಾಯಕತ್ವ ಬದಲಾವಣೆಯಾಗಲಿದೆ ಎನ್ನುವ ಮಾತುಗಳನ್ನು ಆಡುತ್ತಿದ್ದರು. ಇದಕ್ಕೆ ಪೂರಕವಾಗಿ ಡಿ.ಕೆ.ಶಿವಕುಮಾರ್ ಅವರ ಆಪ್ತ ಶಾಸಕರು ದೆಹಲಿಗೆ ತೆರಳಿ ತಮ್ಮ ನಾಯಕನ ಪರವಾಗಿ ಬ್ಯಾಟ್ ಬೀಸುವ ಪ್ರಯತ್ನ ಮಾಡಿದ್ದರು. ಈ ನಡುವೆ ಹಲವು ಬಾರಿ ಹೈಕಮಾಂಡ್ 'ನಾಯಕತ್ವ' ವಿಷಯವನ್ನು ಚರ್ಚಿಸಬೇಡಿ ಎನ್ನುವ ಸೂಚನೆಯ ಹೊರತಾಗಿಯೂ ಪರ-ವಿರೋಧ ಚರ್ಚೆಗಳು ನಡೆಯುತ್ತಿದ್ದವು. ಆದರೀಗ ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಲು ಸಭೆಗಳನ್ನು ಆಯೋಜಿಸಲು ಮುಂದಾಗುವ ಮೂಲಕ ರಾಜ್ಯ ನಾಯಕತ್ವ ಗೊಂದಲಕ್ಕೆ ನಾಲ್ಕು ತಿಂಗಳು ವಿರಾಮ ಬೀಳುವುದು ನಿಶ್ಚಿತವಾಗಿದೆ.

ಸಿದ್ದರಾಮಯ್ಯ ಅವರು ಈಗಾಗಲೇ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ ಬಜೆಟ್ ಪೂರ್ವ ಮಾಹಿತಿ ಕಲೆ ಹಾಕುವಂತೆ ಸೂಚನೆ ನೀಡಿದ್ದಾರೆ. ಪ್ರಮುಖವಾಗಿ ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಯೋಜನೆಗಳೆಷ್ಟು? ಎಷ್ಟು ಜಾರಿಗೆ ಬಂದಿವೆ? ಬಾಕಿ ಉಳಿದಿರುವುದೆಷ್ಟು? ಬಜೆಟ್‌ನಲ್ಲಿ ಮಂಜೂರಾದ ಅನುದಾನದಲ್ಲಿ ಖರ್ಚಾಗಿರುವುದು ಮತ್ತು ಖರ್ಚಾಗದೇ ಇರುವ ಹಣಕಾಸಿನ ವಿವರ ಕಲೆ ಹಾಕುವಂತೆ ಹೇಳಿದ್ದಾರೆ ಎಂದು ತಿಳಿದುಬಂದಿದೆ.

ರಾಜ್ಯದಲ್ಲಿ ಕುರ್ಚಿಗಾಗಿ ಯಾವುದೇ ಕಾಳಗ ನಡೆಯುತ್ತಿಲ್ಲ. ಈ ವಿಚಾರವಾಗಿ ಅನಗತ್ಯವಾದ ಚರ್ಚೆಗಳು ನಡೆಯುತ್ತಿವೆ. ಕುರ್ಚಿಗಾಗಿ ಎಲ್ಲಿ ಯಾರು ಕಿತ್ತಾಡುತ್ತಿದ್ದಾರೆ ಎನ್ನುವುದನ್ನು ತೋರಿಸಿ. ಅನಗತ್ಯವಾಗಿ ಈ ವಿಚಾರ ಕುರಿತು ಯಾರೂ ವದಂತಿ ಹರಡಬಾರದು. ಗೊಂದಲ ಸೃಷ್ಟಿಸುವ ಪ್ರಯತ್ನ ಮಾಡಬಾರದು
-ಸಿದ್ದರಾಮಯ್ಯ, ಮುಖ್ಯಮಂತ್ರಿ

ನಾನು ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದವನಲ್ಲ. ಆದರೂ ಈ ಮಟ್ಟಕ್ಕೆ ಬಂದಿದ್ದೇನೆ. ಮುಂದೆಯೂ ನನ್ನ ಬಗ್ಗೆ ಪಕ್ಷದವರು ತೀರ್ಮಾನ ಮಾಡುತ್ತಾರೆ ಎನ್ನುವ ನಂಬಿಕೆ, ಆತ್ಮವಿಶ್ವಾಸವಿದೆ. ದೇವರು ವರ, ಶಾಪ ನೀಡುವುದಿಲ್ಲ. ಕೇವಲ ಅವಕಾಶ ನೀಡುತ್ತಾನೆ. ಆ ಅವಕಾಶ ಸಿಕ್ಕಾಗ ಶ್ರಮವಹಿಸಿ ಯಶಸ್ಸು ಸಾಧಿಸಬೇಕು.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ದೆಹಲಿಯಿಂದ ಬಾರದ ಬುಲಾವ್

ರಾಜ್ಯ ನಾಯಕತ್ವಕ್ಕೆ ಸಂಬಂಧಿಸಿದಂತೆ ಕಳೆದ ನಾಲ್ಕು ತಿಂಗಳುಗಳಿಂದ ನಡೆಯುತ್ತಿರುವ ಗೊಂದಲಕ್ಕೆ ಜನವರಿ ಎರಡನೇ ವಾರದಲ್ಲಿ ತೆರೆ ಬೀಳಲಿದೆ ಎಂದು ಡಿ.ಕೆ.ಶಿವಕುಮಾರ್ ಆಪ್ತರು ಅಂದುಕೊಂಡಿದ್ದರು. ಈ ಹಿಂದೆ ಜ.9ರಿಂದ 13ರೊಳಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ದೆಹಲಿಗೆ ಕರೆಸಿಕೊಂಡು ಸೂತ್ರದ ಬಗ್ಗೆ ಚರ್ಚಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿತ್ತು. ಆದರೆ ಈವರೆಗೆ ರಾಹುಲ್ ಗಾಂಧಿ ಅಥವಾ ಕೆ.ಸಿ.ವೇಣುಗೋಪಾಲ್ ಅವರಿಂದ ರಾಜ್ಯ ನಾಯಕರಿಗೆ ಯಾವುದೇ ಕರೆ ಬಂದಿಲ್ಲ. ಆದ್ದರಿಂದ ಬಜೆಟ್ ತಯಾರಿಯಲ್ಲಿ ತೊಡಗಿಸಿಕೊಳ್ಳಲು ಸಿದ್ದರಾಮಯ್ಯ ಅವರು ಸರಣಿ ಸಭೆಯನ್ನು ಸಿದ್ಧಪಡಿಸಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಸೋಮನಾಥ ಸ್ವಾಭಿಮಾನ್ ಪರ್ವದಲ್ಲಿ ಮೋದಿ ಘರ್ಜನೆ

ದೇಗುಲ ಇತಿಹಾಸ ಅಳಿಸಲು ಹಿಂದಿನ ಸರಕಾರಗಳ ಯತ್ನ

ಗಾಂಧಿನಗರ: ಸ್ವಾತಂತ್ರ್ಯದ ನಂತರದ ಸರಕಾರಗಳು ಸೋಮನಾಥ ದೇವಾಲಯದ ಇತಿಹಾಸವನ್ನು ಅಳಿಸಿಹಾಕುವ ನೀಚ ಪ್ರಯತ್ನಗಳನ್ನು ಕೈಗೊಂಡಿದ್ದವು ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದರು.

ಸೋಮನಾಥ ದೇವಾಲಯ ಮೇಲೆ ಮಹಮದ್ ಘಜ್ನಿ ದಾಳಿ ನಡೆಸಿ ಒಂದು ಸಾವಿರ ವರ್ಷ ಹಾಗೂ ಹಾನಿಯಾದ ದೇವಾಲಯವನ್ನು ಮರು ನಿರ್ಮಿಸಿ 75 ವರ್ಷ ಕಳೆದ ನಿಮಿತ್ತ ಆಯೋಜಿಸಲಾದ 'ಸೋಮನಾಥ ಸ್ವಾಭಿಮಾನ್ ಪರ್ವ'ದಲ್ಲಿ ಮಾತನಾಡಿ, ದೇವಾಲಯದ ಪುನರ್ ಸ್ಥಾಪನೆ ಮತ್ತು ಪುನರ್ ನಿರ್ಮಾಣದ ನಿರಂತರ ಪ್ರಯತ್ನಗಳ ನಡುವೆಯೂ ಅದರ ಶ್ರೇಷ್ಠ ಪರಂಪರೆಯನ್ನು ಕುಗ್ಗಿಸಲು ಗುಲಾಮ ಮನಸ್ಸಿನ ಮನೋಭಾವವನ್ನು ಬಳಸಲಾಗಿದೆ. ಸೋಮನಾಥ ದೇವಾಲಯವನ್ನು ಸಂಪತ್ತಿಗಾಗಿ ಮಾತ್ರವೇ ನಾಶಪಡಿಸಲಾಯಿತು. ಅದರ ನಿಜವಾದ ಇತಿಹಾಸವನ್ನು ತಲೆಮಾರುಗಳಿಂದ ಮರೆಮಾಡಿ, ಬೇರೆ ಇತಿಹಾಸವನ್ನು ಜನರಿಗೆ ಕಲಿಸಲಾಯಿತು ಎಂದು ಆರೋಪಿಸಿದರು.

ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ದೇವಾಲಯವನ್ನು ನವೀಕರಿಸುವುದಕ್ಕೆ ಮುಂದಾದಾಗ ಅದನ್ನು ತಡೆಯುವ ಪ್ರಯತ್ನ ನಡೆದವು. 1951ರಲ್ಲಿ ಅಂದಿನ ರಾಷ್ಟ್ರಪತಿ ಡಾ.ಬಾಬು ರಾಜೇಂದ್ರ ಪ್ರಸಾದ್ ಕೂಡ ದೇವಾಲಯದ ಭೇಟಿಗೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದರು. ತುಷ್ಟೀಕರಣ ರಾಜಕೀಯಕ್ಕಾಗಿ ದೇಶದ ವೀರರ ಇತಿಹಾಸ ಮತ್ತು ಸಾಂಸ್ಕೃತಿಕ ವೈಭವವನ್ನು ನಿರ್ಲಕ್ಷಿಸಲಾಗಿದೆ. ಆದರೆ ಸೋಮನಾಥ ದೇವಾಲಯ ಇಂದಿಗೂ ಭಾರತೀಯ ಆತ್ಮವಿಶ್ವಾಸ, ಪುನರುಜ್ಜೀವನದ ಸಂಕೇತವಾಗಿ ಉಳಿದಿದೆ ಎಂದರು.

ಸೋಮನಾಥ ಸ್ವಾಭಿಮಾನ ಪರ್ವವು ಲಕ್ಷಾಂತರ ಭಾರತೀಯರ ಶಾಶ್ವತ ನಂಬಿಕೆ, ಭಕ್ತಿ ಮತ್ತು ಅಚಲ ಸಂಕಲ್ಪದ ಜೀವಂತ ಪ್ರತಿಬಿಂಬವಾಗಿದೆ. ಈ ಹಬ್ಬವು ಕೇವಲ ಒಂದು ಕಾರ್ಯಕ್ರಮವಲ್ಲ, ಬದಲಾಗಿ ಭಾರತದ ಶಾಶ್ವತ ಪ್ರಜ್ಞೆ, ಸಾಂಸ್ಕೃತಿಕ ಪರಂಪರೆ ಮತ್ತು ಸ್ವಾಭಿಮಾನದ ಸಂಕೇತವಾಗಿದೆ.
-ನರೇಂದ್ರ ಮೋದಿ, ಪ್ರಧಾನಿ

- ಗುಜರಾತ್‌ನ ಸೋಮನಾಥ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದ ಮೋದಿ
- ಕೊರೆಯುತ್ತಿರುವ ಚಳಿಯನ್ನು ಲೆಕ್ಕಿಸದೆ ಸೋಮನಾಥ ದೇವಾಲಯ ಸಂಕೀರ್ಣದಲ್ಲಿ ನೆರೆದಿದ್ದ ಭಕ್ತರು

ಬೆಂಗಳೂರು ಮೂಲದ ಮೇಜರ್ ಸ್ವಾತಿಗೆ ವಿಶ್ವಸಂಸ್ಥೆಯ ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿ

ರಾಜ್ಯದ ಮುಕುಟಕ್ಕೆ ಮತ್ತೊಂದು ಗರಿ

ವಾಷಿಂಗ್ಟನ್: ಬೆಂಗಳೂರು ಮೂಲದ ಭಾರತೀಯ ಸೇನಾಧಿಕಾರಿ ಮೇಜರ್ ಸ್ವಾತಿ ಶಾಂತಕುಮಾರ್ ಅವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ನೀಡುವ 'ಲಿಂಗ ಸಮಾನತೆ ಪ್ರತಿಪಾದಕ ಪ್ರಶಸ್ತಿ-2025'ಕ್ಕೆ ಭಾಜನರಾಗಿದ್ದಾರೆ.

ವಿವಿಧ ಕಾರ್ಯಾಚರಣೆ ಗಳಲ್ಲಿನ ಶ್ರೇಷ್ಠ ಸೇವೆಯನ್ನು ಗುರುತಿಸಿ ನೀಡುವ ಪ್ರಶಸ್ತಿಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರೆಸ್ ಘೋಷಿಸಿದ್ದು, ಸಂಘರ್ಷ ಪೀಡಿತ ದಕ್ಷಿಣ ಸೂಡಾನ್‌ನಲ್ಲಿ ಮಹಿಳೆಯರ ರಕ್ಷಣೆ, ಸಮುದಾಯದ ನೆಮ್ಮದಿಗೆ ಕೈಗೊಂಡ ಸಂವೇದನಾಶೀಲ ಕ್ರಮಗಳಿಗಾಗಿ ಸ್ವಾತಿ ಅವರಿಗೆ ಪ್ರಶಸ್ತಿ ಒಲಿದಿದೆ.

ವಿಶ್ವದಾದ್ಯಂತ ಇರುವ ಎಲ್ಲ ಶಾಂತಿ ರಕ್ಷಣಾ ಕಾರ್ಯಾಚರಣೆ ಹಾಗೂ ವಿಶ್ವ ಸಂಸ್ಥೆಗಳಿಂದ ಬಂದ ನಾಮನಿರ್ದೇಶನಗಳಲ್ಲಿ ಸ್ವಾತಿ ಆಯ್ಕೆಯಾಗಿದ್ದಾರೆ. ನಾಲ್ಕು ಅಂತಿಮ ಸ್ಪರ್ಧಿಗಳ ನಡುವೆ ನಡೆದ ಮತದಾನದಲ್ಲಿ ಅತ್ಯಧಿಕ ಮತಗಳನ್ನು ಪಡೆದು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

→ 4

ಮೇಜರ್ ಸ್ವಾತಿ ಹಿನ್ನೆಲೆ

ಎಂಜಿನಿಯರಿಂಗ್ ಪದವೀಧರೆಯಾಗಿರುವ ಸ್ವಾತಿ ಅವರು ಬೆಂಗಳೂರಿನ ಲಿಂಗರಾಜಪುರದ ಖಾಸಗಿ ಕಂಪನಿ ಉದ್ಯೋಗಿ ಶಾಂತಕುಮಾರ್ ಮತ್ತು ಸರಕಾರಿ ಶಾಲಾ ಶಿಕ್ಷಕಿ ರಾಜಮಣಿ ದಂಪತಿ ಪುತ್ರಿ. 8 ವರ್ಷಗಳಿಂದ ಭಾರತೀಯ ಸೇನೆಯಲ್ಲಿದ್ದು, ಒಂದೂವರೆ ವರ್ಷದಿಂದ ದಕ್ಷಿಣ ಸೂಡಾನ್‌ನಲ್ಲಿ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿದ್ದಾರೆ.

- ವಿವಿಧ ಕಾರ್ಯಾಚರಣೆಗಳಲ್ಲಿನ ಶ್ರೇಷ್ಠ ಸೇವೆಯನ್ನು ಗುರುತಿಸಿ ನೀಡುವ ಪ್ರಶಸ್ತಿಗಳನ್ನು ಘೋಷಿಸಿದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಗುಟೆರೆಸ್
- ನಾಲ್ಕು ಅಂತಿಮ ಸ್ಪರ್ಧಿಗಳ ನಡುವೆ ನಡೆದ ಮತದಾನದಲ್ಲಿ ಅತ್ಯಧಿಕ ಮತಗಳನ್ನು ಪಡೆದು ಗೌರವಕ್ಕೆ ಪಾತ್ರವಾದ ಮೇಜರ್ ಸ್ವಾತಿ



ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲಿ ತಂಡವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸೇನೆಯಲ್ಲೂ ಲಿಂಗಸಮಾನತೆಯನ್ನು ಬಲಗೊಳಿಸಿದ್ದಾರೆ. ಕಾರ್ಯಾಚರಣೆ ವೇಳೆ ತಳಮಟ್ಟದ ಸಂವಹನ ಮತ್ತು ಸೇನೆಯ ನಂಟನ್ನು ಮತ್ತಷ್ಟು ಗಟ್ಟಿ ಮಾಡಿದ್ದಾರೆ. ಚುರುಕಾದ ವಾಯುಗಸ್ತುಗಳ ಮೂಲಕ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಇದರಿಂದ ಸುಡಾನ್‌ನ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷಿತ ವಾತಾವರಣ ನಿರ್ಮಾಣವಾಗಿದೆ. ಅವರು ಗಳಿಸಿದ ಸಮುದಾಯದ ವಿಶ್ವಾಸ ವಿಶ್ವಸಂಸ್ಥೆಯ ಮುಂದಿನ ಕೆಲಸಗಳಿಗೂ ಪ್ರೇರಣೆಯಾಗಿದೆ.
-ಆಂಟೊನಿಯೊ ಗುಟೆರೆಸ್
ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಒಳಮೀಸಲು ವಿಧೇಯಕಕ್ಕೆ ಸ್ಪಷ್ಟನೆ ಎಚ್‌ಕೆಪಿ ನೇತೃತ್ವದಲ್ಲಿ ಇಂದು ಸಭೆ

ಬೆಂಗಳೂರು: ಒಳಮೀಸಲು ವಿಧೇಯಕಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಕೇಳಿರುವ ಸ್ಪಷ್ಟನೆಗೆ ಸಂಬಂಧಿಸಿ ಸಚಿವ ಎಚ್.ಕೆ.ಪಾಟೀಲ ನೇತೃತ್ವದಲ್ಲಿ ಸೋಮವಾರ ಮಹತ್ವದ ಸಭೆ ನಡೆಯಲಿದೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ಸರಕಾರ ಒಳಮೀಸಲು ವಿಧೇಯಕವನ್ನು ಮಂಡಿಸಿ ಅನುಮೋದನೆ ಪಡೆದಿತ್ತು. ಆದರೆ ರಾಜ್ಯಪಾಲರು ಸಹಿ ಹಾಕದೇ, ಸ್ಪಷ್ಟನೆ ಕೇಳಿದ್ದರು. ಪ್ರಮುಖವಾಗಿ, ಒಳಮೀಸಲು ಹಂಚಿಕೆ ವಿಷಯದಲ್ಲಿ ಎದುರಾಗಬಹುದಾದ ಕಾನೂನು ತೊಡಕಿನ ಬಗ್ಗೆ ಹಾಗೂ ಶೇ.17ರಷ್ಟು ಎಸ್‌ಸಿ ಮೀಸಲನ್ನು ಒಳಪಂಗಡಗಳಿಗೆ 6+6+5ರ ಅನುಪಾತದಲ್ಲಿ ಹಂಚಿಕೆ ಮಾಡಿರುವ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ. ಇದರೊಂದಿಗೆ ಇಂದಿರಾ ಸಹಾನಿ ಪ್ರಕರಣದಲ್ಲಿ ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.50ರಷ್ಟು ಮೀರಬಾರದೆಂಬ ಸುಪ್ರೀಂಕೋರ್ಟ್ ತೀರ್ಪು ಇದೆ. ಆದರೆ ಸದ್ಯ ಕರ್ನಾಟಕದಲ್ಲಿ ಮೀಸಲು ಶೇ.50ರಷ್ಟು ಮೀರಿದೆ. ಈ ಕಾರಣಕ್ಕೆ ರಾಜ್ಯಪಾಲರು ಹೆಚ್ಚಿನ ಸ್ಪಷ್ಟನೆ ಕೇಳಿದ್ದಾರೆ. ಆದ್ದರಿಂದ ಸರಕಾರದ ತೀರ್ಮಾನಕ್ಕೆ ಕಾರಣವೇನು? ಕಾನೂನು ತೊಡಕಾಗದಂತೆ ಯಾವ ರೀತಿಯಲ್ಲಿ ಕ್ರಮವಹಿಸಲಾಗುವುದು ಎನ್ನುವ ಬಗ್ಗೆ ಸ್ಪಷ್ಟನೆ ನೀಡಲು ಸೋಮವಾರ ಸಭೆ ನಡೆಯಲಿದೆ ಎಂದು ಹೇಳಲಾಗಿದೆ.

ದ್ವೇಷ ಭಾಷಣ ವಿಧೇಯಕ ಉಭಯ ಸದನಗಳಲ್ಲಿ ಸರ್ವಾನುಮತದಿಂದ ಅಂಗೀಕಾರವಾಗಿದ್ದು, ರಾಜ್ಯಪಾಲರು ಇದನ್ನು ವಾಪಸು ಕಳಿಸಿಲ್ಲ, ತಿರಸ್ಕರಿಸಿಲ್ಲ ಅಥವಾ ಅಂಕಿತವನ್ನೂ ಹಾಕಿಲ್ಲ. ರಾಜ್ಯಪಾಲರು ಒಂದು ವೇಳೆ ಕರೆದು ಕೇಳಿದಾಗ, ಅದಕ್ಕೆ ಬೇಕಿರುವ ವಿವರಣೆಯನ್ನು ನೀಡಲಾಗುವುದು.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ದ್ವೇಷ ಭಾಷಣದ ಬಗ್ಗೆಯೂ ಚರ್ಚೆ: ರಾಜ್ಯಪಾಲರು ದ್ವೇಷ ಭಾಷಣ ವಿಧೇಯಕದ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಅಂಗೀಕರಿಸಿಲ್ಲ ಹಾಗೆಂದು ತಿರಸ್ಕರಿಸಿಯೂ ಇಲ್ಲ ಅಥವಾ ಸ್ಪಷ್ಟನೆಯನ್ನೂ ಕೇಳಿಲ್ಲ. ಆದ್ದರಿಂದ ಈ ವಿಧೇಯಕಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರು ಯಾವ ರೀತಿಯ ನಿರ್ಧಾರ ಕೈಗೊಳ್ಳಲಿದ್ದಾರೆ ಎಂಬುದರ ಮೇಲೆ ರಾಜ್ಯ ಸರಕಾರದ ಮುಂದಿನ ನಡೆ ಇರಲಿದೆ. ರಾಜ್ಯಪಾಲರು ಒಂದು ವೇಳೆ ಸ್ಪಷ್ಟನೆ ಕೇಳಿದರೆ, ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕು ಎನ್ನುವ ಬಗ್ಗೆ ಚರ್ಚಿಸಲು ಶೀಘ್ರದಲ್ಲಿಯೇ ಸಭೆ ನಡೆಸುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

ದೆಸೆ ಬದಲಿಸಿಕೊಳ್ಳಲು ಮುಂದಾದ ಜೆಡಿಎಸ್ | ಕೇಂದ್ರ ಚುನಾವಣಾ ಆಯೋಗಕ್ಕೆ ಜೆಡಿಎಸ್ ಪತ್ರ

ತೆನೆ ಹೊತ್ತ ಮಹಿಳೆಗೆ ಚಕ್ರ ಸೇರ್ಪಡೆ?

ಬೆಂಗಳೂರು: 'ದೇವರ' ಮೇಲೆ ಅಪಾರ ವಿಶ್ವಾಸವಿಟ್ಟಿರುವ ಜೆಡಿಎಸ್ ವರಿಷ್ಠ ದೇವೇಗೌಡರು ಇದೀಗ ಪಕ್ಷದ ದೆಸೆಯನ್ನು ಬದಲಾಯಿಸಲು ಪಕ್ಷದ ಚಿಹ್ನೆ ಬದಲಾಯಿಸಲು ಮುಂದಾಗಿದ್ದಾರೆ.

ರಾಜ್ಯಾದ್ಯಂತ ಜೆಡಿಎಸ್‌ಗೆ ತನ್ನದೇಯಾದ ಮತಗಳಿದ್ದರೂ ವರ್ಷದಿಂದ ವರ್ಷಕ್ಕೆ ಪಕ್ಷದ ಶಕ್ತಿ ಹೆಚ್ಚಾಗುತ್ತಿಲ್ಲ. ಸದ್ಯ ಬಿಜೆಪಿಜತೆ ಇರುವುದಕ್ಕೆ 'ಉತ್ತಮ' ಸ್ಥಾನದಲ್ಲಿದ್ದಂತೆ ಕಾಣುತ್ತಿದ್ದರೂ, ಚುನಾವಣಾ ಸಮಯದಲ್ಲಿ ಸೊರಗುವ ಆತಂಕವಿದೆ. ಆದ್ದರಿಂದ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗೂ ಮೊದಲೇ ಪಕ್ಷದ ದೆಸೆಯನ್ನು ಬದಲಾಯಿಸಲು ತೆನೆಹೊತ್ತ ಮಹಿಳೆಯ ಚಿಹ್ನೆಗೆ ಹೆಚ್ಚುವರಿಯಾಗಿ ಚಕ್ರವನ್ನು ಸೇರಿಸಲು ದೇವೇಗೌಡರು ಸೂಚನೆ ನೀಡಿದ್ದಾರೆ.

ಈ ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ಚರ್ಚೆಯಾಗಿದ್ದು, ಈ ಹಿಂದೆ ಜನತಾದಳ ಬಳಸುತ್ತಿದ್ದ ಚಕ್ರವನ್ನು ಈಗಿರುವ ತೆನೆಹೊತ್ತ ಮಹಿಳೆಯ ಚಿಹ್ನೆಯೊಂದಿಗೆ ಸೇರಿಸಿದರೆ ಅನುಕೂಲವಾಗುವ ಸಾಧ್ಯತೆಯಿದೆ. ಆದ್ದರಿಂದ ಕೇಂದ್ರ ಚುನಾವಣಾ ಆಯೋಗಕ್ಕೆ ಈ ಬಗ್ಗೆ ಪತ್ರ ಬರೆಯಲು ತೀರ್ಮಾನಿಸಲಾಗಿದೆ. ಒಂದು ವೇಳೆ ಕೇಂದ್ರ ಚುನಾವಣಾ ಆಯೋಗ ಒಪ್ಪಿದರೆ, ಸ್ಥಳೀಯ ಸಂಸ್ಥೆ ಚುನಾವಣೆಯ ವೇಳೆಗೆ ಚಿಹ್ನೆ ಬದಲಿಸಲು ತೀರ್ಮಾನಿಸಲಾಗಿದೆ ಎನ್ನಲಾಗಿದೆ.

ತೆನೆಹೊತ್ತ ಮಹಿಳೆಗೆ ಚಕ್ರವನ್ನು ಸೇರಿಸುವ ಹಿಂದೆ ಭಾವನಾತ್ಮಕ ಲೆಕ್ಕಾಚಾರಗಳೂ ಇವೆ. ಇದರೊಂದಿಗೆ ದೇವೇಗೌಡ ಕುಟುಂಬದ ಜ್ಯೋತಿಷಿಗಳ ಸಲಹೆಯೂ ಸೇರಿದೆ ಎನ್ನಲಾಗಿದೆ. ತೆನೆ ಹೊತ್ತ ಮಹಿಳೆ ಚಿಹ್ನೆಯ ಹಿಂದೆ ಚಕ್ರ ಸೇರಿಸುವುದರಿಂದ ಚಲನೆ ಕಾಣುತ್ತದೆ. ಇದು ಪಕ್ಷಕ್ಕೆ ಪಾಸಿಟಿವ್ ಶಕ್ತಿಯನ್ನು ನೀಡುತ್ತದೆ ಎನ್ನುವುದು ವರಿಷ್ಠರ ಲೆಕ್ಕಾಚಾರವಾಗಿದೆ.

→ 4

3ನೇ ಬಾರಿ ಬದಲಾವಣೆ

ಜಾತ್ಯತೀತ ಜನತಾದಳ ಅಸ್ತಿತ್ವಕ್ಕೆ ಬಂದ ಸಮಯದಲ್ಲಿ ಟ್ರ್ಯಾಕ್ಟರ್ ಚಿಹ್ನೆ ಹೊಂದಿತ್ತು. ಆದರೆ, ಪಕ್ಷೇತರ ಅಭ್ಯರ್ಥಿಗಳು ವಿಧಾನಸಭಾ ಕ್ಷೇತ್ರಗಳಲ್ಲಿ ಟ್ರ್ಯಾಕ್ಟರ್ ವಾಹನವನ್ನೇ ಹೋಲುವ ಇತರ ಚಿಹ್ನೆಗಳನ್ನು ಪಡೆದಿದ್ದರಿಂದ ಜನತಾದಳದ ಅಭ್ಯರ್ಥಿಗಳಿಗೆ ಕೆಲವೆಡೆ ಸೋಲುಂಟಾಗಿತ್ತು. ಆದ್ದರಿಂದ ದೇವೇಗೌಡರು 2001ರಲ್ಲಿ ಜೆಡಿಎಸ್ ಟ್ರ್ಯಾಕ್ಟರ್ ಚಿಹ್ನೆಯನ್ನು ಬದಲಾಯಿಸಲು ತೀರ್ಮಾನಿಸಿದರು. ಪರಿಣಾಮವಾಗಿ ಜೆಡಿಎಸ್ ಪಕ್ಷವು ತೆನೆ ಹೊತ್ತ ಮಹಿಳೆಯ ಗುರುತಿನ ಚಿಹ್ನೆ ಹೊಂದಿತು. ಇದೀಗ 24 ವರ್ಷದ ಬಳಿಕ ಜೆಡಿಎಸ್ ಪಕ್ಷ 3ನೇ ಬಾರಿ ಚಿಹ್ನೆಯಲ್ಲಿ ಬದಲಾವಣೆ ತರಲು ತೀರ್ಮಾನಿಸಿದೆ.

ದಕ್ಷಿಣ ಧ್ರುವದತ್ತ ಕರ್ನಾಟಕ ಮೂಲದ ಅಮೆರಿಕದ ಉದ್ಯಮಿ ಶಶಿಕುಮಾರ್ ಕಠಿಣ ಯಾನ
ಉತ್ತರ, ದಕ್ಷಿಣ ಧ್ರುವ, ಬಾಹ್ಯಾಕಾಶ ತಲುಪಿದ ಮೊದಲ ಭಾರತೀಯ ಎಂಬ ಸಾಧನೆಯ ಸನಿಹ

ಅಮೆರಿಕ ಉದ್ಯಮಿಯ ಅಪರೂಪದ ದಾಖಲೆಯ ಗುರಿ

ಬೆಂಗಳೂರು: ಕರ್ನಾಟಕ ಮೂಲದ ಅಮೆರಿಕದ ಖ್ಯಾತ ಉದ್ಯಮಿ ಸಿ.ವಿ.ಶಶಿಕುಮಾರ್ ಅವರು ತಮ್ಮ ಪತ್ನಿಯೊಂದಿಗೆ ಅತ್ಯಂತ ಕಠಿಣ ಯಾನ ಕೈಗೊಂಡು ದಕ್ಷಿಣ ಧ್ರುವ ತಲುಪಲು ಹೊರಟಿದ್ದಾರೆ. ಈಗಾಗಲೇ ಅವರು ಅಂಟಾರ್ಟಿಕಾ ಮತ್ತು ಉತ್ತರ ಧ್ರುವಕ್ಕೆ ಭೇಟಿ ನೀಡಿದ್ದು, ಸದ್ಯದಲ್ಲೇ ಬಾಹ್ಯಾಕಾಶ ಯಾನವನ್ನೂ ಕೈಗೊಳ್ಳಲಿದ್ದಾರೆ. ಈ ಮೂಲಕ ಉತ್ತರ ಧ್ರುವ, ದಕ್ಷಿಣ ಧ್ರುವ ಮತ್ತು ಬಾಹ್ಯಾಕಾಶ ತಲುಪಿದ ಮೊದಲ ಭಾರತೀಯ ಎಂಬ ಅಪರೂಪದ ಕೀರ್ತಿಗೆ ಪಾತ್ರರಾಗಲಿದ್ದಾರೆ. ಈ ಮೂರೂ ಕಡೆ ವಿಶ್ವದ ಇಬ್ಬರಷ್ಟೇ ಈವರೆಗೆ ಭೇಟಿ ನೀಡಿದ್ದಾರೆ.

ಈಗಾಗಲೇ 52 ದೇಶಗಳಿಗೆ ಭೇಟಿ ನೀಡಿರುವ ಸಾಹಸಿ ಪ್ರವಾಸಿ ಶಶಿಕುಮಾರ್ ಅವರು, 2010ರಲ್ಲಿ ಅಂಟಾರ್ಟಿಕಾಗೆ ಭೇಟಿ ನೀಡಿದ್ದರು. 2015ರಲ್ಲಿ ಉತ್ತರ ಧ್ರುವ ತಲುಪಿದ್ದರು. ದಕ್ಷಿಣ ಧ್ರುವ ತಲುಪುವುದು ಸುಲಭದ ಮಾತಲ್ಲ. ಉತ್ತರ ಧ್ರುವಕ್ಕಿಂತ ಇಲ್ಲಿಯ ವಾತಾವರಣ ಅತ್ಯಂತ ಕಠಿಣ. ಏಕೆಂದರೆ ಅಲ್ಲಿಯ ಸರಾಸರಿ ತಾಪಮಾನ ಮೈನಸ್ 49 ಡಿಗ್ರಿ ಸೆಲ್ಸಿಯಸ್. ಅಲ್ಲಿಯ ಗರಿಷ್ಠ ತಾಪಮಾನವೇ ಮೈನಸ್ 12 ಡಿಗ್ರಿ ಸೆಲ್ಸಿಯಸ್. ಕನಿಷ್ಠ ತಾಪಮಾನ ಮೈನಸ್ 82 ಡಿಗ್ರಿ ಸೆಲ್ಸಿಯಸ್!

ಕನ್ನಡಿಗರ ಶುಭ ಹಾರೈಕೆ ಇರಲಿ

'ಪತ್ನಿ ಸುಷ್ಮಾ ಅವರೊಂದಿಗೆ ಅಮೆರಿಕದಿಂದ ಬೊಗೊಟಾ, ಸ್ಯಾಂಟಿಯಾಗೊ, ಪುಂಟ್ ಅರೆನಾಸ್‌ನಿಂದ ಯುನಿಯನ್ ಗ್ಲೇಸಿಯರ್ ತಲುಪುತ್ತೇವೆ. ಅಲ್ಲಿ 6 ದಿನಗಳ ನಿಲುಗಡೆ ಬಳಿಕ ಪೂರಕ ವಾತಾವರಣ ನೋಡಿಕೊಂಡು ದಕ್ಷಿಣ ಧ್ರುವದತ್ತ ಹೊರಡುತ್ತೇವೆ. 60 ಪ್ಲಸ್ ವಯಸ್ಸು ಮತ್ತು ಡಯಾಬಿಟಿಕ್ ಸವಾಲಿನ ನಡುವೆಯೂ ನಾವು ಈ ಸಾಹಸ ಕೈಗೊಂಡಿದ್ದೇವೆ. ನಮ್ಮ ಈ ಸಾಹಸಕ್ಕೆ ಕನ್ನಡಿಗರ ಶುಭ ಹಾರೈಕೆ ಬಯಸುತ್ತೇವೆ' ಎಂದು ಸಿ.ವಿ.ಶಶಿಕುಮಾರ್ ಅವರು ಈ ಪ್ರವಾಸಕ್ಕೆ ಹೊರಡುವ ಕೆಲವೇ ಕ್ಷಣಗಳ ಮೊದಲು ವಿಶ್ವವಾಣಿಗೆ ತಿಳಿಸಿದರು.

ಸಾಹಸಿ ಪ್ರವಾಸಿ ಶಶಿಕುಮಾರ್ ಪರಿಚಯ

ಕರ್ನಾಟಕ ಮೂಲದ ಸಿ.ವಿ.ಶಶಿಕುಮಾರ್ ಅವರು ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಎಂಇ ಮಾಡಿದ ಬಳಿಕ ಅಮೆರಿಕದಲ್ಲಿ ವೃತ್ತಿ ಜೀವನ ಆರಂಭಿಸಿದರು. ಅಲ್ಲಿ ತಮ್ಮದೇ ಸಿವಿ ಅಸೋಸಿಯೇಟ್ಸ್ ಸಂಸ್ಥೆ ಆರಂಭಿಸಿದರು. ಅಮೆರಿಕದಲ್ಲಿನ ಪ್ರಮುಖ ಸೇತುವೆ ವಿನ್ಯಾಸ, ಹೆದ್ದಾರಿ ವಿನ್ಯಾಸ, ಸಮೀಕ್ಷೆ, ನಿರ್ಮಾಣ ತಪಾಸಣೆ ಮತ್ತು ನಿರ್ವಹಣೆ ಸೇವೆಗಳನ್ನು ಇವರ ಸಂಸ್ಥೆ ಒದಗಿಸುತ್ತಿದೆ. ಅಮೆರಿಕದ ನ್ಯೂಯಾರ್ಕ್, ನ್ಯೂಜೆರ್ಸಿ, ಟೆಕ್ಸಾಸ್, ಪೆನ್ಸಿಲ್ವೇನಿಯಾಗಳಲ್ಲಿ ಇವರ ಸಂಸ್ಥೆ ವೃತ್ತಿ ಪರವಾನಗಿ ಹೊಂದಿದೆ. 2006ರಲ್ಲಿ ಅಂದಿನ ಯುಎಸ್ ಸೆನೆಟರ್ ಹಿಲರಿ ಕ್ಲಿಂಟನ್ ಭಾಗವಹಿಸಿದ್ದ ಸಮಾರಂಭದಲ್ಲಿ ಶಶಿಕುಮಾರ್ ಅವರು 'ಅತ್ಯುತ್ತಮ ಏಷ್ಯನ್ ಅಮೆರಿಕನ್ ಇನ್ ಬ್ಯುಸಿನೆಸ್' ಪ್ರಶಸ್ತಿ ಪಡೆದಿದ್ದಾರೆ. ಶಶಿಕುಮಾರ್ ಅವರು ತಾವು ಓದಿದ ಮೈಸೂರಿನ ಭಗಿನಿ ಸೇವಾ ಸಮಾಜ ವಿದ್ಯಾ ಸಂಸ್ಥೆಗೆ ವಿದ್ಯಾರ್ಥಿ ವೇತನ ನೀಡುತ್ತಿದ್ದಾರೆ. ಕನ್ನಡ ಚುಟುಕು ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಹಿಂದೂ ಸಂರಕ್ಷಣಾ ಸಮಿತಿ, ನ್ಯೂಯಾರ್ಕ್‌ನ ಕನ್ನಡ ಕೂಟ, ನಾವಿಕ, ಬೃಂದಾವನ ಕನ್ನಡ ಸಂಸ್ಥೆ ಇತ್ಯಾದಿ ಸಂಘಟನೆಗಳಿಗೆ ಬೆಂಬಲ ನೀಡಿದ್ದಾರೆ. ಅಮೆರಿಕದ ರಾಜಕೀಯ ಚಟುವಟಿಕೆಗಳಲ್ಲೂ ಶಶಿಕುಮಾರ್ ಅವರು ಸಕ್ರಿಯರಾಗಿದ್ದಾರೆ.

ದಕ್ಷಿಣ ಧ್ರುವಕ್ಕೆ ಭೇಟಿ ನೀಡುವವರು ಏಳು ಲೇಯರ್‌ಗಳ ಉಡುಪು ಧರಿಸಬೇಕಾಗುತ್ತದೆ. ವಿಶೇಷ ವಿನ್ಯಾಸದ ಬೂಟುಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ವಿಶೇಷವಾಗಿ ವಿನ್ಯಾಸ ಮಾಡಲಾದ ಬಾಟಲಿಯಲ್ಲೇ ಮೂತ್ರ ವಿಸರ್ಜಿಸಬೇಕಾಗುತ್ತದೆ. ಈ ಯಾನದ ಸಂದರ್ಭದಲ್ಲಿ ಮೂರು ದಿನಕ್ಕೊಮ್ಮೆ ಮಾತ್ರ ಸ್ನಾನದ ಶಾಸ್ತ್ರ ಮಾಡಲು ಸಾಧ್ಯ! ಶಶಿಕುಮಾರ್ ಅವರ ಈ ಪ್ರವಾಸ ಸಾಹಸಕ್ಕೆ ಶುಭ ಹಾರೈಸೋಣ.

ಸಮಾಚಾರ ಸಣ್ಣದಲ್ಲ

ಮೇ ಎರಡನೇ ವಾರಕ್ಕೆ ಡ್ಯಾಮ್‌ಗೇಟ್ ಪೂರ್ಣ

ಕೊಪ್ಪಳ: ತುಂಗಭದ್ರಾ ಜಲಾಶಯದ ಎಲ್ಲ 33 ಹೊಸ ಕ್ರಸ್ಟ್ ಗೇಟ್ ನಿರ್ಮಾಣ ಕಾರ್ಯ ನಡೆದಿದ್ದು, 18ನೇ ಗೇಟ್ ಪೂರ್ಣ ಪ್ರಮಾಣದಲ್ಲಿ ಸಿದ್ಧಗೊಂಡಿದ್ದು, ಚೈನ್ ಮೂಲಕ ಮೂಮೆಂಟ್ ಮಾಡಿ ಪರಿಶೀಲಿಸಲು ಸೂಚನೆ ನೀಡಿದ್ದೇನೆ ಎಂದು ಸಚಿವ ಶಿವರಾಜ ತಂಗಡಗಿ ಹೇಳಿದರು. ಡ್ಯಾಮ್‌ಗೆ ತೆರಳಿ ಕಾಮಗಾರಿ ಪರಿಶೀಲನೆ ನಡೆಸಿ ಸುದ್ದಿಗಾರರ ಜತೆ ಮಾತನಾಡಿ ಅವರು, ಗುತ್ತಿಗೆ ಪಡೆದಿರುವ ಗುಜರಾತ್ ಮೂಲದ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿ ನಿರೀಕ್ಷೆಗೂ ಮೀರಿ ತ್ವರಿತವಾಗಿ ಕೆಲಸ ಮಾಡುತ್ತಿದೆ. ಈ ಮೊದಲು ಒಂದು ಟೀಂ ಡಿಸ್ ಮೆಟಲಿಂಗ್ ಮಾಡುವೂದಕ್ಕೆ, ಎರಡು ತಂಡ ಗೇಟ್ ಅಳವಡಿಕೆ ಮಾಡಲು ನಿಯೋಜನೆ ಮಾಡುವುದಾಗಿ ಹೇಳಿದ್ದರು. ಆದರೆ, ಇದೀಗ ತಲಾ ಎರಡು ತಂಡ ಕೆಲಸ ಮಾಡುತ್ತಿವೆ. ಮೊದಲ ಗೇಟ್ ಅಳವಡಿಕೆಗೆ ಟೈಮ್ ಹಿಡಿದಿದೆ. ಆದರೆ, ಸದ್ಯ ಒಂದು ತಿಂಗಳಿಗೆ 8 ಗೇಟ್ ಅಳವಡಿಕೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದೇ ವೇಗದಲ್ಲಿ ಕೆಲಸ ಮುಂದುವರೆದರೆ ಮೇ 2ನೇ ವಾರಕ್ಕೆ ಕೆಲಸ ಪೂರ್ಣಗೊಳ್ಳಲಿದೆ. ಮಳೆಗಾಲ ಬೇಗ ಶುರುವಾದರೂ ಕಾಲುವೆಗೆ ನೀರು ಬಿಡುಗಡೆ ಮಾಡಬಹುದು. ಒಂದು ಬೆಳೆ ತ್ಯಾಗ ಮಾಡಿರುವ ರೈತರಿಗೆ ಧನ್ಯವಾದ ತಿಳಿಸುತ್ತೇವೆ ಎಂದರು.

ಬೆಂಕಿ ಹಚ್ಚಿಕೊಂಡು ಬಿಜೆಪಿ ಮುಖಂಡ ಆತ್ಮಹತ್ಯೆ

ದಾವಣಗೆರೆ: ಕೌಟುಂಬಿಕ ಕಲಹದಿಂದ ಮನನೊಂದು ಬಿಜೆಪಿ ಮುಖಂಡರೊಬ್ಬರು ಕಾರಿನಲ್ಲೇ ಕುಳಿತು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ದಾವಣಗೆರೆ ತಾಲೂಕಿನ ನಾಗನೂರು ಬಳಿಯ ತೋಟದಲ್ಲಿ ಭಾನುವಾರ ಬೆಳಕಿಗೆ ಬಂದಿದೆ. ಮಹಾನಗರ ಪಾಲಿಕೆ ಮಾಜಿ ಸದಸ್ಯ ಚಂದ್ರಶೇಖರ್ ಸಂಕೋಲ್ ಸಾವನ್ನಪ್ಪಿದ್ದಾರೆ. ಶನಿವಾರ ಮನೆಯಲ್ಲಿ ಗಲಾಟೆ ನಡೆದಿದೆ ಎನ್ನಲಾಗುತ್ತಿದೆ. ಈ ವೇಳೆ ತಮ್ಮ ಇಬ್ಬರು ಮಕ್ಕಳು ಆತ್ಮಹತ್ಯೆಗೆ ಯತ್ನಿಸಿರುವ ಮಾಹಿತಿ ದೊರೆತಿದೆ. ಈ ಬೆಳವಣಿಗೆಯಿಂದ ಬೇಸರಗೊಂಡ ಚಂದ್ರಶೇಖರ್ ಸಂಕೋಲ್ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಅಸ್ವಸ್ಥಗೊಂಡ ಮಕ್ಕಳನ್ನು ದಾವಣಗೆರೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿಕೊಂಡಿದ್ದರಿಂದ ಇಡೀ ದೇಹ ಸುಟ್ಟು ಕರಕಲಾಗಿದೆ. ಹದಡಿ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ತನಿಖೆ ಆರಂಭಿಸಿದ್ದಾರೆ.

ಪೂರ್ವನಿಯೋಜಿತ ಕೃತ್ಯ: ವಿಡಿಯೊ ಸಾಕ್ಷಿ

ಬಳ್ಳಾರಿ: ವಾಲ್ಮೀಕಿ ಬ್ಯಾನರ್ ಕಟ್ಟುವಲ್ಲಿ ನಡೆದ ಗಲಾಟೆಯಲ್ಲಿ ಶಾಸಕ ಭರತ್‌ರೆಡ್ಡಿ ಆಪ್ತ ಸತೀಶ್‌ರೆಡ್ಡಿ, ಮಾಜಿ ಸಚಿವ ಬಿ.ಶ್ರೀರಾಮುಲುರಿಗೆ ಕೆಟ್ಟಪದ ಬಳಕೆ ಮಾಡಿ ನಿಂದಿಸಿದ್ದು, ಘಟನೆಯೊಂದು ಪೂರ್ವ ನಿಯೋಜಿತ ಎಂಬುದಕ್ಕೆ ಈ ವಿಡಿಯೊ ಸಾಕ್ಷಿಯಾಗಿದೆ ಎಂದು ಶಾಸಕ ಜಿ.ಜನಾರ್ದನರೆಡ್ಡಿ ಆರೋಪಿಸಿದರು. ನಗರದ ತಮ್ಮ ನಿವಾಸದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ವೀಡಿಯೋವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ನೂತನ ವರ್ಷ ಜ.1ರಂದು ಅಳವಡಿಸಿದ್ದ ಬ್ಯಾನರ್‌ನ್ನು ಅಂದು ಮಧ್ಯಾಹ್ನ ತೆಗೆಸಿದ ಬಳಿಕ ಅಂದು ಸಂಜೆ ಪುನಃ ಬ್ಯಾನರ್ ಕಟ್ಟಲು ಸತೀಶ್‌ರೆಡ್ಡಿ ಆಗಲೇ ಗಲಾಟೆ ಮಾಡಲು ಯೋಜನೆ ರೂಪಿಸಿಕೊಂಡು ಬಂದಿದ್ದಾರೆ. ಆಗ ಮಾಜಿ ಸಚಿವ ಬಿ.ಶ್ರೀರಾಮುಲು ಮೇಲೆ ಫೈರಿಂಗ್ ಮಾಡಲು ಆಗದೆ ಕೇವಲ ಬೈದಾಡಿದ್ದಾರೆ. ಆದರೆ, ಘಟನಾ ಸ್ಥಳಕ್ಕೆ ನಾನು ಬಂದಾಗ ಫೈರಿಂಗ್ ಮಾಡಿದ್ದಾರೆ ಎಂದರು. ರಾಜ್ಯ ಸರಕಾರ ಘಟನೆಯನ್ನು ಸಿಐಡಿಗೆ ನೀಡುವ ಮೂಲಕ ಕಣ್ಣೊರೆಸುವ ತಂತ್ರ ಅನುಸರಿಸುತ್ತಿದೆ. ಪ್ರಾಮಾಣಿಕ ಅಧಿಕಾರಿಗಳು ಆಗಿದ್ದರೆ ಶಾಸಕ ಭರತ್‌ರೆಡ್ಡಿ ಅವರನ್ನು ಇಷ್ಟೊತ್ತಿಗಾಗಲೇ ಬಂಧಿಸಬೇಕಿತ್ತು. ಸಿಐಡಿ ಮತ್ತು ನಮ್ಮ ಪೊಲೀಸರ ನಡುವೆ ಯಾವುದೇ ವ್ಯತ್ಯಾಸವಿಲ್ಲ. ಸಿಬಿಐ ಅಥವಾ ಹೈಕೋರ್ಟ್ ಹಾಲಿ ನ್ಯಾಯಾಧೀಶರಿಂದ ಮಾತ್ರ ತನಿಖೆ ನಡೆಸಿದರೆ ನ್ಯಾಯ ಸಿಗಲಿದೆ. ಈಗಾಗಲೇ ಹೇಳಿದಂತೆ ಘಟನೆ ಸಂಬಂಧ ಇದೇ ಜ.17 ರಂದು ಬಳ್ಳಾರಿಯಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದರು.

ಜಿ ರಾಮ್ ಜಿ ಕುರಿತ ಚರ್ಚೆಗೆ ಸಿದ್ಧ: ಅಶೋಕ್

ಮೈಸೂರು: ಜಿ ರಾಮ್ ಜಿ ಯೋಜನೆ ಕುರಿತು ಬಹಿರಂಗ ಚರ್ಚೆಗೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಸವಾಲನ್ನು ನಾವು ಸ್ವೀಕರಿಸುತ್ತೇವೆ. ಅವರು ಎಲ್ಲಿಗೆ ಕರೆಯುತ್ತಾರೋ ಅಲ್ಲಿ ಹೋಗುತ್ತೇವೆ. ಅಖಾಡ ಎಲ್ಲಿ ಆದರೂ ಸರಿ ನಾವು ಹೋಗುತ್ತೇವೆ ಎಂದು ವಿಪಕ್ಷ ನಾಯಕ ಆರ್..ಅಶೋಕ್ ಸವಾಲು ಹಾಕಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜೀವ್ ಗಾಂಧಿ, ರಾಹುಲ್ ಗಾಂಧಿ ಯೋಜನೆ ತಂದರೂ ನಾವು ವಿರೋಧ ಮಾಡಲ್ಲ. ಜಿ ರಾಮ್ ಜಿ ಯೋಜನೆಗೆ ವಿರೋಧ ಮಾಡಬಾರದು ಎಂದರು. ನರೇಂದ್ರ ಮೋದಿ ಸರಕಾರ ಉದ್ಯೋಗ ಖಾತ್ರಿ ಯೋಜನೆ ಲೋಪದೋಷ ಸರಿಪಡಿಸುವ ನಿಟ್ಟಿನಲ್ಲಿ ಸಾಗಿದೆ. ವಿಕಸಿತ ಭಾರತ ಜಿ ರಾಮ್ ಜಿ ಹೆಸರು ಬದಲಾವಣೆಗೆ ಕಾಂಗ್ರೆಸ್ ವಿರೋಧ ಮಾಡುತ್ತಿದೆ. ಉದ್ಯೋಗ ಖಾತ್ರಿ ಸರಿ ಇದ್ದರೆ ಕಾಂಗ್ರೆಸ್ ಕಾರ್ಯಕರ್ತರು ನಿರು ದ್ಯೋಗಿಗಳಾಗುತ್ತಾರೆ ಅನ್ನೋ ಭಯ ಎಂದು ಟೀಕಿಸಿದರು. ಕಾಂಗ್ರೆಸ್ ಕಾರ್ಯಕರ್ತರು ವೋಟ್ ಚೋರಿಯನ್ನೇ ದಂಧೆ ಮಾಡಿಕೊಂಡಿದ್ದರು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಸಾವಿರಾರು ಕೋಟಿ ಅವ್ಯವಹಾರ ಆಗಿದೆ. ವಾಲ್ಮೀಕಿ ಅಭಿವೃದ್ಧಿ ಹಣ ಹೊಡೆದಂಗೆ ಈಗ ಮಾಡಲು ಸಾಧ್ಯವಿಲ್ಲ. ನಕಲಿ ಜಾಬ್ ಕಾರ್ಡ್ ಮಾಡಲು ಸಾಧ್ಯವಿಲ್ಲ. ವೇತನ ಪಾವತಿ ಕೂಡ ಕಾಲಮಿತಿಯಲ್ಲೇ ಆಗುತ್ತದೆ ಎಂದರು.

ಅಕ್ರಮ ಗಣಿಗಾರಿಕೆ ಕೇಸ್ | ಸಿಬಿಐ ಕೋರ್ಟ್‌ನ ತೀರ್ಪು ಎತ್ತಿಹಿಡಿದರೆ ಜನಾರ್ದನ ರೆಡ್ಡಿಗೆ ಸಂಕಷ್ಟ

ಸುಪ್ರೀಂನಲ್ಲಿ ರೆಡ್ಡಿ ಭವಿಷ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು/ಬಳ್ಳಾರಿ

ಗಂಗಾವತಿ ಶಾಸಕ ಜನಾರ್ದನ ರೆಡ್ಡಿಗೆ ಮತ್ತೆ ಗಣಿ ಲೂಟಿ ಸಂಕಷ್ಟ ಎದುರಾಗಿದೆ. ಆಂಧ್ರದ ಅನುಮತಿ ಬಳಸಿ ರಾಜ್ಯದ ಗಡಿ ಒತ್ತುವರಿ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶ ಸುದಾಂಶು ದುಲಿಯಾ ನೇತೃತ್ವದಲ್ಲಿ ಸಮಿತಿಯ ವರದಿ ಸುಪ್ರೀಂಕೋರ್ಟ್‌ನಲ್ಲಿ ಜ.20 ರಂದು ಸಲ್ಲಿಕೆಯಾಗಲಿದೆ.

ಆಂಧ್ರದ ರಾಯದುರ್ಗ ತಾಲೂಕಿನ ಮಲಪನಗುಡಿ ಗ್ರಾಮದಲ್ಲಿ ಡ್ರೋನ್ ಮೂಲಕ ನಡೆದಿದ್ದ ಸರ್ವೇಯಲ್ಲಿ ಜನಾರ್ದನ ರೆಡ್ಡಿ ಒಡೆತನದ ಓಎಂಸಿ 2 ಹೆಸರಿನಲ್ಲಿ 39.50 ಹೆಕ್ಟೇರ್, ಅಂತರಗಂಗಮ್ಮ ಹೆಸರಿನ 68.50 ಹೆಕ್ಟೇರ್ ಪ್ರದೇಶಗಳಲ್ಲಿ ಗಣಿಗುತ್ತಿಗೆ ಪ್ರದೇಶ ಮತ್ತು ಗಡಿಗಳ ಹೊಂದಾಣಿಕೆ ಆಗಿಲ್ಲ. ಹೀಗಾಗಿ ಈ ಕಂಪನಿಗಳು ಕರ್ನಾಟಕ ರಾಜ್ಯದಲ್ಲಿ ಅತಿಕ್ರಮಣ ಮಾಡಿವೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ. ಕರ್ನಾಟಕ ಮತ್ತು ಆಂಧ್ರದ ನಡುವಿನ ಗಡಿ ನಾಶ ಪಡಿಸಿ, ಬಳ್ಳಾರಿ ಮೀಸಲು ಅರಣ್ಯ ಪ್ರದೇಶಗಳಾದ ವಿಠಲಾಪುರ, ತುಮಟಿ ಸೇರಿ ವಿವಿಧೆಡೆ ಅಕ್ರಮವಾಗಿ 28.90 ಲಕ್ಷ ಟನ್ ಅಕ್ರಮ ಅದಿರು ಸಾಗಾಟ ಮಾಡಿದ ಆರೋಪ ಇದೆ. ಈಗಾಗಲೇ ಅಕ್ರಮ ಸಾಬೀತಾಗಿ ಆಂಧ್ರದ ಸಿಬಿಐ ವಿಚಾರಣಾಧೀನ ನ್ಯಾಯಾಲಯ ಜನಾರ್ದನ ರೆಡ್ಡಿಗೆ ಶಿಕ್ಷೆಯನ್ನೂ ಪ್ರಕಟಿಸಿತ್ತು. ಅಮಿಕಸ್ ಕ್ಯೂರಿ ಹಾಗೂ ಆಂಧ್ರದ ಸಮ್ಮಿ ರೆಡ್ಡಿ ನೀಡಿದ್ದ ವರದಿ ಅನ್ವಯ ಕೋರ್ಟ್ ಹೊಸ ಸಮಿತಿ ರಚಿಸಿತ್ತು. ಸದ್ಯ ಈಗಿನ ನಿವೃತ್ತ ನ್ಯಾ.ದುಲಿಯಾ ಸಮಿತಿ ವರದಿಯಲ್ಲೂ ಅತಿಕ್ರಮಣ ನಡೆದಿದೆ ಎನ್ನುವುದು ದೃಢ ಪಟ್ಟಿದೆ. ನಿವೃತ್ತಿ ನ್ಯಾ.ದುಲಿಯಾ ವರದಿಗೆ ಗಣಿಗುತ್ತಿಗೆ ಪಡೆದ ಮಾಲೀಕರಿಂದ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿತ್ತು.

ಆಂಧ್ರದ ಅನುಮತಿ ಬಳಸಿ ರಾಜ್ಯದ ಗಡಿ ಒತ್ತುವರಿ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಾಧೀಶ ಸುದಾಂಶು ದುಲಿಯಾ ನೇತೃತ್ವದಲ್ಲಿ ಸಮಿತಿ ಮಾಡಲಾಗಿತ್ತು. ಆಂಧ್ರದ ರಾಯದುರ್ಗ ತಾಲೂಕಿನ ಮಲಪನಗುಡಿ ಗ್ರಾಮದಲ್ಲಿ ಡ್ರೋಣ್ ಮೂಲಕ ನಡೆದಿದ್ದ ಸರ್ವೇಯಲ್ಲಿ ಜನಾರ್ದನ ರೆಡ್ಡಿ ಒಡೆತನದ ಕಂಪನಿಗಳು ಕರ್ನಾಟಕ ರಾಜ್ಯದಲ್ಲಿ ಅತಿಕ್ರಮಣ ಮಾಡಿವೆ ಎಂದು ವರದಿಯಲ್ಲಿ ಉಲ್ಲೇಖವಾಗಿದೆ.

-**ಟಪಾಲ್ ಗಣೇಶ್**, ಗಣಿ ಉದ್ಯಮಿ

ಮುಖ್ಯಾಂಶಗಳು

- ಸುಪ್ರೀಂ ನಿವೃತ್ತ ನ್ಯಾ. ಸುದಾಂಶು ದುಲಿಯಾ ನೇತೃತ್ವದ ಸಮಿತಿಯಿಂದ ಜ.20ರಂದು ಸುಪ್ರೀಂಗೆ ವರದಿ ಸಲ್ಲಿಕೆ
- 29 ಲಕ್ಷ ಮೆಟ್ರಿಕ್ ಟನ್ ಅಕ್ರಮ . 884 ಕೋಟಿ ರು. ಮೊತ್ತದ ಅದಿರು ತೆಗೆದ ಆರೋಪ
- ಕರ್ನಾಟಕ, ಆಂಧ್ರ ಗಡಿರೇಖೆ ಅಳಿಸಿ ಹಾಕಿದ ಆರೋಪ
- 2025ರ ಮೇ 6ರಂದು ಸಿಬಿಐ ಕೋರ್ಟ್‌ನಿಂದ ಶಿಕ್ಷೆ ಪ್ರಕಟ
- 7 ವರ್ಷ ಜೈಲು ಶಿಕ್ಷೆಗೆ ಗುರಿಯಾಗಿ ಈಗಾಗಲೇ 3 ವರ್ಷ ಜೈಲು ಶಿಕ್ಷೆ ಅನುಭವಿಸಿರುವ ರೆಡ್ಡಿ
- ಅಕ್ರಮವಾಗಿ ಓಬಳಾಪುರಂ ಮೈನಿಂಗ್ ಮಾಡಿರುವ ಬಗ್ಗೆ ನಿವೃತ್ತ ನ್ಯಾಯಮೂರ್ತಿ ಸುದಾಸ್ ದುನಿಯಾ ಅವರಿಂದ ವರದಿ ಸಲ್ಲಿಕೆ
- 115 ಪುಟ ವರದಿ ನೀಡಿರುವ ಕಮಿಟಿ. ವರದಿಯಲ್ಲಿ ಅಕ್ರಮ ಸಾಬೀತು

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ 2025ರ ಸ್ಕಾಚ್ ಆರ್ಥಿಕ ಸೇರ್ಪಡೆ ಪ್ರಶಸ್ತಿ

ದೆಹಲಿ: ಗ್ರಾಮೀಣ ಭಾಗದಲ್ಲಿ ಸ್ವಸಹಾಯ ಸಂಘಗಳ ಮೂಲಕ ಆರ್ಥಿಕ ಸೇರ್ಪಡೆ ಹಾಗೂ ಬಡವರ ಸಬಲೀಕರಣಕ್ಕಾಗಿ ಕೈಗೊಂಡ ವೈವಿಧ್ಯಮಯ ಯೋಜನೆಗಳನ್ನು ಗುರುತಿಸಿ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ 2025ನೇ ಸಾಲಿನ ಪ್ರತಿಷ್ಠಿತ 'ಸ್ಕಾಚ್ ಆರ್ಥಿಕ ಸೇರ್ಪಡೆ ಪ್ರಶಸ್ತಿ' ಒಲಿದುಬಂದಿದೆ.

ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆಯವರ ದೂರದೃಷ್ಟಿಯ ಫಲವಾಗಿ ಇಂದು ರಾಜ್ಯದ 53 ಲಕ್ಷ ಕುಟುಂಬಗಳು ಆರ್ಥಿಕತೆಯ ಮುಖ್ಯ ವಾಹಿನಿಗೆ ಬಂದಿವೆ. ಈ ಪ್ರಶಸ್ತಿಯು ಸಂಸ್ಥೆಯ ಸ್ಥಾಪಕರಾದ ಡಾ. ಡಿ. ವೀರೇಂದ್ರ ಹೆಗ್ಗಡೆ ಹಾಗೂ ಮಾತೃಶ್ರೀ ಹೇಮಾವತಿ ವಿ. ಹೆಗ್ಗಡೆ ಅವರಿಗೆ ಸಲ್ಲುವ ಗೌರವ.

-**ಅನಿಲ್ ಕುಮಾರ್**, ಸಿಇಒ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ



ಹಲಿಯಲ್ಲಿ ಸ್ಕಾಚ್ ಗ್ರೂಪ್‌ನ ಮುಖ್ಯಸ್ಥ ಸಮೀರ್ ಕೋಚ್ಚಾರ್ ಅವರಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಇಒ ಅನಿಲ್ ಕುಮಾರ್ ಎಸ್.ಎಸ್ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಶಾಂತರಾಮ್ ಆರ್. ಪೈ ಅವರು ಪ್ರಶಸ್ತಿ ಸ್ವೀಕರಿಸಿದರು.

ದೆಹಲಿಯ ಹ್ಯಾಬಿಟೇಟ್ ಸೆಂಟರ್‌ನಲ್ಲಿ ಆಯೋಜಿಸಲಾಗಿದ್ದ ಅದ್ದೂರಿ ಸಮಾರಂಭದಲ್ಲಿ, ಸ್ಕಾಚ್ ಗ್ರೂಪ್‌ನ ಮುಖ್ಯಸ್ಥ ಸಮೀರ್ ಕೋಚ್ಚಾರ್ ಅವರಿಂದ ಯೋಜನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್.ಎಸ್. ಹಾಗೂ ಮುಖ್ಯ ಹಣಕಾಸು ಅಧಿಕಾರಿ ಶಾಂತರಾಮ್ ಆರ್. ಪೈ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಸಾಧನೆಯ ಹಾದಿ: ಬಡವರಿಗೆ ದಾನ ನೀಡುವ ಬದಲು ಸ್ವಾವಲಂಬನೆ ಮಂತ್ರ ಬೋಧಿಸಿದ ಯೋಜನೆಯು ಇಂದು ದೇಶದಲ್ಲೇ ಮಾದರಿಯಾಗಿ ಬೆಳೆದಿದೆ. ರಾಜ್ಯಾದ್ಯಂತ 6,20,000ಕ್ಕೂ ಅಧಿಕ ಸಂಘಗಳ ರಚನೆ. ಕಳೆದ ವರ್ಷಾಂತ್ಯಕ್ಕೆ ಸಂಘಗಳ ಹೊರಬಾಕಿ ಮೊತ್ತ 26,304 ಕೋಟಿ ರೂ. ತಲುಪಿದೆ. ದೇಶದ 6 ಪ್ರಮುಖ ಬ್ಯಾಂಕುಗಳಿಗೆ ಬಿಸಿನೆಸ್ ಕರೆಸ್ಪಾಂಡೆಂಟ್ ಆಗಿ ಕಾರ್ಯನಿರ್ವಹಣೆ.

ಕನಿಷ್ಠ ಬಡ್ಡಿ: ಯೋಜನೆಯಡಿ ಸಂಘದ ಸದಸ್ಯರಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ (ಶೇ.14 ರಿಂದ 15) ಸಾಲ ಸೌಲಭ್ಯ ದೊರೆಯುತ್ತಿದೆ. ವಿಶೇಷವೆಂದರೆ, ವಾರದ ಮರುಪಾವತಿ ಪದ್ಧತಿಯಿಂದಾಗಿ ಸದಸ್ಯರಿಗೆ ಹೊರೆ ಕಡಿಮೆಯಾಗುತ್ತಿದೆ. 1 ಲಕ್ಷ ರು. ಸಾಲಕ್ಕೆ 50 ವಾರಗಳ ಅವಧಿಗೆ ವಾರಕ್ಕೆ 2,146 ರು. ಕಂತು ಪಾವತಿಸಬೇಕಿದ್ದು, ವರ್ಷಕ್ಕೆ ಒಟ್ಟು ಬಡ್ಡಿ ಕೇವಲ 7,246 ರೂ. ಮಾತ್ರ ಸಾಲ ಪಡೆಯಲು ಯಾವುದೇ ಆಸ್ತಿ ಅಡಮಾನ ಅಥವಾ ಮೂರನೇ ವ್ಯಕ್ತಿಯ ಗ್ಯಾರಂಟಿ ಅಗತ್ಯವಿಲ್ಲ. ಬಿ.ಸಿ ಟ್ರಸ್ಟ್‌ನ ಕಾರ್ಯವೈಖರಿಯನ್ನು ಈ ಸಂದರ್ಭದಲ್ಲಿ ಶ್ಲಾಘಿಸಲಾಯಿತು.

ತೆನೆ ಹೊತ್ತ ಮಹಿಳೆಗೆ ಚಕ್ರ ಸೇರ್ಪಡೆ?

← ಮೊದಲಪುಟದಿಂದ

ಪಕ್ಷದ ಚಿಹ್ನೆಯ ಜತೆ ಪೂರ್ಣವೃತ್ತ ಹಾಕುವುದರಿಂದ ಪಕ್ಷಕ್ಕೆ ಅಭ್ಯುದಯ, ಶ್ರೇಯಸ್ಸು ಎಂದು ವಾಸ್ತುಶಾಸ್ತ್ರದ ಅಭಿಮತ. ಸಂಕ್ರಾತಿ ಪಥ ಬದಲು ಜೆಡಿಎಸ್‌ನಲ್ಲೂ ಬದಲಾವಣೆ ಕಾಣಲಿದೆ ಎಂಬುದು ದೇವೇಗೌಡರ ನಂಬಿಕೆಯಾಗಿದೆ. ಈ ಸಂಬಂಧ ದೇವೇಗೌಡರ ಅದೃಷ್ಟದ ಲೆಕ್ಕಾಚಾರವಿದೆ ಎನ್ನುವುದು ಜೆಡಿಎಸ್ ನಾಯಕರ ಮಾತಾಗಿದೆ.

2001ರಿಂದ ತೆನೆ ಹೊತ್ತ ಮಹಿಳೆ ಜನತಾದಳ (ಜಾತ್ಯತೀತ) ಪಕ್ಷದ ಅಧಿಕೃತ ಚಿಹ್ನೆ. ಪಕ್ಷದ ಚಿಹ್ನೆಗೆ ಹೆಚ್ಚುವರಿ ಚಕ್ರ ಸೇರಿಸುವ ಮೂಲಕ ಹೊಸ ರೂಪ ನೀಡಲು ತೀರ್ಮಾನಿಸಿದೆ. ಈ ಸಂಬಂಧ ಜೆಡಿಎಸ್ ಚುನಾವಣಾ ಆಯೋಗಕ್ಕೆ ಪ್ರಸ್ತಾಪ ಸಲ್ಲಿಸಲು ನಿರ್ಧರಿಸಿದೆ. ಪರಿಷ್ಕೃತ ಚಿಹ್ನೆಗೆ ಕೇಂದ್ರ ಚುನಾವಣಾ ಆಯೋಗದಿಂದ ಅನುಮತಿ ಸಿಕ್ಕರೆ, ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗೆ ಹೊಸ ಚಿಹ್ನೆಯೊಂದಿಗೆ ಅಖಾಡಕ್ಕಿಳಿಯಲಿದೆ. ಒಂದು ವೇಳೆ ಸ್ಥಳೀಯ ಸಂಸ್ಥೆ ಚುನಾವಣೆ ವೇಳೆಗೆ ಸಿಗದಿದ್ದರೆ, 2028ರ ವಿಧಾನಸಭಾ ಚುನಾವಣೆಗೆ ಹೊಸ ಚಿಹ್ನೆ ಪಡೆದು ಸ್ಪರ್ಧಿಸುವ ಸಾಧ್ಯತೆ ಇದೆ. ಒಟ್ಟಿನಲ್ಲಿ ಪಕ್ಷವನ್ನು ಮತ್ತೆ ಬಲಪಡಿಸಲು ದೇವೇಗೌಡರು ಪಣ ತೊಟ್ಟಿದ್ದು ಇದೀಗ ಚಿಹ್ನೆಗೆ ಹೊಸ ರೂಪ ನೀಡಲು ಮುಂದಾಗಿದ್ದಾರೆ. ಆ ಮೂಲಕ ಚುನಾವಣಾ ಅದೃಷ್ಟದ ನಿರೀಕ್ಷೆಯಲ್ಲಿದ್ದಾರೆ.

ಕುಮಾರಸ್ವಾಮಿ ಯಾವ ಪಾರ್ಟಿಯಿಂದ ರಾಜ್ಯಕ್ಕೆ ಬರ್ತಾರೆ?

ಕಲಬುರಗಿ: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮತ್ತೆ ರಾಜ್ಯ ರಾಜಕಾರಣಕ್ಕೆ ಮರಳುತ್ತಾರೆ ಎಂಬ ಸುದ್ದಿಗಳ ಬೆನ್ನಲ್ಲೇ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ. ಕುಮಾರಸ್ವಾಮಿ ಅವರು ರಾಜ್ಯಕ್ಕೆ ಬರುವುದಾದರೆ ಮೊದಲು ಯಾವ ಪಾರ್ಟಿಯಿಂದ ಬರುತ್ತಾರೆ ಎಂಬುದನ್ನು ಸ್ಪಷ್ಟಪಡಿಸಲಿ ಎಂದು ಲೇವಡಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಹಾಗೂ ಕುಮಾರಸ್ವಾಮಿ ಅವರ ನಡೆಗಳ ಬಗ್ಗೆ ಸಾಲು ಸಾಲು ಪ್ರಶ್ನೆಗಳನ್ನು ಎಸೆದು, ಜೆಡಿಎಸ್ ಅವರ ಪ್ಲಾಟ್‌ನಲ್ಲಿ ಬಿಜೆಪಿ ಈಗಾಗಲೇ ಬಹುಮಹಡಿ ಕಟ್ಟಡ ಕಟ್ಟಿಕೊಂಡಿದೆ. ಈಗ ಎಲ್ಲಾದರೂ ಜೆಡಿಎಸ್ ಉಳಿದಿದೆಯೇ? ಅವರ ಸ್ವಂತ ಸಂಬಂಧಿಕರೇ ಬಿಜೆಪಿ ಟಿಕೆಟ್ ಮೇಲೆ ಸ್ಪರ್ಧಿಸುತ್ತಾರೆ ಎಂದರೆ ಆ ಪಾರ್ಟಿ ಎಷ್ಟು ಪ್ರಬಲವಾಗಿದೆ ಎಂಬುದು ಅರ್ಥವಾಗುತ್ತದೆ. ಹಿಂದೆ ಕುಮಾರಸ್ವಾಮಿ ಅವರು ರಾಜ್ಯ ರಾಜಕಾರಣದಲ್ಲಿದ್ದಾಗ ಏನಾಯಿತು ಎಂಬುದು ಎಲ್ಲರಿಗೂ ತಿಳಿದಿದೆ ಎಂದು ಟೀಕಿಸಿದರು.

ಪಾರ್ಟಿಯೇ ಸೇಲ್ ಡೀಡ್ ಆಗಿದೆ!: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಲೀಸ್ ಸಿಎಂ ಎಂದು ಕರೆದ ಕುಮಾರಸ್ವಾಮಿ ಅವರ ಹೇಳಿಕೆಗೆ ತಿರುಗೇಟು ನೀಡಿದ ಸಚಿವರು, ಇವರು ತಮ್ಮ ಪಾರ್ಟಿಯನ್ನೇ ಬಿಜೆಪಿಗೆ ಮಾರಾಟಕ್ಕಿಟ್ಟಿದ್ದಾರೆ. ಇವರು ಅದಕ್ಕೆ ಲೀಸ್ ಅಥವಾ ಸಬ್ ಲೀಸ್ ಎನ್ನುತ್ತಿರಬಹುದು, ಆದರೆ, ಬಿಜೆಪಿಯವರು ಜೆಡಿಎಸ್ ಅನ್ನು ಅಕ್ರಮ ಸಕ್ರಮ ಮಾಡಿಕೊಂಡಿದ್ದಾರೆ. ಮಂಡ್ಯ ದಲ್ಲಿ ಬಿಜೆಪಿಯವರ ಕೈಕಾಲು ಬಿದ್ದು ಒಪ್ಪಂದ ಮಾಡಿಕೊಳ್ಳುವ ಪರಿಸ್ಥಿತಿಯಲ್ಲಿರುವ ಅವರಿಗೆ ಈಗ ಸೇಲ್ ಡೀಡ್ ಗೊಂದಲ ಕಾಡುತ್ತಿದೆ ಎಂದರು.

ಬಿಜೆಪಿ-ಜೆಡಿಎಸ್‌ಗೆ ಸ್ವಂತ ಬಲವಿಲ್ಲ

ಬಿಜೆಪಿ ಮತ್ತು ಜೆಡಿಎಸ್ ಎಂದಾದರೂ ರಾಜ್ಯದಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿದ್ದಾರೆಯೇ? ಬಿಜೆಪಿಯೇ ಇದುವರೆಗೆ ಸ್ವಂತವಾಗಿ ಅಧಿಕಾರ ಹಿಡಿಯಲು ಸಾಧ್ಯವಾಗಿಲ್ಲ ಎಂದ ಮೇಲೆ ಇನ್ನು ಜೆಡಿಎಸ್ ಕಥೆ ಏನು? ಬಳ್ಳಾರಿಯಲ್ಲಿ ಪಾದಯಾತ್ರೆ ಮಾಡುವುದಾದರೆ ಮಾಡಲಿ, ಅದು ಆರೋಗ್ಯಕ್ಕೆ ಒಳ್ಳೆಯದು. ಆದರೆ ನಮ್ಮ ಮೇಕೆದಾಟು ಅಥವಾ ಕೃಷ್ಣಾ ಪಾದಯಾತ್ರೆಗಳಂತೆ ಜನಬೆಂಬಲ ಇವರಿಗೆ ಸಿಗುವುದಿಲ್ಲ. ಕೇವಲ ನಾಲ್ಕು ಜನ ಸೇರಿ ಪಾದಯಾತ್ರೆ ಮಾಡ ಬೇಕಾಗುತ್ತದೆ ಅಷ್ಟೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವ್ಯಂಗ್ಯವಾಡಿದರು.

ಮಧ್ಯಾರಾಧನೆ ರಾಯರ ಮಠ, ಉತ್ತರಾಧಿ ಮಠ ಉಭಯ ಶ್ರೀಗಳ ಸಮಾಗಮ

ಹಂಪಿ ಶ್ರೀನರಹರಿ ತೀರ್ಥರ ಆರಾಧನೋತ್ಸವ

ಹೊಸಪೇಟೆ: ಹಂಪಿ ಶ್ರೀನರಹರಿ ತೀರ್ಥರ ಬೃಂದಾವನ ಸನ್ನಿಧಿಯಲ್ಲಿ ರಾಯರ ಮಠದ ಶ್ರೀಸುಬುಧೇಂದ್ರ ತೀರ್ಥರು ಹಾಗೂ ಶ್ರೀಉತ್ತರಾದಿ ಮಠದ ಶ್ರೀಸತ್ಯಾತ್ಮ ತೀರ್ಥರು ಶ್ರೀನರಹರಿ ತೀರ್ಥರ ಮಧ್ಯಾರಾಧನೆಯಲ್ಲಿ ಸಮಾಗಮಗೊಂಡರು.

ಹಂಪಿ ತುಂಗಭದ್ರಾ ನದಿ ತೀರದ ನರಹರಿ ತೀರ್ಥರ ಬೃಂದಾವನ ಸನ್ನಿಧಿಯಲ್ಲಿ ಪೂರ್ವಾರಾಧನೆ, ಮಧ್ಯಾರಾಧನೆ ವಿಶೇಷವಾಗಿ ಉತ್ತರಾದಿ ಮಠದ ಶ್ರೀ ಸತ್ಯಾತ್ಮ ತೀರ್ಥರು ಬೃಂದಾವನಕ್ಕೆ ಪಂಚಾಮೃತಾಭಿಷೇಕ ನೆರವೇರಿಸಿ ಸಂಸ್ಥಾನ ಪೂಜೆ ಮಾಡಿದರು. ಬೃಂದಾವನಕ್ಕೆ ವಿಶೇಷ ಅಲಂಕಾರ, ನೇವೈದ್ಯ, ಮಹಾಮಂಗಳರಾತಿ ನೆರವೇರಿಸಿದರು. ನೆರೆದಿದ್ದ ಭಕ್ತರಿಗೆ ಅನುಗ್ರಹ ಸಂದೇಶ ನೀಡಿದರು. ಶ್ರೀ ಸತ್ಮಾತ್ಮ ತೀರ್ಥರು ರಾಯರ ಮಠದ ಶ್ರೀಸುಬುಧೇಂದ್ರ ತೀರ್ಥರನ್ನು ಆತ್ಮೀಯವಾಗಿ ಬರಮಾಡಿಕೊಂಡರು. ನಂತರ ಉಭಯ ಸ್ವಾಮೀಜಿಗಳು ಶ್ರೀನರಹರಿ ತೀರ್ಥರ ಬೃಂದಾವನಕ್ಕೆ ಆರತಿ ಬೆಳಗಿ ಪರಸ್ಪರ ಶಾಲುಹೊಂದಿಸಿ ಗೌರವಿಸಿದರು. ಇದೊಂದು ಐತಿಹಾಸಿಕ ಕ್ಷಣವಾಗಿದ್ದು, ಮಾಧ್ವ ಪ್ರಪಂಚಕ್ಕೆ ಮಾತ್ರವಲ್ಲದೆ ವೈಷ್ಣವರಿಗೆ ಅವಿಸ್ಮರಣೀಯವಾಗಿದೆ. ಕಳೆದ ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ಸೌಹಾರ್ದ ಸಮಾಗಮ ನಡೆದಿತ್ತು. ಅದೇ ಮುಂದುವರಿದಿದ್ದು ಇದು ಹೀಗೆ ಮುಂದುವರೆಯಲಿದೆ ಎಂದರು.

ಈ ಸಂದರ್ಭದಲ್ಲಿ ಶ್ರೀಮಠ ಪಂಡಿತರಾದ ಬಂಡಿ ಶಾಮಾಚಾರ್ಯ, ದ್ವಾರಕನಾಥಾಚಾರ್ಯ, ಸುಳಾದಿ ಹನುಮೇಶಾಚಾರ್ಯ, ವೆಂಕಟೇಶಾಚಾರ್ಯ, ಪಿ.ವಿ.ಹರಿನಾಥಾಚಾರ್ಯ, ಸುಮಂತ್ ಕುಲಕರ್ಣಿ, ಡಾಣಾಪುರ ಶ್ರೀನಿವಾಸ, ಗುರುರಾಜ್ ದಿಗ್ಗಾವಿ ಸೇರಿದಂತೆ ರಾಜ್ಯ, ಹೊರ ರಾಜ್ಯದ ಭಕ್ತರು ಇದ್ದರು.

ಶ್ರೀನರಹರಿ ತೀರ್ಥರ ಬೃಂದಾವನ ಸನ್ನಿಧಿ ಹಂಪಿಯಲ್ಲಿ ರಾಯರ ಮಠದ ಶ್ರೀಸುಬುಧೇಂದ್ರ ತೀರ್ಥರು ಹಾಗೂ ಶ್ರೀಉತ್ತರಾದಿ ಮಠದ ಶ್ರೀಸತ್ಯಾತ್ಮ ತೀರ್ಥರು ಸಮಾಗೊಂಡರು.

ರಾಯರ ಮಠದ ಶ್ರೀಗಳಿಂದ ಸಂಸ್ಥಾನ ಪೂಜೆ

ಶ್ರೀನರಹರಿ ತೀರ್ಥರ ಉತ್ತರಾಧನೆ ನಿಮಿತ್ತ ಬೃಂದಾವನಕ್ಕೆ ಮಂತ್ರಾಲಯ ಮಠದ ಶ್ರೀಸುಬುಧೇಂದ್ರ ತೀರ್ಥ ಸ್ವಾಮೀಜಿ ವಿಶೇಷವಾಗಿ ಫಲ ಪಂಚಾಮೃತಾಭಿಷೇಕ ನೆರವೇರಿಸಿದರು. ಬಳಿಕ ಶ್ರೀಮೂಲ ರಾಮದೇವರ ಸಂಸ್ಥಾನದ ಪೂಜೆ ನೆರವೇರಿಸಿ ನೆರೆದಿದ್ದ ಭಕ್ತರಿಗೆ ಅನುಗ್ರಹ ಸಂದೇಶ ನೀಡಿ, ಶ್ರೀನರಹರಿ ತೀರ್ಥರು ಮನುಕುಲಕ್ಕೆ ವಿಶೇಷ ಕೊಡುಗೆ ನೀಡಿದ್ದಾರೆ. ಅವರ ಆರಾಧನೆ ದಿನದಂದು ಪಾದೋದಕ, ಹಸ್ತೋದಕ ಸ್ವೀಕಾರ ಹಾಗೂ ಅವರ ಗ್ರಂಥಗಳ ಬಗ್ಗೆ ಸ್ಮರಣೆಮಾಡುವುದೇ ಮಹಾಭಾಗ್ಯ ಎಂದರು.

ಬೆಂಗಳೂರಿನಲ್ಲಿ ಈಚೆಗೆ ಶ್ರೀಉತ್ತಾರಾದಿ ಮಠದ ಶ್ರೀಗಳೊಂದಿಗೆ ನಡೆದ ಸೌಹಾರ್ದ ಸಮಾಗಮದ ಸಂದರ್ಭದಲ್ಲಿ ನರಹರಿ ತೀರ್ಥರ ಎರಡು ದಿನಗಳ ಆರಾಧನೆ ನೆರವೇರಿಸಲು ತಿಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪೂರ್ವಾರಾಧನೆ, ಮಧ್ಯಾರಾಧನೆ ನೆರವೇರಿಸಿ ಶ್ರೀಗಳು ನಮ್ಮನ್ನು ಆತ್ಮೀಯವಾಗಿ ಬರಮಾಡಿಕೊಂಡರು. ಈ ಸೌಹಾರ್ದ ಹೆಜ್ಜೆ ಆರಂಭವಾಗಿದ್ದು ಮುಂದಿನ ದಿನಗಳಲ್ಲಿ ಮುಂದುವರಿಯಲಿದೆ. ಕೇವಲ ಶ್ರೀಗಳಿಂದ ಮಾತ್ರ ಸೌಹಾರ್ದ ಆಗಿದ್ದಲ್ಲ, ಶಿಷ್ಯರು, ಭಕ್ತರು ಎಲ್ಲರೂ ಕಾರಣರಾಗಿದ್ದಾರೆ. ಶ್ರೀನರಹರಿ ತೀರ್ಥರ ಸನ್ನಿಧಿಯಲ್ಲಿ ಈ ಹಿಂದೆ ಪ್ರಕ್ಷುಬ್ಧ ವಾತಾವರಣದ ಸನ್ನಿವೇಶವಿತ್ತು. ಆದರೆ ಅದೆಲ್ಲವೂ ಮುಗಿದು ವೈಷ್ಣವರ ಪಾಲಿಗೆ ಭಾಗ್ಯದ ಕ್ಷಣವಾಗಿದೆ ಎಂದು ಹೇಳಿದರು.

ರಾಜ್ಯದ ಮುಕುಟಕ್ಕೆ ಮತ್ತೊಂದು ಗರಿ

← ಮೊದಲಪುಟದಿಂದ

'ಸಮಾನ ಪಾಲುದಾರಿಕೆ-ಶಾಶ್ವತ ಶಾಂತಿ' ಎನ್ನುವುದು ಅವರ ಧ್ಯೇಯವಾಗಿದ್ದು, ಶಾಂತಿ ರಕ್ಷಣಾ ಕಾರ್ಯಾಚರಣೆಗಳ ಮುಂದಾಳತ್ವದಲ್ಲಿ ಲಿಂಗ ಸಮಾನತೆಗೆ ಒತ್ತು ನೀಡಿದ್ದಾರೆ. ಮೇಜರ್ ಸ್ವಾತಿ ಅವರ ನೇತೃತ್ವದಲ್ಲಿ ಭಾರತೀಯ ತಂಡವು ಗ್ರಾಮೀಣ ಮಟ್ಟದಲ್ಲಿ ಶಾಂತಿ ಸ್ಥಾಪನೆಗೆ ಅಪಾರ ಕೊಡುಗೆ ನೀಡಿದ್ದು, ದೂರದ ಪ್ರದೇಶಗಳಲ್ಲಿ ಸಣ್ಣ-ದೊಡ್ಡ ಪೆಟ್ರೋಲಿಂಗ್, ನದಿ ಪ್ರದೇಶದ ಪೆಟ್ರೋಲ್ ಮತ್ತು ಡೈನಾಮಿಕ್ ಏರ್ ಪ್ಯಾಟ್ರೋಲ್‌ಗಳನ್ನು ಯಶಸ್ವಿಯಾಗಿ ನಡೆಸಿ, ಸಂಘರ್ಷ ಪೀಡಿತ ದೇಶದಲ್ಲಿ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷತೆ ಒದಗಿಸಿದೆ. ಇದರಿಂದ ಮಹಿಳೆಯರ ಸಮುದಾಯ ದಲ್ಲಿ ಭಾಗವಹಿಸುವಿಕೆ ಹೆಚ್ಚಾಗಿ, ನಂಬಿಕೆ ಮತ್ತು ಸಂವಹನ ಬಲಗೊಂಡಿದೆ. ಮೇಜರ್ ಸ್ವಾತಿ ಅವರ ನೇರ ಆಜ್ಞೆಯಡಿಯಲ್ಲಿ, ತಂಡವು ಕಡಿಮೆ ಮತ್ತು ದೀರ್ಘ ದೂರದ ಗಸ್ತುಗಳು, ಸಂಯೋಜಿತ ನದಿ ತೀರದ ಗಸ್ತುಗಳು ಮತ್ತು ದಕ್ಷಿಣ ಸುಡಾನ್‌ನ ಅತ್ಯಂತ ದೂರದ ಕೌಂಟಿಗಳನ್ನು ತಲುಪುವ ಕ್ರಿಯಾತ್ಮಕ ವಾಯು ಗಸ್ತುಗಳು ಸೇರಿದಂತೆ ವೈವಿಧ್ಯಮಯ ಕ ಡಿಯಾರ್ಯಾಚರಣೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಈ ಕಾರ್ಯತಂತ್ರದ ಕಾರ್ಯಾ ಚರಣೆಗಳು ಸಂಘರ್ಷ ಪೀಡಿತ ಪ್ರದೇಶಗಳಲ್ಲಿ 5,000ಕ್ಕೂ ಹೆಚ್ಚು ಮಹಿಳೆಯರಿಗೆ ಸುರಕ್ಷಿತ ವಾತಾವರಣವನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಬಳ್ಳಾರಿ ದೊಂಬಿ: ಸಿಐಡಿ ತನಿಖೆ ಆರಂಭ

ಬಳ್ಳಾರಿ: ಬಳ್ಳಾರಿಯಲ್ಲಿ ನಡೆದಿದ್ದ ಘರ್ಷಣೆ ಮತ್ತು ಕಾರ್ಯಕರ್ತನ ಕೊಲೆಗೆ ಸಂಬಂಧಿಸಿದ ನಾಲ್ಕು ಪ್ರಕರಣಗಳ ತನಿಖೆ ಹೊಣೆ ಹೊತ್ತಿರುವ ಸಿಐಡಿ ಅಧಿಕಾರಿಗಳು, ಭಾನುವಾರ ಘಟನಾ ಸ್ಥಳ ಪರಿಶೀಲಿಸಿದರು. ನಂತರ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾಹಿತಿ ಪಡೆದರು. ಸಿಐಡಿ ಎಸ್‌ಪಿ ಡಾ.ಹರ್ಷಾ ಪ್ರಿಯಂವದಾ ಅವರ ನೇತೃತ್ವದ ಅಧಿಕಾರಿಗಳ ತಂಡ ಜಿಲ್ಲಾ ಪೊಲೀಸ್ ಕಚೇರಿಗೆ ಆಗಮಿಸಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಮನ್ ಪನ್ನೇಕರ್ ಅವರೊಂದಿಗೆ ಚರ್ಚೆ ನಡೆಸಿತು. ನಾಲ್ಕೂ ಪ್ರಕರಣಗಳ ತನಿಖಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿತು. ಘಟನೆ ನಡೆದ ಅವ್ವಂಬಾವಿಯಲ್ಲಿ ಜನಾರ್ದನ ರೆಡ್ಡಿ ಅವರ ನಿವಾಸದ ಬಳಿ ತೆರಳಿದ ಅಧಿಕಾರಿಗಳು ಪರಿಶೀಲಿಸಿದರು.

ಕಲ್ಯಾಣ ಕರ್ನಾಟಕಕ್ಕೆ ಬೇಕಿದೆ ಪ್ರತ್ಯೇಕ ಸಚಿವಾಲಯದ ಬಲ | ಘೋಷಣೆಗಳ ನಡುವೆ ಕಮರುತ್ತಿವೆ ಜನರ ನೂರಾರು ಕನಸುಗಳು

ಕಲ್ಯಾಣದ ಸಚಿವಾಲಯ ಅನುಷ್ಠಾನ ಯಾವಾಗ?

ದೇವೇಂದ್ರ ಜಾಡಿ ಕಲಬುರಗಿ

ಸಂವಿಧಾನದ 371(ಜೆ) ವಿಧಿ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಅಭಿವೃದ್ಧಿಗೆ ಸಂಜೀವಿನಿಯಂತೆ ಬಂದಿದ್ದರೂ, ಅದರ ಪರಿಣಾಮಕಾರಿ ಅನುಷ್ಠಾನ ಇನ್ನು ಆಗಿಲ್ಲ. ದಶಕಗಳಿಂದಲೂ ಈ ಭಾಗದ ಜನರ ಪ್ರಮುಖ ಬೇಡಿಕೆಯಾಗಿರುವ ಪ್ರತ್ಯೇಕ ಕಲ್ಯಾಣ ಕರ್ನಾಟಕ ಸಚಿವಾಲಯ ಕಾಗದಕ್ಕೆ ಸೀಮಿತ ಗೊಂಡಿದ್ದು, ವಾಸ್ತವದಲ್ಲಿ ನೆಲಕಚ್ಚಿದೆ. 'ದೇವರು ಕೊಟ್ಟರೂ ಪೂಜಾರಿ ಕೊಡಲಿಲ್ಲ' ಎಂಬ ನಾಣ್ಣುಡಿ ಇಂದಿಗೂ ಈ ಭಾಗದ ಜನರ ದುರಂತವನ್ನು ಪ್ರತಿಬಿಂಬಿಸುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವುದಾಗಿ ಘೋಷಣೆ ಮಾಡಿ ಅಧಿಸೂಚನೆ ಹೊರಡಿಸಿದರೂ, ಆ ಸಚಿವಾಲಯಕ್ಕೆ ಅಗತ್ಯವಾದ ಆಡಳಿತಾತ್ಮಕ ಶಕ್ತಿ ಇನ್ನೂ ಒದಗಿಲ್ಲ. ಬೆಂಗಳೂರಿನ ಸಚಿವಾಲಯದ ಯಾವುದೋ ಮೂಲೆಯಲ್ಲಿ ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಕಡತಗಳು ಧೂಳು ಹಿಡಿದು ಮಲಗಿವೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇತರೆ ಸಚಿವಾಲಯಗಳಂತೆ ಸ್ವತಂತ್ರ ನಿರ್ಧಾರಾಧಿಕಾರ, ಪ್ರತ್ಯೇಕ ಬಜೆಟ್ ನಿರ್ವಹಣೆ, ತ್ವರಿತ ಅನುಷ್ಠಾನ ವ್ಯವಸ್ಥೆ ಇವುಗಳೆಲ್ಲವೂ ಕಲ್ಯಾಣ ಕರ್ನಾಟಕ ಸಚಿವಾಲಯಕ್ಕೆ ಇನ್ನೂ ಕನಸಾಗಿಯೇ ಉಳಿದಿವೆ.

ಆಡಳಿತಾತ್ಮಕ ಹಿನ್ನಡೆ: 371(ಜೆ)ಗೆ ಬಂದ ಅಡ್ಡಿ: ಪ್ರತ್ಯೇಕ ಸಚಿವಾಲಯದ ಕೊರತೆಯ ಪರಿಣಾಮವಾಗಿ, 371(ಜೆ) ಅಡಿಯಲ್ಲಿ ನಡೆಯಬೇಕಾದ ನೇಮಕಾತಿ, ಬಡ್ತಿ ಹಾಗೂ ಅನುದಾನ ಹಂಚಿಕೆ ಪ್ರಕ್ರಿಯೆಗಳು ತೀವ್ರ ವಿಳಂಬಕ್ಕೆ ಒಳಗಾಗಿವೆ. ಸರಕಾರಿ ದೇಶದಂತೆ 'ಅನುಸೂಚಿ 29ರ' ಅಡಿಯಲ್ಲಿ ವಿಶೇಷ ಇಲಾಖೆ ರಚನೆಯಾಗ ಬೇಕಿದ್ದರೂ, ಇದಕ್ಕೆ ಅಗತ್ಯ ವಿರುವ ಪ್ರತ್ಯೇಕ ಕಾರ್ಯದರ್ಶಿಗಳು, ನಿರ್ದೇಶಕರು ಮತ್ತು ಸಿಬ್ಬಂದಿಗಳ ನೇಮಕ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಇದರಿಂದ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯ ಕಾಮಗಾರಿಗಳ ಮೇಲ್ವಿಚಾರಣೆ, ಯೋಜನೆಗಳ ಅನುಷ್ಠಾನ ಹಾಗೂ ಫಲಾನುಭವಿಗಳಿಗೆ ತಲುಪಬೇಕಾದ ಸೌಲಭ್ಯಗಳು ಕುಂಟುತ್ತಾ ಸಾಗುತ್ತಿರುವುದು ಕಠೋರ ಸತ್ಯ.

ಅನುದಾನ ಬಳಕೆಗೆ ಪ್ರತ್ಯೇಕ ಸಚಿವಾಲಯದ ಅಗತ್ಯ: ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಮೀಸಲಾದ ಅನುದಾನ ಸಮರ್ಪಕವಾಗಿ ಬಳಕೆಯಾಗಬೇಕಾದರೆ, ಬಲಿಷ್ಠ ಹಾಗೂ ಸ್ವತಂತ್ರ ಸಚಿವಾಲಯವೇ ಬೆನ್ನೆಲುಬಾಗಬೇಕು. ಆದರೆ ಸ್ಪಷ್ಟ ಆಡಳಿತಾತ್ಮಕ ವ್ಯವಸ್ಥೆಯಿಲ್ಲದೆ ಅನುದಾನ ಕೇವಲ ಅಂಕಿ-ಅಂಶಗಳಲ್ಲೇ ಸೀಮಿತವಾಗುವ ಭೀತಿ ಎದುರಾಗಿದೆ.

ಘೋಷಣೆಯಿಂದ ಬದುಕು ಬದಲಾಗುವುದಿಲ್ಲ: ಕಲ್ಯಾಣ ಕರ್ನಾಟಕ ಜನರ ಬದುಕು ಸುಧಾರಿಸ ಬೇಕಾದರೆ, ಅದು ಘೋಷಣೆಗಳಿಂದಲ್ಲ, ಕಾರ್ಯ ರೂಪದ ರಾಜಕೀಯ ಇಚ್ಛಾಶಕ್ತಿಯಿಂದ ಮಾತ್ರ ಸಾಧ್ಯ.

ಕಲ್ಯಾಣ ಕರ್ನಾಟಕಕ್ಕೆ 371(ಜೆ) ಸಿಕ್ಕು ಇಷ್ಟು ವರ್ಷಗಳಾದರೂ ಇಂದಿಗೂ ಪ್ರತ್ಯೇಕ ಸಚಿವಾಲಯ ಕಾರ್ಯಾರಂಭವಾಗದಿರುವುದು ಸರಕಾರದ ನಿರ್ಲಕ್ಷ್ಯ ವಾಗಿದೆ. ಘೋಷಣೆ ಮಾಡಿದರೆ ಸಾಕು ಎಂಬ ಮನೋಭಾವದಿಂದ ಜನರ ಬದುಕು ಬದಲಾಗು ವುದಿಲ್ಲ. ಕಾಗದದ ಸಚಿವಾಲಯ ಬೇಡ, ಕಾರ್ಯನಿರ್ವಹಿಸುವ ಸಚಿವಾಲಯ ಬೇಕು. ಶೀಘ್ರ ಸರಕಾರ ಇತರೆ ಸಚಿವಾಲಯಗಳಂತೆ ಕಲ್ಯಾಣ ಕರ್ನಾಟಕಕ್ಕೂ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕು.

-**ಲಕ್ಷ್ಮಣ ದಸ್ತಿ, ಅಧ್ಯಕ್ಷ**, ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ

ನಮಗೆ ದಯೆಯ ಬೇಡಿಕೆ ಇಲ್ಲ, ಸಂವಿಧಾನ ಕೊಟ್ಟ ಹಕ್ಕಿನ ಅನುಷ್ಠಾನ ಬೇಕು. 24 ಸಾವಿರ ಕೋಟಿ ಅನುದಾನವಿದೆ ಎಂದರೂ, ಪ್ರತ್ಯೇಕ ಸಚಿವಾಲಯವಿಲ್ಲದೆ ಅಭಿವೃದ್ಧಿ ಹೇಗೆ ಸಾಧ್ಯ? ಸರಕಾರ ತಕ್ಷಣ ಅಧಿಕಾರಿಗಳನ್ನು ನೇಮಿಸಿ ಸಚಿವಾಲಯವನ್ನು ಸಕ್ರಿಯಗೊಳಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ರಾಜ್ಯಮಟ್ಟಕ್ಕೆ ವಿಸ್ತರಿಸುವುದು ಅನಿವಾರ್ಯ.

-**ಸಾಯಿಬಣ್ಣ ಜಮಾದಾರ**, ಹೋರಾಟಗಾರ



ಸರಕಾರಕ್ಕೆ ಜನರ ಆಗ್ರಹಗಳೇನು?

- ಅಧಿಸೂಚನೆಗೆ ಸೀಮಿತವಾಗದೇ ಬೆಂಗಳೂರಿನಲ್ಲೇ ಪ್ರತ್ಯೇಕ ಕಲ್ಯಾಣ ಕರ್ನಾಟಕ ಸಚಿವಾಲಯದ ಕಚೇರಿ ತಕ್ಷಣ ಆರಂಭವಾಗಬೇಕು.
- ಸಮರ್ಥ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರಿಗಳನ್ನು ನೇಮಿಸಿ, ವಾರದೊಳಗೆ ಕಡತ ವಿಲೇವಾರಿಯಾಗುವ ವ್ಯವಸ್ಥೆ ರೂಪಿಸಬೇಕು.
- ಶಿಕ್ಷಣ, ಉದ್ಯೋಗ, ಆರೋಗ್ಯ, ನೀರಾವರಿ ಹಾಗೂ ಕೈಗಾರಿಕಾಭಿವೃದ್ಧಿಗೆ ಸಚಿವಾಲಯವೇ ಕೇಂದ್ರ ಬಿಂದುವಾಗಬೇಕು.?

ಸಮಾಚಾರ ಸಣ್ಣದಲ್ಲ

ತಂದೆಯ ಆರೋಗ್ಯ ವಿಚಾರಿಸಿದ ಖಂಡ್ರೆ



ಬೀದರ್: ಶತಾಯುಷಿ, ಮಾಜಿ ಸಚಿವ ಭೀಮಣ್ಣ ಖಂಡ್ರೆ, ಆರೋಗ್ಯದಲ್ಲಿ ಏರು ಪೇರಾಗಿದ್ದು, ಕಳೆದ 15 ದಿನ ಗಳಿಂದ ಬೀದರ್‌ನ ಗುದಗೆ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 102 ವರ್ಷದ ಭೀಮಣ್ಣ ಖಂಡ್ರೆ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು, ಇಂದು ಉಸಿರಾಟದ ಸಮಸ್ಯೆ ಮತ್ತು ಬಿಪಿಯಲ್ಲಿ ವ್ಯತ್ಯಾಸವಾಗಿ ಆರೋಗ್ಯದಲ್ಲಿ ಏರುಪೇರಾಗಿದೆ. ಹೀಗಾಗಿ ಸಚಿವ ಈಶ್ವರ್ ಖಂಡ್ರೆ ಬಂದು ತಂದೆಯ ಆರೋಗ್ಯ ವಿಚಾರಿಸಿದ್ದು, ವೈದ್ಯರಿಂದ ಆರೋಗ್ಯದ ಬಗ್ಗೆ ಮಾಹಿತಿ ಪಡೆದಿದ್ದಾರೆ. ವೈದ್ಯರು ಚಿಕಿತ್ಸೆ ನಂತರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು ತಂದೆ ಭೀಮಣ್ಣ ಖಂಡ್ರೆಗೆ ಆರೋಗ್ಯದಲ್ಲಿ ಏನಾಗಿದೆ ಎಂದು ಖಾಸಗಿ ಆಸ್ಪತ್ರೆಯ ವೈದ್ಯರು ಮಾಹಿತಿ ನೀಡಿದ್ದಾರೆ.

ಯಾವ ಕಾಂತ್ರಿನೂ ಇಲ್ಲ, ಬ್ರಾಂತಿನೂ ಇಲ್ಲ

ಯಾದಗಿರಿ: ಸಿಎಂ ಬದಲಾವಣೆಗೆ ಕುರಿತಂತೆಯೇ ಯಾವ ಕ್ರಾಂತಿನೂ, ಬ್ರಾಂತಿನೂ ಇಲ್ಲ ಎಂದು ಅಬಕಾರಿ ಮಂತ್ರಿ ಆರ್.ಬಿ. ತಿಮ್ಮಾಪುರ ಹೇಳಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, ನಾನು ಸಿಎಲ್‌ಪಿ ನಾಯಕನೂ ಅಲ್ಲ, ಹೈಕಮಾಂಡ್ ನೂ ಅಲ್ಲ. ಎಲ್ಲವೂ ಮಾಧ್ಯಮ ಸೃಷ್ಟಿ ಎಂದರು. ಸಿಎಂ ಇದ್ದವರೇ ಬಜೆಟ್ ಮಂಡಿಸುತ್ತಾರೆ. ಅದರಲ್ಲಿ ಯಾವುದೇ ಸಂಶಯವೇ ಬೇಡ. ಒಳಮೀಸಲಾತಿ ಮತ್ತು ದ್ವೇಷ ಭಾಷಣದ ಬಿಲ್ ತಡೆಹಿಡಿದ ಬಗ್ಗೆ ಸೋಮವಾರ ಅದು ನೋಡಿ ಹೇಳುವುದಾಗಿ ತಿಳಿಸಿದರು. ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಜನಪರ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾರೆಂದರು. ಜಿಲ್ಲೆ ಯಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಸೂಚಿಸಲಾಗಿದೆ. ಈ ವೇಳೆ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಜಿಲ್ಲಾಧ್ಯಕ್ಷ ಬಸರೆಡ್ಡಿ ಅನಪುರ ಮುಖಂಡರಾದ ಶಾಮಸನ್ ಮಾಳಿಕೇರಿ, ಬಸುಗೌಡ ಬಿಳ್ಹಾರ, ಶಾಮರಾವ ನಾಟಿಕಾರ, ದತ್ತು ಸೇರಿದಂತೆಯೇ ಇತರರಿದ್ದರು.

ಹೊಟ್ಟೆ ನೋವು ತಾಳದೆ ಯುವತಿ ಆತ್ಮಹತ್ಯೆ

ತುಮಕೂರು: ಋತುಚಕ್ರದ ಹೊಟ್ಟೆ ನೋವು ತಾಳ ಲಾಗದೆ ಯುವತಿಯೊಬ್ಬಳು ನೇಣಿಗೆ ಶರಣಾದ ಘಟನೆ ತುಮಕೂರು ತಾಲೂಕಿನ ಬ್ಯಾತ ಗ್ರಾಮದಲ್ಲಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ಯುವತಿಯನ್ನು ಕಲಬುರಗಿ ಮೂಲದ ಕೀರ್ತನಾ (19) ನೇಣಿಗೆ ಶರಣಾದ ಯುವತಿ ಎಂದು ತಿಳಿದುಬಂದಿದೆ. ಕಲಬುರಗಿ ಜಿಲ್ಲೆಯ ಕಲಗಿ ತಾಲೂಕಿನ ಸಾಲಹಳ್ಳಿಯ ಕೀರ್ತನಾ ಕೆಲಸ ಅರಸಿ ತುಮಕೂರಿನಲ್ಲಿದ್ದ ಚಿಕ್ಕಪ್ಪನ ಮನೆ ಯಲ್ಲಿ ಬಂದಿದ್ದಳು. ಕೆಲಸ ಸಿಗದ ಕಾರಣ ಮನೆ ಯಲ್ಲೆ ವಾಸವಾಗಿದ್ದಳು. ಚಿಕ್ಕಪ್ಪನ ಮನೆಯಲ್ಲಿ ಯಾರು ಇಲ್ಲದ ವೇಳೆ ಸೀರೆಯಿಂದ ನೇಣು ಬಿಗಿದು ಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾಳೆ. ಮುಟ್ಟಿನ ಕಾಲದ ಹೊಟ್ಟೆನೋವಿನ ಕಾರಣಕ್ಕೆ ನೇಣಿಗೆ ಶರಣಾಗಿ ದ್ದಾಳೆ ಎನ್ನಲಾಗಿದೆ. ಈ ಸಂಬಂಧ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ದಿನ ವಿಶೇಷ

12 ಜನವರಿ 2026 ಸೋಮವಾರ

» ಸೂರ್ಯೋದಯ	:	06-46
» ಸೂರ್ಯಾಸ್ತ	:	06-11
» ತಿಥಿ	:	ನವಮಿ
» ನಕ್ಷತ್ರ	:	ಸ್ವಾತಿ
» ಸಂವತ್ಸರ	:	ವಿಶ್ವಾವಸು
» ಆಯನ	:	ಉತ್ತರಾಯಣ

ವಿಶ್ವವಾಣಿ ಕ್ಲಬ್ ಹೌಸ್
12.01.2026
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ

ಶ್ರೀ ಸತ್ಯೇಶ್ ಬೆಳ್ಳೂರು, ಪಲ್ಲವಿ ಭಟ್
ವಿಷಯ
ಹದಿಬದೆಯ ಧರ್ಮ
vishwavani.news

ಭಾರತ ಮತ್ತು ಇಸ್ರೇಲ್ ಎದುರಿಸುತ್ತಿರುವ ಸವಾಲುಗಳಲ್ಲಿ ಸಾಮ್ಯತೆ: ಮಂಗಳೂರು ಲಿಟ್ ಫೆಸ್ಟ್‌ನಲ್ಲಿ ವಿಶ್ವೇಶ್ವರ ಭಟ್ ವಿಶ್ಲೇಷಣೆ

ಆಕ್ರಮಣಕಾರರಿಗೆ ತಕ್ಕ ಉತ್ತರ: ಜಗತ್ತಿಗೆ ಇಸ್ರೇಲ್ ಮಾದರಿ

ಮಂಗಳೂರು: ಭಾರತ ಮತ್ತು ಇಸ್ರೇಲ್ ದೇಶಗಳು ಎದುರಿಸುತ್ತಿರುವ ಭದ್ರತಾ ಸವಾಲುಗಳಲ್ಲಿ ಹೆಚ್ಚಿನ ಸಾಮ್ಯತೆ ಇದೆ. ಇಸ್ರೇಲ್ ಪದೇ ಪದೇ ನೆರೆ ಹೊರೆಯವರಿಂದ ಆಕ್ರಮಣಕ್ಕೆ ಒಳಗಾದರೆ, ಭಾರತವು ವರ್ಷವಿಡೀ ಭಯೋತ್ಪಾದನಾ ಕೃತ್ಯಗಳನ್ನು ಎದುರಿಸುತ್ತಿದೆ. ಆದರೆ ಆಕ್ರಮಣಕಾರರಿಗೆ ತಕ್ಕ ಪ್ರತಿಕ್ರಿಯೆ ನೀಡುವಲ್ಲಿ ಮತ್ತು ದೇಶಪ್ರೇಮದ ವಿಚಾರದಲ್ಲಿ ಇಸ್ರೇಲ್ ಇಡೀ ಜಗತ್ತಿಗೆ ಮಾದರಿಯಾಗಿದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ, ಲೇಖಕ ವಿಶ್ವೇಶ್ವರ ಭಟ್ ಅಭಿಪ್ರಾಯಪಟ್ಟರು.

ಮಂಗಳೂರು ಲಿಟ್ ಫೆಸ್ಟ್ ವೇದಿಕೆಯಲ್ಲಿ ತಾವು ಬರೆದ 'ಬದುಕುಳಿದವರು ಕಂಡಂತೆ' ಕೃತಿಯ ಕುರಿತ ಸಂವಾದದಲ್ಲಿ ಮಾತನಾಡಿದ ಅವರು, ಇಸ್ರೇಲ್ ಎದುರಿಸುತ್ತಿರುವ ಸಂಕಷ್ಟಗಳು ಮತ್ತು ಆ ದೇಶದ ಅಪ್ರತಿಮ ಸಾಧನೆಗಳ ಮೇಲೆ ಬೆಳಕು ಚೆಲ್ಲಿದರು.

ಪ್ರತಿರೋಧ ಮತ್ತು ದೇಶಪ್ರೇಮದ ಪಾಠ: ಇಸ್ರೇಲ್ ಮತ್ತು ಪ್ಯಾಲೆಸ್ತೀನ್ ಸಂಘರ್ಷವನ್ನು ಯಾವುದೇ ಸಿದ್ಧಾಂತಗಳ ಮಸೂರದಿಂದ ನೋಡದೆ ಇತಿಹಾಸದ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು ಎಂದ ಅವರು, ಈ ಹಿಂದೆ ಭಾರತ ಭಯೋತ್ಪಾದಕ ಕೃತ್ಯಗಳಿಗೆ ಸರಿಯಾದ ಪ್ರತೀಕಾರ ನೀಡುತ್ತಿರಲಿಲ್ಲ ಎಂದು ವಿಷಾದಿಸಿದರು. ಇಸ್ರೇಲಿಗರನ್ನು ಕೆಣಕಲು ಬಂದವರಿಗೆ ಅವರು ಸರಿಯಾದ ಪಾಠ ಕಲಿಸುತ್ತಾರೆ.

ಮಂಗಳೂರು ಲಿಟ್ ಫೆಸ್ಟ್‌ನಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಪಾಲ್ಗೊಂಡು ತಾವು ಬರೆದ 'ಬದುಕುಳಿದವರು ಕಂಡಂತೆ' ಕೃತಿ ಕುರಿತು ಮಾತನಾಡಿದರು. ಶ್ರೀಕಾಂತ್ ಶೆಟ್ಟಿ ಸಂದರ್ಶಿಸಿದರು.

ಅವರ ದೇಶಪ್ರೇಮ ಅಭೂತಪೂರ್ವವಾದದ್ದು. ಜಗತ್ತಿನ ಯಾವುದೇ ಮೂಲೆಯಲ್ಲಿ ಒಬ್ಬ ಇಸ್ರೇಲಿ ಸಂಕಷ್ಟಕ್ಕೆ ಸಿಲುಕಿದರೂ ಇಡೀ ರಾಷ್ಟ್ರವೇ ಆತನ ನೆರವಿಗೆ ಧಾವಿಸುತ್ತದೆ ಎಂದು ಶ್ಲಾಘಿಸಿದರು.

ಅಸ್ತಿತ್ವಕ್ಕಾಗಿ ನಿರಂತರ ಹೋರಾಟ: ಸುತ್ತಲೂ ವೈರಿ ರಾಷ್ಟ್ರಗಳಿದ್ದರೂ, ಹಲವು ಬಾರಿ ಸಾಮೂಹಿಕ ದಾಳಿಗೆ ಒಳಗಾಗಿದ್ದರೂ, ಇಸ್ರೇಲ್ ಇಂದಿಗೂ ಸುಭದ್ರವಾಗಿ ಉಳಿದಿರುವುದು ಅವರ ಅಚಲ ಇಚ್ಛಾಶಕ್ತಿಯಿಂದ ಮಾತ್ರ ಸಾಧ್ಯ. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಇಸ್ರೇಲ್‌ನ ಧೋರಣೆಗಳು ಭಾರತದಂತಹ ದೇಶಗಳಿಗೆ ಹತ್ತು ಹಲವು ಪಾಠಗಳನ್ನು ಕಲಿಸುತ್ತಿವೆ ಎಂಬುದು ಗೋಷ್ಠಿಯ ಸಾರವಾಗಿತ್ತು. ಶ್ರೀಕಾಂತ್ ಶೆಟ್ಟಿ ಅವರು ಈ ಸಂವಾದವನ್ನು ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಪುಸ್ತಕ ಪ್ರೇಮಿಗಳು ಮತ್ತು ಸಾರ್ವಜನಿಕರು ಕಿಕ್ಕಿರಿದು ಸೇರಿದ್ದರು.

ಮುಖ್ಯಾಂಶಗಳು

- ಅಕ್ಟೋಬರ್ 7, 2023ರ ಇಸ್ರೇಲ್ ಮೇಲಿನ ಭೀಕರ ದಾಳಿಯ ವಿವರಣೆ
- 34 ಜನರ ವೈಯಕ್ತಿಕ ಅನುಭವಗಳನ್ನು ದಾಖಲಿಸಿದೆ
- ಪುಟ್ಟ ರಾಷ್ಟ್ರ ಇಸ್ರೇಲ್ ಸುತ್ತ ಲೆಬನಾನ್, ಸಿರಿಯಾ, ಜೋರ್ಡಾನ್, ಸೌದಿ ಅರೇಬಿಯಾ, ಇರಾನ್, ಯಮನ್, ಈಜಿಪ್ಟ್ ಮುಸ್ಲಿಂ ರಾಷ್ಟ್ರಗಳು
- 60% ಮರುಭೂಮಿ, ಕೇವಲ 34-35% ಜನವಸತಿ ಪ್ರದೇಶ
- ಗಾಜಾದ 80% ಭೂ ಭಾಗ ನಾಶವಾಗಿದೆ
- 73,000 ಮೃತರು (ಇಸ್ರೇಲ್ ಪ್ರಕಾರ), ವಾಸ್ತವವಾಗಿ 3 ಲಕ್ಷಕ್ಕೂ ಹೆಚ್ಚು
- ಎಲ್ಲಾ ಮನೆಗಳು ನಾಶ, ಜನರು ಟೆಂಟ್‌ಗಳಲ್ಲಿ ವಾಸ್ತವ್ಯ
- ಚಳಿ ಮತ್ತು ಹಸಿವಿನಿಂದ ಸಾವಿರಾರು ಜನ ಮೃತ್ಯು

ಮರುಭೂಮಿಯಲ್ಲಿ ಅರಳಿದ ನಂದನವನ

ಇಸ್ರೇಲ್‌ನ ಶೇ.65ರಷ್ಟು ಭಾಗ ಮರುಭೂಮಿ ಯಾಗಿದೆ. ಮಂಗಳೂರಿನಲ್ಲಿ ಒಂದು ಗಂಟೆ ಯಲ್ಲಿ ಸುರಿಯುವಷ್ಟು ಮಳೆ ಅಲ್ಲಿ ಇಡೀ ವರ್ಷಕ್ಕೆ ಬೀಳುತ್ತದೆ. ಆದರೂ, ಹನಿ ನೀರಾವರಿ ತಂತ್ರಜ್ಞಾನದ ಮೂಲಕ ಅವರು ಜಗತ್ತಿಗೆ ಕೃಷಿ ಪಾಠ ಮಾಡುತ್ತಿದ್ದಾರೆ. ವಿಶ್ವದ ನೋಬೆಲ್ ಪ್ರಶಸ್ತಿ ವಿಜೇತರಲ್ಲಿ ಯಹೂದಿಗಳ ಪಾಲು ಅತಿ ದೊಡ್ಡದಿದೆ. ಅಮೆರಿಕದ ರಕ್ಷಣಾ ಕೇಂದ್ರವಾದ 'ಪೆಂಟಗನ್'ನಲ್ಲಿ ಶೇ.40ರಷ್ಟು ಯಹೂದಿ ಸಿಬ್ಬಂದಿಗಳೇ ಕಾರ್ಯ ನಿರ್ವಹಿಸುತ್ತಿದ್ದಾರೆ. ನವೋದ್ಯಮಗಳ ಹಬ್ ಆಗಿರುವ ಇಸ್ರೇಲ್, ಇಂದು ಜಗತ್ತಿನಲ್ಲಿ 'ಸ್ಟಾರ್ಟಪ್ ನೇಷನ್' ಎಂದೇ ಪ್ರಸಿದ್ಧಿಯಾಗಿದೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರು ಅಭಿಪ್ರಾಯ ಪಟ್ಟರು.

ಶಿರಸಿಯಲ್ಲಿ ಬೃಹತ್ ಜನ ಸಮಾವೇಶ | ಜೀವವೈವಿಧ್ಯ ಉಳಿಸುವ ಧರ್ಮಯುದ್ಧ: ಸ್ವರ್ಣವಲ್ಲಿ ಸರಸ್ವತಿ ಶ್ರೀ

ಬೇಡ್ತಿ, ಅಘನಾಶಿನಿ ಯೋಜನೆಗೆ ಜನ ವಿರೋಧ

ಶಿರಸಿ: ಪಶ್ಚಿಮ ಘಟ್ಟಗಳು ಈಗಾಗಲೇ ಸಾಕಷ್ಟು ಹಾನಿಗೊಳಗಾಗಿವೆ. ಬೇಡ್ತಿ-ವರದಾ ಯೋಜನೆಯಿಂದಾಗಿ ಸಾವಿರಾರು ಎಕರೆ ಅರಣ್ಯ ಭೂಮಿ ಮತ್ತು ರೈತರ ತೋಟಗಳು ನಾಶವಾಗುತ್ತವೆ. ಅರಣ್ಯವಿದ್ದರೆ ಮಾತ್ರ ಮಳೆ, ಮಳೆಯಿದ್ದರೆ ಮಾತ್ರ ನದಿ ಎಂಬ ನಿಸರ್ಗದ ನಿಯಮವನ್ನು ನಾವು ಮರೆಯಬಾರದು ಎಂದು ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಶ್ರೀಗಳು ಎಚ್ಚರಿಸಿದರು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ನಗರದ ಎಂಇಎಸ್ ಕ್ರೀಡಾಂಗಣದಲ್ಲಿ ಬೇಡ್ತಿ, ಅಘನಾಶಿನಿ ಯೋಜನೆ ವಿರೋಧಿಸಿ ಭಾನುವಾರ ಶ್ರೀಗಳ ನೇತೃತ್ವದಲ್ಲಿ ನಡೆದ ಬೃಹತ್ ಜನ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಹೋರಾಟವು ಕೇವಲ ಭೂಮಿ ಕಳೆದುಕೊಳ್ಳುವ ರೈತರಿಗೆ ಮಾತ್ರ ಸೀಮಿತವಾದುದಲ್ಲ. ಇದು ಈ ಭಾಗದ ಪ್ರಕೃತಿ ಮತ್ತು ಜೀವವೈವಿಧ್ಯವನ್ನು ಉಳಿಸುವ 'ಧರ್ಮಯುದ್ಧ' ಎಂದು ಕರೆ ನೀಡಿದರು.

ಮುಂದಿನ ಪೀಳಿಗೆಗೆ ನಾವು ನೀಡುವ ಆಸ್ತಿ ಎಂದರೆ ಅದು ಶುದ್ಧ ಪರಿಸರ ಎಂದು ನುಡಿದರು. ಅಂತೆಯೇ ಇದು ನಮಗೂ ಲಾಭವಿಲ್ಲ, ರಾಜಕಾರಣಿಗಳಿಗೂ ಲಾಭವಿಲ್ಲ ಎಂದಾದರೆ ಇನ್ಯಾರೊ ಲಾಭದ ದಾಹದಲ್ಲಿದ್ದಾರೆ ಎನ್ನುವುದೇ ಅರ್ಥ ಎಂದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ನಮ್ಮ ಜಿಲ್ಲೆಗೆ ಮಾರಕವಾಗುವ ಯೋಜನೆ ಬೇಡ ಎಂದು ಸಂಸತ್ ನಲ್ಲಿ ಧ್ವನಿ ಎತ್ತುತ್ತೇನೆ. ನಮ್ಮದು ಸಮೃದ್ಧವಾದ ಜಿಲ್ಲೆ ಹಾಗೇಯೇ ಇರಬೇಕು. ಜಿಲ್ಲೆಯ ಸಹನ ಶಕ್ತಿ ಎಷ್ಟಿದೆ ಎಂಬುದನ್ನು ಮೊದಲು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕು ಎಂದರು.

ಸೋದೆ ಶ್ರೀ, ನೆಲೆಮಾವು ಶ್ರೀ, ಜಡೆಶ್ರೀ, ಶಿರಳಗಿ ಶ್ರೀಅನಂತ ಹೆಗಡೆ ಅಶೀಸರ, ಶಾಸಕ ಭೀಮಣ್ಣ ನಾಯ್ಕ, ವಿಪ ಸದಸ್ಯ ತಜ್ಞ ಕುಮಾರಸ್ವಾಮಿ, ಶಾಂತಾರಾಮ ಸಿದ್ದಿ ಉಪಸ್ಥಿತರಿದ್ದರು.

ಹಿಂದೆ ಯಡಿಯೂರಪ್ಪ ಮುಖ್ಯಮಂತ್ರಿ ಇದ್ದಾಗ ಈ ಯೋಜನೆಗೆ ಅನುಮೋದನೆ ಸಿಕ್ಕಿತ್ತು. ಆಗ ಸಂಸದ ಕಾಗೇರಿ ಸ್ಪೀಕರ್ ಆಗಿದ್ದರು ಅಂದೇ ಈ ಯೋಜನೆ ಗೆ ವಿರೋಧ ವ್ಯಕ್ತವಾಗಿದ್ದರೆ. ಈ ಸಮಾವೇಶ ಬೇಕಾಗಿಯೇ ಇರಲಿಲ್ಲ. ಜಿಲ್ಲೆಗೆ ಮಾರಕವಾದ ಯೋಜನೆಗೆ ನಮ್ಮ ವಿರೋಧವಿದೆ.
-ಮಂಕಾಳ ವೈದ್ಯ, ಸಚಿವ

ಬೇಡ್ತಿ, ಅಘನಾಶಿನಿ ಯೋಜನೆ ವಿರೋಧಿಸಿ ಶಿರಸಿಯಲ್ಲಿ ನಡೆದ ಬೃಹತ್ ಜನ ಸಮಾವೇಶಕ್ಕೆ ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಶ್ರೀಗಳು ಚಾಲನೆ ನೀಡಿದರು.

ದ್ವೇಷ ಭಾಷಣ ಮಸೂದೆ ವಾಪಸ್ ಬಂದಿಲ್ಲ: ಸಿಎಂ

ಮಂಗಳೂರು: ದ್ವೇಷ ಭಾಷಣ ತಡೆ ಮಸೂದೆಯನ್ನು ಸದನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಗಿದೆ. ರಾಜ್ಯಪಾಲರು ಈ ಮಸೂದೆಯನ್ನು ವಾಪಸ್ ಕಳಿಸಿಲ್ಲ ಅಥವಾ ತಿರಸ್ಕರಿಸಿಲ್ಲ. ಆದರೆ, ಇನ್ನೂ ಅಂಕಿತವನ್ನೂ ಹಾಕಿಲ್ಲ. ಅವರು ಆಹ್ವಾನಿಸಿದಾಗ ಈ ಬಗ್ಗೆ ಸೂಕ್ತ ವಿವರಣೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬಳ್ಳಾರಿಯಿಂದ ಬಿಜೆಪಿ ಪಾದಯಾತ್ರೆ ಹಮ್ಮಿಕೊಳ್ಳುವ ಕುರಿತ ಪ್ರಶ್ನೆಗೆ ಉತ್ತರಿಸಿದ ಸಿಎಂ, ಹಿಂದೆ ನಾವು ಬಳ್ಳಾರಿಗೆ ಪಾದಯಾತ್ರೆ ಮಾಡಿದ್ದಕ್ಕೂ ಒಂದು ಅರ್ಥವಿತ್ತು. ಅಂದು ಅಕ್ರಮ ಗಣಿಗಾರಿಕೆ ಕುರಿತು ವಿಧಾನಸಭೆಯಲ್ಲಿ ಚರ್ಚಿಸಿದಾಗ ರೆಡ್ಡಿ ಸಹೋದರರು ಹಾಗೂ ಯಡಿಯೂರಪ್ಪ ನಮಗೆ ಸವಾಲು ಹಾಕಿದ್ದರು. ಆ ಸವಾಲು ಸ್ವೀಕರಿಸಿ ನಾವು ಪಾದಯಾತ್ರೆ ಮಾಡಿದ್ದೆವು. ಆದರೆ ಈಗಿನ ಬಿಜೆಪಿಗರು ಪಾದಯಾತ್ರೆ ಮಾಡಲು ಕಾರಣವೇ ಇಲ್ಲ, ಅವರಿಗೆ ಇದರ ಅಗತ್ಯವೇನಿದೆ ಎಂದು ಪ್ರಶ್ನಿಸಿದರು.

ಕುರ್ಚಿ ಕಾಳಗ ಮಾಧ್ಯಮಗಳ ಸೃಷ್ಟಿ: ನಮ್ಮಲ್ಲಿ ಸಿಎಂ ಕುರ್ಚಿ ಬಗ್ಗೆ ಯಾವುದೇ ಕಾಳಗವಿಲ್ಲ. ಇದೆಲ್ಲವೂ ಕೇವಲ ಮಾಧ್ಯಮಗಳ ಸೃಷ್ಟಿ ಎಂದು ಸ್ಪಷ್ಟಪಡಿಸಿದರು.

ಬ್ಯಾನರ್ ತೆರವುಗೊಳಿಸಿದ್ದೇ ಪ್ರಚೋದನೆ

ಬಳ್ಳಾರಿಯಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಕುರಿತು ಮಾತನಾಡಿದ ಸಿದ್ದರಾಮಯ್ಯ, ಮಹರ್ಷಿ ವಾಲ್ಮೀಕಿ ಪ್ರತಿಮೆ ಉದ್ಘಾಟನೆ ಅಂಗವಾಗಿ ಹಾಕಿದ್ದ ಬ್ಯಾನರ್‌ಗಳನ್ನು ತೆರವುಗೊಳಿಸುವ ಅಗತ್ಯವೇನಿತ್ತು? ಆ ಬ್ಯಾನರ್ ತೆಗೆದದ್ದೇ ಘಟನೆಗೆ ಪ್ರಚೋದನೆಯಾಯಿತು. ಜನಾರ್ದನ ರೆಡ್ಡಿ ಮತ್ತು ಶ್ರೀರಾಮುಲು ಅವರು ಅಧಿಕಾರ ಕಳೆದುಕೊಂಡ ಅಸೂಯೆಯಿಂದ ಹೀಗೆ ನಡೆದುಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.

ವಿಜಯಪುರಕ್ಕೆ ಹಬ್ಬದ ವಿಶೇಷ ರೈಲು

ಬೆಂಗಳೂರು: ಮಕರ ಸಂಕ್ರಾಂತಿ ಹಿನ್ನೆಲೆ ಎಸ್‌ಎಂವಿಟಿ ಬೆಂಗಳೂರು-ವಿಜಯಪುರ ನಡುವೆ ವಿಶೇಷ ರೈಲು ಸಂಖ್ಯೆ 06245 ಜ.13 (ಮಂಗಳವಾರ) ರಂದು ಮತ್ತು ಜನವರಿ 23 ರಂದು ರಾತ್ರಿ 7:15 ಕ್ಕೆ ಎಸ್‌ಎಂವಿಟಿ ಬೆಂಗಳೂರಿನಿಂದ ಪ್ರಯಾಣ ಆರಂಭಿಸಲಿದೆ. ಈ ರೈಲು ಮರುದಿನ ಬೆಳಿಗೆ 7 ಗಂಟೆಗೆ ವಿಜಯಪುರ ತಲುಪುತ್ತದೆ.

ಕುಮಾರಸ್ವಾಮಿ ಚರ್ಚೆಗೆ ಬಂದರೆ ಒಳ್ಳೆಯದು

ನರೇಗಾ ಚರ್ಚೆಗೆ ಸಿದ್ಧ

ಬೆಂಗಳೂರು: ಮನರೇಗಾ ವಿಚಾರವಾಗಿ ಬಹಿರಂಗ ಚರ್ಚೆ ಮಾಡುವ ಪ್ರತಿಪಕ್ಷಗಳ ಪಂಥಾಹ್ವಾನವನ್ನು ನಾನು ಸ್ವೀಕರಿಸುವೆ. ಅವರು ಯಾವಾಗ ಬೇಕಾದರೂ ಯಾವುದೇ ವೇದಿಕೆಯಲ್ಲಾದರೂ ಚರ್ಚೆ ಬರಲಿ, ನಾನು ಸಿದ್ಧ ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಸವಾಲು ಹಾಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನರೇಗಾ ವಿಚಾರವಾಗಿ ಪ್ರತಿಭಟನೆ ಬಗ್ಗೆ ಕೇಳಿದಾಗ, ನಾವು ಅದನ್ನು ತೀರ್ಮಾನ ಮಾಡುತ್ತೇವೆ. ಪ್ರತಿಪಕ್ಷದವರು ಚರ್ಚೆಗೆ ಸಿದ್ಧ ಎಂದಿದ್ದಾರೆ. ಅವರು ಯಾವುದೇ ಮಾಧ್ಯಮ ವೇದಿಕೆಯಲ್ಲಾದರೂ, ಯಾವಾಗ ಕರೆದರೂ ನಾನು ಚರ್ಚೆಗೆ ಬರುತ್ತೇನೆ ಎಂದರು. ಕುಮಾರಸ್ವಾಮಿ ಅವರು ಚರ್ಚೆಗೆ ಬರುವು ದಾಗಿ ಹೇಳಿದ್ದಾರೆ. ನಾನು ಅವರನ್ನು ಸ್ವಾಗತಿ ಸುತ್ತೇನೆ. ಮೊದಲು ಅವರು ಬಂದರೆ ಬಹಳ ಒಳ್ಳೆಯದು. ಬಿಜೆಪಿ ರಾಜ್ಯ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರು, ಕುಮಾರಸ್ವಾಮಿ ಯಾರು ಬೇಕಾದರೂ ಬರಲಿ. ಅವರ ಪಂಥಾಹ್ವಾನ ಸ್ವೀಕಾರ ಮಾಡಿ ದ್ದೇನೆ. ಸಾರ್ವಜನಿಕ ವೇದಿಕೆ, ಅಧಿವೇಶನ ಅಥವಾ ಮಾಧ್ಯಮ ವೇದಿಕೆಯಾದರೂ ಸರಿ. ಚರ್ಚೆಗೆ ನಾನು ಸಿದ್ಧ ಎಂದರು. ಸಿದ್ದರಾಮಯ್ಯ ಅವರನ್ನು ಲೀಸ್ಡ್ ಸಿಎಂ ಎಂಬ ಕುಮಾರಸ್ವಾಮಿ ಟೀಕೆಗೆ ಪ್ರತಿಕ್ರಿಯಿಸಿ, ಕುಮಾರಸ್ವಾಮಿ ಮಾತನ್ನು ನಾವು ಗಂಭೀರವಾಗಿ ಪರಿಗಣಿಸುವುದಿಲ್ಲ. ಮೊದಲಿ ನಿಂದ ಮಾಧ್ಯಮಗಳ ಮುಂದೆ ಡೈಲಾಗ್ ಹೊಡೆದು ಹೋಗುವುದನ್ನು ನೋಡಿದ್ದೇವೆ. ಅವರ ಟೀಕೆಗೆ ಸಿದ್ದರಾಮಯ್ಯ ಅವರು ತಿರುಗೇಟು ನೀಡುತ್ತಾರೆ. ಆ ಸಾಮರ್ಥ್ಯ ಅವರಿಗಿದೆ ಎಂದರು.

ಅವ್ಯವಹಾರ ನಡೆದರೆ ತನಿಖೆ ನಡೆಸಲಿ

ಬಹಿರಂಗ ಚರ್ಚೆಗೆ ಯಾವಾಗ ಸಮಯ ನಿಗದಿ ಮಾಡುತ್ತೀರಾ ಹೇಳಿ. ಇವತ್ತು ಸಂಜೆಯಿಂದಲೇ ಚರ್ಚೆಗೆ ಸಿದ್ಧ. ನರೇಗಾ ವಿಚಾರದಲ್ಲಿ ನನಗೆ ಚರ್ಚೆ ಮಾಡಲು ಯಾವ ತಯಾರಿಯೂ ಬೇಕಾಗಿಲ್ಲ. ಎಲ್ಲಾ ಮಾಹಿತಿಗಳು ನನ್ನ ಬೆರಳ ತುದಿಯಲ್ಲಿವೆ. ಬೇರೆ ಎಲ್ಲೂ ಹೋಗಬೇಕಿಲ್ಲ. ನರೇಗಾ ಯೋಜನೆಯಲ್ಲಿ ನಮ್ಮ ಕನಕಪುರ ತಾಲೂಕಿನಲ್ಲಿ ಎಷ್ಟು ಕೆಲಸ ಆಗಿದೆ ಎಂದು ನಮಗೆ ಗೊತ್ತಿದೆ. ನರೇಗಾ ಯೋಜನೆ ಜಾರಿಯಲ್ಲಿ ಕನಕಪುರ ನಂಬರ್ 1 ಎಂದು ಬಿಜೆಪಿಯ ಕೇಂದ್ರ ಸರಕಾರ ಪ್ರಶಸ್ತಿ ನೀಡಿದೆ. ಈ ವಿಚಾರ ಕುಮಾರಸ್ವಾಮಿ, ಪ್ರಲ್ಹಾದ್ ಜೋಶಿ, ವಿಜಯೇಂದ್ರ ಅವರಿಗೆ ಗೊತ್ತಿದೆಯೋ ಇಲ್ಲವೋ. ನಮ್ಮ ತಾಲೂಕಿನಲ್ಲಿ ಅವ್ಯವಹಾರ ಆಗಿದೆಯೇ ಇಲ್ಲವೇ ಎಂದು ಕೇಂದ್ರ ಸರಕಾರ ಹತ್ತು ತಂಡ ಕಳುಹಿಸಿ ತನಿಖೆ ಮಾಡಿಸಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಾಲ್ವರು ಯುವಕರು ಸೇರಿ 6 ಮಂದಿ ಮೃತ್ಯು, ಕೊಲ್ಲಾಪುರ ಡಿವೈಎಸ್ಪಿ ಪಾರು

ಚಿತ್ರದುರ್ಗ: ಪ್ರತ್ಯೇಕ ಅಪಘಾತ, 6 ಸಾವು

ಚಿತ್ರದುರ್ಗ: ಚಿತ್ರದುರ್ಗದಲ್ಲಿ ಶನಿವಾರ ರಾತ್ರಿ ಎರಡು ಪ್ರತ್ಯೇಕ ರಸ್ತೆ ಅಪಘಾತ ಸಂಭವಿಸಿದ್ದು, ಒಟ್ಟು ಆರು ಜನ ಅಸುನೀಗಿದ್ದಾರೆ. ಹಿರಿಯೂರು ತಾಲೂಕಿನ ಹಿಂಡಸಕಟ್ಟೆ ಗ್ರಾಮದ ಬಳಿ ಇರುವ ಅಪಘಾತ ವಲಯವಾದ ಬೀದರ್-ಶ್ರೀರಂಗಪಟ್ಟಣ ರಾಜ್ಯ ಹೆದ್ದಾರಿಯಲ್ಲಿ ಕಾರು ಮತ್ತು ಲಾರಿ ಮುಖಾಮುಖಿ ಡಿಕ್ಕಿಯಾಗಿದ್ದು, ಕಾರಿನಲ್ಲಿದ್ದ ನಾಲ್ವರು ಯುವಕರು ಸಾವನ್ನಪ್ಪಿದ್ದಾರೆ. ಹಿರಿಯೂರು ತಾಲೂಕಿನ ನಂಜಯ್ಯನಕೊಟ್ಟಿಗೆ ಗ್ರಾಮದ ನಿವಾಸಿಗಳಾದ ವಿಶ್ವನಾಥ್(22), ನಂಜುಂಡಿ(23), ರಾಹುಲ್(23) ಮತ್ತು ಯಶವಂತ್ (22) ಎಂಬ ಯುವಕರು ಮೃತಪಟ್ಟಿದ್ದಾರೆ. ಹಿರಿಯೂರು ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ನಡೆದಿದೆ. ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಚಾಲಕ ಸಾವು, ಡಿವೈಎಸ್‌ಪಿಗೆ ಗಾಯ: ಮಹಾರಾಷ್ಟ್ರದಿಂದ ಬೆಂಗಳೂರಿನ ಕಡೆಗೆ ಹೊರಟಿದ್ದ ಕೊಲ್ಲಾಪುರದ ಡಿವೈಎಸ್‌ಪಿ ವೈಷ್ಣವಿ ಅವರಿದ್ದ ಇನ್ನೋವಾ ಕಾರು ಲಾರಿಗೆ ಡಿಕ್ಕಿ ಹೊಡೆದು ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿ, ಮೂವರು ಗಾಯಗೊಂಡ ಘಟನೆ ಚಿತ್ರದುರ್ಗದ ತಮಟಕಲ್ಲು ಗ್ರಾಮದ ಬ್ರಿಡ್ಜ್ ಬಳಿ ನಡೆದಿದೆ. ಡಿವೈಎಸ್‌ಪಿ ವೈಷ್ಣವಿ ಅವರಿಗೆ ಗಾಯಗಳಾಗಿದ್ದು, ಇವರ ತಾಯಿ ಕಮಲಾ ಹರಿಬಾಬು(65), ಚಾಲಕ ರಾಕೇಶ್ (40) ಮೃತರಾಗಿದ್ದಾರೆ. ಗಾಯಾಳುಗಳನ್ನು ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ವೈಷ್ಣವಿ ಅವರನ್ನು ಚಿತ್ರದುರ್ಗ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಿವೈಎಸ್ಪಿ ಕುಟುಂಬಸಮೇತ ತಮಿಳುನಾಡು ಪ್ರವಾಸ ಮುಗಿಸಿ ಕೊಲ್ಲಾಪುರಕ್ಕೆ ಹಿಂದಿರುಗುತ್ತಿದ್ದಾಗ ಅಪಘಾತ ಸಂಭವಿಸಿದೆ ಎಂದು ತಿಳಿದು ಬಂದಿದೆ.

ಅತ್ಯಾಚಾರ ವಿಡಿಯೊ ವೈರಲ್: ಮೂವರ ಸೆರೆ



ಹುಬ್ಬಳ್ಳಿ: ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೃತ್ಯದ ವಿಡಿಯೋವನ್ನು ಹಂಚಿಕೊಂಡಿದ್ದ ಮೂವರು ಆರೋಪಿಗಳನ್ನು ಹುಬ್ಬಳ್ಳಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಮಹಿಳೆಗೆ ಮದ್ಯ ಕುಡಿಸಿ ಆಕೆಯ ಮೇಲೆ ಗ್ಯಾಂಗ್ ರೇಪ್ ಮಾಡಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆಗೆ ಸಂತ್ರಸ್ತೆ ನೀಡಿದ್ದ ದೂರಿನ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ. ಕಾಮುಕರು ಕೃತ್ಯದ ವಿಡಿಯೊ ಕೂಡ ಮಾಡಿಕೊಂಡು ಅದನ್ನು ಹರಿಬಿಟ್ಟಿದ್ದರು. ದೂರಿನ ಆಧಾರದ ಮೇಲೆ ಪೊಲೀಸರು ತಕ್ಷಣ ಕ್ರಮ ಕೈಗೊಂಡು ಶಿವಾ ನಂದ (29) ಮತ್ತು ಗಣೇಶ್ ಗಿಡ್ಡಣ್ಣವರ (31) ಎಂಬ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರು ಶಿವಶಂಕರ ಕಾಲೋನಿ ನಿವಾಸಿಗಳಾಗಿದ್ದಾರೆ. ಅತ್ಯಾಚಾರಕ್ಕೊಳಗಾದ ಮಹಿಳೆಯನ್ನು ತಕ್ಷಣ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಚಿಕಿತ್ಸೆ ನೀಡಲಾಗಿದೆ.

2 ತಿಂಗಳಲ್ಲೇ ಹೊಸ ಬಿಪಿಎಲ್ ಕಾರ್ಡ್‌ಗೆ ಅರ್ಜಿ ಆಹ್ವಾನ | ಸಚಿವ ಕೆ.ಎಚ್.ಮುನಿಯಪ್ಪ ಹೇಳಿಕೆ

ಜನವರಿ ಅಂತ್ಯಕ್ಕೆ ಇಂದಿರಾ ಕಿಟ್ ವಿತರಣೆ

ವಿಶ್ವವಾಣಿ ಸುದ್ದಿಮನೆ ಕಲಬುರಗಿ

ರಾಜ್ಯದ ಪಡಿತರ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ತರಲು ಸರಕಾರ ಮುಂದಾಗಿದ್ದು, ಅನ್ನಭಾಗ್ಯ ಯೋಜನೆಯಡಿ ಕಡಿತಗೊಳಿಸ ಲಾದ 5 ಕೆಜಿ ಅಕ್ಕಿಯ ಬದಲಾಗಿ ಪೌಷ್ಟಿಕ ಆಹಾರ ಪದಾರ್ಥಗಳನ್ನೊಳಗೊಂಡ ಇಂದಿರಾ ಕಿಟ್ ವಿತರಿಸಲು ನಿರ್ಧರಿಸಲಾಗಿದೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ನಗರದ ಐವಾನ್-ಏ-ಶಾಹಿ ಅತಿಥಿಗೃಹ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಕಿಯ ಸದುಪಯೋಗ ಮತ್ತು ಜನರ ಆರೋಗ್ಯದ ದೃಷ್ಟಿಯಿಂದ ದೇಶದಲ್ಲೇ ಮೊದಲ ಬಾರಿಗೆ ಪಡಿತರ ಅಂಗಡಿಗಳ ಮೂಲಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಈ ಕಿಟ್‌ನಲ್ಲಿ ತೊಗರಿ ಬೇಳೆ, ಎಣ್ಣೆ, ಉಪ್ಪು ಮತ್ತು ಸಕ್ಕರೆ ಇರಲಿದ್ದು, ಜನವರಿ ಅಥವಾ ಫೆಬ್ರವರಿ ಯಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ ಎಂದು ಹೇಳಿದರು.

ಇನ್ನು, ಪೌಷ್ಟಿಕ ಆಹಾರ ಕಿಟ್‌ಗಾಗಿ ತೊಗರಿ ಬೇಳೆ ಖರೀದಿಸುವಾಗ ರಾಜ್ಯದ ಬೆಳೆಗಾರರಿಗೆ ಮತ್ತು ಸ್ಥಳೀಯ ಉತ್ಪಾದನೆಗೆ ಹೆಚ್ಚಿನ ಒತ್ತು ನೀಡಲು ಸೂಚಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಯಲ್ಲಿ ಪಾರದರ್ಶಕತೆ ಕಾಯ್ದುಕೊಂಡು, ನಮ್ಮ ರೈತರಿಗೆ ಅನುಕೂಲವಾಗುವಂತೆ ಗುಣಮಟ್ಟದ ಬೇಳೆ ವಿತರಿಸಲು ಸರಕಾರ ಬದ್ಧವಾಗಿದೆ ಎಂದ ಅವರು, ರಾಜ್ಯದ ಸುಮಾರು 1.5 ಲಕ್ಷ ಕಾರ್ಡ್ ಗಳ 4.50 ಕೋಟಿ ಜನರಿಗೆ (60-70% ಕಾರ್ಡ್ ದಾರರಿಗೆ) ಲಾಭ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈಗಾಗಲೇ ಆರೋಗ್ಯದ ತುರ್ತು ಕಾರಣಗಳಿಗಾಗಿ 2ರಿಂದ 3 ಲಕ್ಷ ಕಾರ್ಡ್ ವಿತರಿಸಲಾಗಿದೆ. ಜನವರಿ ಕೊನೆಯ ವಾರದಲ್ಲಿ ಅನರ್ಹ ಕಾರ್ಡ್‌ಗಳ ಪರಿಷ್ಕರಣೆ ಪೂರ್ಣಗೊಂಡ ಬಳಿಕ ಹೊಸ ಅರ್ಜಿಗಳ ವಿಲೇವಾರಿ ಆರಂಭವಾಗಲಿದೆ. ಆದಾಯ ತೆರಿಗೆ ಪಾವತಿದಾರರು, ಸರಕಾರಿ ನೌಕರರು, ಸ್ವಂತ ಕಾರು ಹಾಗೂ 7 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲಾಗುವುದು ಎಂದು ಮಾಹಿತಿ ನೀಡಿದರು. ಈ ವೇಳೆ ಮಾಜಿ ಸಚಿವ ಎಚ್. ಆಂಜನೇಯ, ಮುಖಂಡರಾದ ವಿಜಯಕುಮಾರ್ ರಾಮಕೃಷ್ಣ, ಮಲ್ಲಿಕಾರ್ಜುನ ಜಾನೆ ಸೇರಿ ಪ್ರಮುಖರು ಉಪಸ್ಥಿತರಿದ್ದರು.



ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಕಲಬುರಗಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದರು.

ಒಳಮೀಸಲಾತಿ ಬಿಲ್ ವಾಪಸ್, ಉತ್ತರ ನೀಡುತ್ತೇವೆ

ಬೆಳಗಾವಿ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಬಿಲ್ ಪಾಸ್ ಆಗಿತ್ತು. ಆದರೆ ರಾಜ್ಯಪಾಲರು ಬಿಲ್ ವಾಪಸ್ ಕಳುಹಿಸಿದ್ದಾರೆ ಎಂಬ ಮಾಹಿತಿ ಇದೆ. ನ್ಯಾ.ನಾಗಮೋಹನ್ ದಾಸ್ ವರದಿಯಂತೆ ಯಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ಬಿಲ್ ರೂಪಿಸಲಾಗಿತ್ತು. ರಾಜ್ಯಪಾಲರ ಆಕ್ಷೇಪಣೆಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆದ ನಂತರ ಸರಕಾರ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದು ಸಚಿವ ಮುನಿಯಪ್ಪ ಹೇಳಿದರು.

ಸಿದ್ದರಾಮಯ್ಯ 5 ವರ್ಷ ಸಿಎಂ

ಕಲಬುರಗಿ: ಸಂಕ್ರಾಂತಿ ಬಳಿಕ ರಾಜ್ಯ ರಾಜಕಾರಣದಲ್ಲಿ ಕ್ರಾಂತಿಯಾಗುತ್ತದೆ ಎಂಬುದೆಲ್ಲ ಬರಿ ಊಹಾಪೋಹ. ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರಕಾರ ಸುಭದ್ರವಾಗಿದ್ದು, ಯಾವುದೇ ಕಾರಣಕ್ಕೂ ಬದಲಾವಣೆಯಾಗುವುದಿಲ್ಲ ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸ್ಪಷ್ಟಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯುತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಡಿ. ದೇವರಾಜು ಅರಸು ಅವರು ರಾಜ್ಯದ ಅಭಿವೃದ್ಧಿಗೆ ಬುನಾದಿ ಹಾಕಿಕೊಟ್ಟಿದ್ದರು. ಸಿದ್ದರಾಮಯ್ಯ ಅವರು ಆ ಬುನಾದಿಯ ಮೇಲೆ ಸುಭದ್ರವಾದ ಮನೆಯನ್ನು ಕಟ್ಟಿದ್ದಾರೆ. ಐದು ಗ್ಯಾರಂಟಿ ಯೋಜನೆಗಳ ಮೂಲಕ ಎಲ್ಲ ವರ್ಗದವರಿಗೂ ಸಮಾನತೆ ತಂದಿರುವ ಅವರು, ಪೂರ್ಣ ಐದು ವರ್ಷ ಅಧಿಕಾರದಲ್ಲಿ ಇರಲಿದ್ದಾರೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಸಂತನ ಆತ್ಮ ರೋದಿಸುತ್ತಿದೆ...

ಇಂದು (ಜ.12), ಧೀರಸಂತ ಎಂದೇ ಹೆಸರಾಗಿದ್ದ ಸ್ವಾಮಿ ವಿವೇಕಾನಂದರ ಜನ್ಮದಿನ. ಇದನ್ನು 'ರಾಷ್ಟ್ರೀಯ ಯುವದಿನ'ವಾಗಿ ಆಚರಿಸಿಕೊಂಡು ಬರಲಾಗುತ್ತಿರುವುದು ಗೊತ್ತಿರುವ ಸಂಗತಿಯೇ. ಸನಾತನ ಹಿಂದೂ ಧರ್ಮದ ಬೋಧನೆಗಳು, ಭ್ರಾತೃತ್ವಭಾವ ಮತ್ತು ಸಹಿಷ್ಣು ಶಕ್ತಿಗಳನ್ನು ವಿಶ್ವದೆಲ್ಲೆಡೆ ಪಸರಿಸಿದ ಈ ಸಂತರನ್ನು ಹೀಗೊಮ್ಮೆ ಸ್ಮರಿಸಬೇಕಾದ್ದು ಆದರ್ಶಪ್ರಾಯ ಹೆಜ್ಜೆಯೇ. ಆದರೆ, ನಮ್ಮಲ್ಲಿ ಸಾಕಷ್ಟು 'ದಿನಾಚರಣೆ'ಗಳ ಹಣೆಬರಹ ಬಹುತೇಕ ಒಂದೇ ಆಗಿಬಿಟ್ಟಿದೆ. ಕಾರಣ, ನಿರ್ದಿಷ್ಟ 'ದಿನಾಚರಣೆ'ಯಂದು ವೇದಿಕೆಯನ್ನೇರಿ, ಸಭಿಕರನ್ನು ಉದ್ದೇಶಿಸಿ ಒಂದಷ್ಟು ತೌಡುಕುಟ್ಟಿಬಿಟ್ಟರೆ ಮುಗಿಯಿತು ಎಂಬ ಧೋರಣೆ ಬಹುತೇಕರಲ್ಲಿ ಮಡುಗಟ್ಟಿರುವುದು. ದೇಶವೊಂದರ ನಿರ್ಮಾಣದಲ್ಲಿ ಯುವಜನರು ವಹಿಸುವ ಪಾತ್ರ ಅದೆಷ್ಟು ಮಹತ್ತರವಾಗಿರುತ್ತದೆ ಎಂಬುದನ್ನು ಅರಿತಿದ್ದ ಸ್ವಾಮಿ ವಿವೇಕಾನಂದರು 'ಬದುಕಿದ್ದೂ ಸತ್ತಂತಿದ್ದ' ಯುವಜನರನ್ನು ಬಡಿದೆಚ್ಚರಿಸಲು ''ಏಳಿ, ಎದ್ದೇಳಿ, ಗುರಿಮುಟ್ಟುವವರೆಗೆ ನಿಲ್ಲದಿರಿ'' ಎಂದು ಕರೆಕೊಟ್ಟರು. ಈ ಸಾರ್ವಕಾಲಿಕ ನುಡಿಯಲ್ಲಿ ಅಂತರ್ಗತವಾಗಿರುವ ಸದಾಶಯವನ್ನು ಮತ್ತು ಹೊಣೆಗಾರಿಕೆಯನ್ನು ಮನದಾಳಕ್ಕೆ ಇಳಿಸಿಕೊಂಡು ಸಾಧನಾಪಥದಲ್ಲಿ ಹೆಜ್ಜೆ ಹಾಕಬೇಕಾದ ಯುವಜನರಲ್ಲಿ ಹೆಚ್ಚಿನ ಮಂದಿ ಇಂದು ಮಾದಕ ವಸ್ತುಗಳು, ಮಧುಪಾನ ಸೇರಿದಂತೆ ಹಲವು ವ್ಯಸನಗಳ ದಾಸರಾಗಿಬಿಟ್ಟಿದ್ದಾರೆ ಮತ್ತು ಅದರ ಪರಿಣಾಮವಾಗಿ ಸಾಧನೆಗೆ ಸಂಕಲ್ಪಿಸಬೇಕಿದ್ದ ಕಾಲಘಟ್ಟದಲ್ಲೇ ಸುಸ್ತಾಗಿಬಿಟ್ಟಿದ್ದಾರೆ. ಹೀಗಿರುವಾಗ ದೇಶಕ್ಕೆ ಭವ್ಯ ಭವಿಷ್ಯ ದೊರಕುತ್ತದೆ ಎಂದು ಭರವಸೆ ಇಟ್ಟುಕೊಳ್ಳಲಾದೀತೇ? ಇದನ್ನು ಕಂಡು ಆ ಧೀರಸಂತನ ಆತ್ಮವೂ ರೋದಿಸುತ್ತಿರಬೇಕು. ಇನ್ನಾದರೂ ಕಳೆಯುವುದೇ ಈ ಕತ್ತಲು? ಯುವಜನರ ಮನದಲ್ಲಿ ಮೂಡುವುದೇ ದಿವ್ಯಹಗಲು?

ಸೊಂಪಾದಕೀಯ

ಟಾಕ್ಸಿಕ್ ಟೀಸರ್

ಯಶ್ ಅಭಿನಯದ ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾದ ಟೀಸರ್ ಅವರ ಹುಟ್ಟುಹಬ್ಬದಂದು ಬಿಡುಗಡೆ ಆಗಿದೆ. ಆದರೆ ಹುಟ್ಟುಹಬ್ಬದ ದಿನ ಬಿಡುಗಡೆ ಆಗಿರುವ ಅವರ ಚಿತ್ರದ ಟೀಸರ್‌ನಲ್ಲಿ ಯಶ್ ಹುಟ್ಟುಡುಗೆಯಲ್ಲಿ ಬಿಸಿಬಿಸಿ ದೃಶ್ಯದಲ್ಲಿ ಕಾಣಿಸಿಕೊಂಡಿರೋದು ಚರ್ಚೆಗೆ ಆಸ್ಪದವಾಗಿದೆ. ಹೇಳಿ ಕೇಳಿ ಸಿನಿಮಾದ ಹೆಸರೇ ಟಾಕ್ಸಿಕ್, ಹಾಗಾಗಿ ಸಿನಿಮಾದಲ್ಲಿ ಕಾಮಕೇಳಿಯನ್ನು ತೋರಿಸಬಹುದು ಅನ್ನೋದು ಸಿನಿಮಾ ನಿರ್ದೇಶಕರ ಅನಿಸಿಕೆ ಇರಬಹುದೋ ಏನೋ. ಒಟ್ಟಿನಲ್ಲಿ ಪಡ್ಡೆ ಹುಡುಗರೂ ಅದರ ಬಗ್ಗೆ ಮಾತಾಡಲು ನಾಚಿಕೆ ಪಡುವಂತೆ ಸುದ್ದಿ ಮಾಡ್ತಾ ಇದೆ ಚಿತ್ರದ ಟೀಸರ್. ಇದರ ಕೊನೆಯಲ್ಲಿ 'ಡ್ಯಾಡಿ ಈಸ್ ಹೋಮ್' ಅಂತ ಎಂಟ್ರಿ ಕೊಡುವ ಯಶ್ ತಾನು ಎಲ್ಲರಿಗೂ ಬಿಗ್ ಡ್ಯಾಡಿ ಅಂತ ಪ್ರೂವ್ ಮಾಡಿಕೊಳ್ಳುವ ಆತುರದಲ್ಲಿ ಕಾರ್ ಒಳಗೆ ಪ್ರಣಯದ ಕಾರುಬಾರು ನಡೆಯುವ ದೃಶ್ಯದಲ್ಲಿ ಕಾಣಿಸಿಕೊಂಡಿದ್ದಾರೆ. ಯಶ್ ಏನೋ ಡ್ಯಾಡಿ ಈಸ್ ಹೋಮ್ ಅಂತ ಡೈಲಾಗ್ ಹೊಡೆದಿದ್ದಾರೆ, ಆದರೆ ಈ ಟೀಸರ್ ಅನ್ನು ಮಮ್ಮಿ-ಡ್ಯಾಡಿ ಜತೆ ನೋಡೋದು ಕಷ್ಟ ಅನ್ನೋದು ಹಲವರ ಅನಿಸಿಕೆ. ಜತೆಗೆ ಟಾಕ್ಸಿಕ್ ಹೆಸರಿಗೆ ಮಾತ್ರ ಕನ್ನಡ ಚಿತ್ರ. ಇದರ ಮಾರುಕಟ್ಟೆ, ಪ್ರಪಂಚದಾದ್ಯಂತ ಅನೇಕ ಭಾಷೆಗಳ ಸಿನಿಮಾರಂಗವನ್ನು ನಂಬಿಕೊಂಡಿದೆ. ಹಾಗಾಗಿ ಲೋಕೋ ಭಿನ್ನರುಚಿಃ ಎನ್ನುವಂತೆ ಎಲ್ಲರಿಗೂ ರುಚಿಸುವಂಥ ಸಿನಿಮಾ ಮಾಡಿದ್ದಾರೆ ಅನ್ಸುತ್ತೆ. ಕನ್ನಡ ಸಿನಿಮಾಗೂ ಕನ್ನಡದವರು ಮಾಡಿರೋ ಜಾಗತಿಕ ಸಿನಿಮಾಗೂ ವ್ಯತ್ಯಾಸ ಇದೆ. ಟಾಕ್ಸಿಕ್ ಕೇವಲ ಕನ್ನಡ ಚಿತ್ರರಂಗಕ್ಕಾಗಿ ಮಾಡಿರೋ ಸಿನಿಮಾ ಅಲ್ಲ, ಹಾಗಾಗಿ ಇದು ಕನ್ನಡವರು ಮಾಡಿರೋ ಜಾಗತಿಕ ಮಟ್ಟದ ಸಿನಿಮಾ. ಹಾಗಾಗಿ ಅದರ ಗುಣಮಟ್ಟ ಕೂಡಾ ಜಾಗತಿಕ ಮಟ್ಟ ಅಂದ್ರೆ, ಇಂಗ್ಲಿಷ್ ಸಿನಿಮಾಗಳ ಲೆಕ್ಕದಲ್ಲೇ ಇದೆ. ಹಣವನ್ನು ನೀರಿನಂತೆ ಖರ್ಚು ಮಾಡಿರೋದು ಕಾಣಿಸುತ್ತೆ. ಯಾಕಂದ್ರೆ, ಅದೇ ಹಣ ಮತ್ತೆ ಪ್ರವಾಹದಂತೆ ಹರಿದುಬರುತ್ತದೆ ಅನ್ನೋ ನಂಬಿಕೆ ನಿರ್ಮಾಪಕರದ್ದು. ಇತ್ತೀಚೆಗೆ ಕನ್ನಡ ಸಿನಿಮಾವೊಂದರ ಸೆನ್ಸಾರ್ ಸರ್ಟಿಫಿಕೇಟ್‌ನಲ್ಲಿ 'ಯು' ಸರ್ಟಿಫಿಕೇಟ್ ಕೊಟ್ಟು 'ಲೋಫರ್' ಅನ್ನೋ ಪದವನ್ನು ಮ್ಯೂಟ್ ಮಾಡುವಂತೆ ಸೂಚಿಸಲಾಗಿತ್ತು. ಆದರೆ ಈ ಟಾಕ್ಸಿಕ್ ಟೀಸರ್ ನೋಡಿದ ಮೇಲೆ ಇದಕ್ಕೆ ಮ್ಯೂಟ್, ಕಟ್ ಕೊಡದೇ ಇದ್ರೆ ಯಾವ ಸರ್ಟಿಫಿಕೇಟ್ ಸಿಗಬಹುದು ಅನ್ನೋದು ಈಗ ಎಲ್ಲರ ಕುತೂಹಲ.

ಸಂಪಾದಕರ ಸದ್ಯಶೋಧನೆ

ಆಕ್ಸಿಜನ್ ಮಾಸ್ಕ್ ಬಳಕೆ

ವಿಮಾನದಲ್ಲಿ ಪ್ರಯಾಣಿಸುವಾಗ ಸುರಕ್ಷತಾ ಸೂಚನೆಗಳನ್ನು ಗಮನಿಸಿದರೆ, ತುರ್ತು ಸಂದರ್ಭದಲ್ಲಿ ಮೇಲಿಂದ ಆಮ್ಲಜನಕದ ಮುಖವಾಡಗಳು (Oxygen Masks) ಕೆಳಗೆ ಬೀಳುತ್ತವೆ ಎಂದು ಹೇಳಲಾಗುತ್ತದೆ. ಇದನ್ನು ಕೇಳಿದಾಗ ಅಥವಾ ನೋಡಿದಾಗ ನಮಗೆ ಒಂದು ರೀತಿಯ ಆತಂಕವಾಗುವುದು ಸಹಜ. ಆದರೆ, ನೀವು ಈ ಆಮ್ಲಜನಕದ ಮುಖವಾಡಗಳ ಹಿಂದಿನ ವಿಜ್ಞಾನ ಮತ್ತು ಉದ್ದೇಶವನ್ನು ತಿಳಿದುಕೊಂಡರೆ, ಈ ಆತಂಕವು ವಿಶ್ವಾಸವಾಗಿ ಬದಲಾಗಬಹುದು. ಈ ಮುಖವಾಡಗಳು 12ರಿಂದ 15 ನಿಮಿಷಗಳ ಕಾಲ ಮಾತ್ರ ಆಮ್ಲಜನಕವನ್ನು ಪೂರೈಸುತ್ತವೆ. ಇದು ಮೊದಲ ನೋಟಕ್ಕೆ ಭಯಾನಕ ಎನಿಸಬಹುದು. ಆದರೆ ಇದು ವಿಮಾನಯಾನ ಸುರಕ್ಷತೆಯ ಅತ್ಯಂತ ಚಾಣಾಕ್ಷ ಮತ್ತು ವ್ಯವಸ್ಥಿತ ಯೋಜನೆಯಾಗಿದೆ. ಸಾಮಾನ್ಯವಾಗಿ ವಾಣಿಜ್ಯ ವಿಮಾನಗಳು 30,000ದಿಂದ 40,000 ಅಡಿ ಎತ್ತರದಲ್ಲಿ ಹಾರಾಟ ನಡೆಸುತ್ತವೆ. ಈ ಎತ್ತರದಲ್ಲಿ ಗಾಳಿಯು ಅತ್ಯಂತ ವಿರಳವಾಗಿರುತ್ತದೆ ಮತ್ತು ಆಮ್ಲಜನಕದ ಪ್ರಮಾಣವು ತುಂಬಾ ಕಡಿಮೆ ಇರುತ್ತದೆ. ಈ ಎತ್ತರದಲ್ಲಿ ಮನುಷ್ಯನು ಮುಖವಾಡವಿಲ್ಲದೆ ನೇರವಾಗಿ ಉಸಿರಾಡಲು ಸಾಧ್ಯವಿಲ್ಲ. ಒಂದು ವೇಳೆ ವಿಮಾನದ ಒಳಗಿನ ಗಾಳಿಯ ಒತ್ತಡ ಕಡಿಮೆಯಾದರೆ, ಆ ಎತ್ತರದಲ್ಲಿ ಮನುಷ್ಯನಿಗೆ ಪ್ರಜ್ಞೆ ತಪ್ಪಲು 15ರಿಂದ 30 ಸೆಕೆಂಡುಗಳು ಮಾತ್ರ ಸಾಕು. ಇದನ್ನು 'Useful Consciousness' ಎಂದು ಕರೆಯುತ್ತಾರೆ. ಅದಕ್ಕಾಗಿಯೇ ವಿಮಾನದ ಸಿಬ್ಬಂದಿ 'ಮೊದಲು ನಿಮ್ಮ ಮುಖವಾಡವನ್ನು ಧರಿಸಿ, ನಂತರ ಇತರರಿಗೆ ಸಹಾಯ ಮಾಡಿ' ಎಂದು ಪದೇ ಪದೆ ಹೇಳುತ್ತಾರೆ. ಕೇವಲ 15 ನಿಮಿಷ ಯಾಕೆ? ವಿಮಾನಯಾನ ತಜ್ಞರ ಪ್ರಕಾರ, ತುರ್ತು ಸಂದರ್ಭದಲ್ಲಿ 15 ನಿಮಿಷಗಳ ಆಮ್ಲಜನಕ ಪೂರೈಕೆ ಹೆಚ್ಚೇ. ಅದಕ್ಕೆ ಕಾರಣಗಳಿವೆ. ವಿಮಾನದಲ್ಲಿ ಆಮ್ಲಜನಕದ ಒತ್ತಡ ಕಡಿಮೆಯಾದ ತಕ್ಷಣ, ಪೈಲಟ್‌ಗಳು ತಕ್ಷಣವೇ ವಿಮಾನದ ಎತ್ತರವನ್ನು ಕಡಿಮೆ ಮಾಡುತ್ತಾರೆ. ಅವರ ಗುರಿ ವಿಮಾನವನ್ನು 10,000 ಅಡಿಗಿಂತ ಕಡಿಮೆ ಎತ್ತರಕ್ಕೆ ತರುವುದು. 10,000 ಅಡಿ ಎತ್ತರದಲ್ಲಿ ನೈಸರ್ಗಿಕವಾಗಿಯೇ ಗಾಳಿಯಲ್ಲಿ ಆಮ್ಲಜನಕವು ಸಮೃದ್ಧವಾಗಿರುತ್ತದೆ ಮತ್ತು ಅಲ್ಲಿ ಯಾವುದೇ ಮುಖವಾಡವಿಲ್ಲದೆ ಸಾಮಾನ್ಯ ಮನುಷ್ಯ ಉಸಿರಾಡಬಹುದು. ಆಧುನಿಕ ವಿಮಾನಗಳು ಅತ್ಯಂತ ವೇಗವಾಗಿ ಕೆಳಕ್ಕೆ ಇಳಿಯುವ ಸಾಮರ್ಥ್ಯವನ್ನು ಹೊಂದಿವೆ. 35,000 ಅಡಿಯಿಂದ 10,000 ಅಡಿಗೆ ಬರಲು ಸಾಮಾನ್ಯವಾಗಿ 5ರಿಂದ 8 ನಿಮಿಷಗಳು ಸಾಕು. ಆದ್ದರಿಂದ 15 ನಿಮಿಷಗಳ ಆಮ್ಲಜನಕದ ಪೂರೈಕೆಯು ಸುರಕ್ಷತೆಯ ದೃಷ್ಟಿಯಿಂದ ದುಪ್ಪಟ್ಟು ಸಮಯವನ್ನು ನೀಡಿದಂತಾಗುತ್ತದೆ. ಇಡೀ ವಿಮಾನಕ್ಕೆ ಬೇಕಾಗುವಷ್ಟು ಆಮ್ಲಜನಕದ ಸಿಲಿಂಡರ್‌ಗಳನ್ನು ಹೊತ್ತೊಯ್ಯುವುದು ವಿಮಾನದ ತೂಕವನ್ನು ವಿಪರೀತವಾಗಿ ಹೆಚ್ಚಿಸುತ್ತದೆ. ಇದು ಇಂಧನ ಬಳಕೆಯನ್ನು ಹೆಚ್ಚಿಸುವುದಲ್ಲದೆ, ವಿನ್ಯಾಸದ ದೃಷ್ಟಿಯಿಂದಲೂ ಕಷ್ಟಕರ. ಆದ್ದರಿಂದ, ರಾಸಾಯನಿಕ ಆಮ್ಲಜನಕ ಉತ್ಪಾದಕಗಳನ್ನು ಬಳಸಲಾಗುತ್ತದೆ. ಇವು ಸಣ್ಣದಾಗಿರುತ್ತವೆ ಮತ್ತು ಸಮರ್ಥವಾಗಿರುತ್ತವೆ. ಆಮ್ಲಜನಕ ಹೇಗೆ ಉತ್ಪತ್ತಿಯಾಗುತ್ತದೆ? ಅನೇಕರು ಅಂದುಕೊಂಡಂತೆ ವಿಮಾನದಲ್ಲಿ ದೊಡ್ಡ ಆಮ್ಲಜನಕದ ಟ್ಯಾಂಕ್‌ಗಳಿರುವುದಿಲ್ಲ. ಪ್ರತಿ ಸೀಟಿನ ಮೇಲ್ಭಾಗದಲ್ಲಿ ಒಂದು ಸಣ್ಣ ಕ್ಯಾನ್ ಅಥವಾ ಕೆಟಲ್ ಮಾದರಿಯ ಸಾಧನವಿರುತ್ತದೆ. ನೀವು ಮುಖವಾಡವನ್ನು ನಿಮ್ಮ ಕಡೆಗೆ ಎಳೆದಾಗ, ಅದರೊಳಗಿರುವ ಒಂದು ಸಣ್ಣ ಸ್ಪ್ರಿಂಗ್ ಕಾರ್ಯರೂಪಕ್ಕೆ ಬಂದು ರಾಸಾಯನಿಕ ಕ್ರಿಯೆಯನ್ನು ಪ್ರಚೋದಿಸುತ್ತದೆ. ಇದರಲ್ಲಿ ಸೋಡಿಯಂ ಕ್ಲೋರೇಟ್ ಮತ್ತು ಕಬ್ಬಿಣದ ಪುಡಿಯ ಮಿಶ್ರಣವಿರುತ್ತದೆ. ಇವು ಉರಿದಾಗ ಆಮ್ಲಜನಕ ಬಿಡುಗಡೆಯಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸ್ವಲ್ಪ ಶಾಖ ಮತ್ತು ಸುಟ್ಟ ವಾಸನೆ ಬರಬಹುದು. ಇದು ಸಾಮಾನ್ಯ ಪ್ರಕ್ರಿಯೆಯಾಗಿದ್ದು ಆತಂಕಪಡುವ ಅಗತ್ಯವಿಲ್ಲ. ಪ್ರಯಾಣಿಕರಿಗೆ 15 ನಿಮಿಷಗಳ ಆಮ್ಲಜನಕ ದೊರೆತರೆ, ಪೈಲಟ್‌ಗಳಿಗೆ ಹೆಚ್ಚು ಸಮಯ ಬಾಳಿಕೆ ಬರುವ ಆಮ್ಲಜನಕದ ವ್ಯವಸ್ಥೆ ಇರುತ್ತದೆ. ಏಕೆಂದರೆ ಅವರು ಸುರಕ್ಷಿತವಾಗಿ ವಿಮಾನವನ್ನು ಕೆಳಕ್ಕೆ ಇಳಿಸುವ ಜವಾಬ್ದಾರಿ ಹೊಂದಿರುತ್ತಾರೆ. ಅವರ ಮಾಸ್ಕ್‌ಗಳು ವಿಭಿನ್ನವಾಗಿದ್ದು, ಸಂಪೂರ್ಣ ಮುಖವನ್ನು ಕವರ್ ಮಾಡುತ್ತವೆ ಮತ್ತು ದೀರ್ಘಕಾಲದವರೆಗೆ ಶುದ್ಧ ಆಮ್ಲಜನಕವನ್ನು ಒದಗಿಸುತ್ತವೆ. ಮುಖವಾಡಗಳು ಕೆಳಗೆ ಬಿದ್ದಾಗ ಗಾಬರಿಯಾಗುವುದು ಸಹಜ, ಆದರೆ ಆ 15 ನಿಮಿಷಗಳು ನಿಮ್ಮನ್ನು ಸುರಕ್ಷಿತವಾಗಿಡಲು ಸಾಕಾಗುತ್ತವೆ ಎಂಬುದನ್ನು ನೆನಪಿಡಿ. ಮುಖವಾಡವನ್ನು ಮೂಗು ಮತ್ತು ಬಾಯಿ ಎರಡನ್ನೂ ಮುಚ್ಚುವಂತೆ ಧರಿಸಬೇಕು. ಪೈಲಟ್‌ಗಳು ಸುರಕ್ಷಿತ ಎತ್ತರಕ್ಕೆ ಬರುವವರೆಗೂ ಅದನ್ನು ತೆಗೆಯಬಾರದು.

ಬೊಮ್ಮಾಯಿ ರೂಪಿಸಿದ ಸಂಕಷ್ಟ ಸೂತ್ರ

ದಿಲ್ಲಿಯ ಸಭೆಯಲ್ಲಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಸಂಕಷ್ಟ ಸೂತ್ರ ಬಹುತೇಕ ಎಲ್ಲರಿಗೂ ಒಪ್ಪಿಗೆಯಾಗಿದೆ. ಅರ್ಥಾತ್, ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನಿಳಿಸಲು ಹೋರಾಡುವುದು, ಅದು ಯಶಸ್ವಿಯಾಗದಿದ್ದರೆ ತಮ್ಮ ತಮ್ಮ ಪಾಳೇಪಟ್ಟುಗಳನ್ನು ಭದ್ರಗೊಳಿಸಿಕೊಳ್ಳುವುದು ಅನಿವಾರ್ಯ ಎಂಬುದು ಮನದಟ್ಟಾಗಿದೆ.

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಬಿಜೆಪಿ ನಾಯಕ ಅಮಿತ್ ಶಾ ಅವರನ್ನು ಕಳೆದ ವಾರ ಭೇಟಿ ಮಾಡಿದ್ದಾರೆ. ಸ್ವತಃ ಅಮಿತ್ ಶಾ ಅವರ ಸೂಚನೆಯ ಹಿನ್ನೆಲೆಯಲ್ಲಿ ನಡೆದ ಈ ಭೇಟಿ ಸಂದರ್ಭದಲ್ಲಿ ಹಲವು ವಿಷಯಗಳ ಬಗ್ಗೆ ಚರ್ಚೆ ನಡೆದಿದೆ.

ಅಂದ ಹಾಗೆ, ಈ ಚರ್ಚೆಯ ಸಂದರ್ಭದಲ್ಲಿ ಕರ್ನಾಟಕದ ರಾಜಕೀಯ ಬೆಳವಣಿಗೆಗಳ ಬಗ್ಗೆ ವಿಶೇಷವಾಗಿ ಪ್ರಸ್ತಾಪವಾಗಿದೆ. ಅಧಿಕಾರ ಹಂಚಿಕೆಯ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಧ್ಯೆ ನಡೆಯುತ್ತಿರುವ ಜುಗಲ್‌ಬಂದಿಯ ಬಗ್ಗೆ ಅಮಿತ್ ಶಾ ಹೆಚ್ಚು ಆಸಕ್ತಿಯಿಂದ ಕುಮಾರಸ್ವಾಮಿಯವರನ್ನು ಕೇಳಿದ್ದಾರೆ.

''ಕುಮಾರ್ ಸೋಮೀಜಿ, ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಯ ವಿಷಯದಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಮಧ್ಯೆ ನಡೆಯುತ್ತಿರುವ ಹಗ್ಗಜಗ್ಗಾಟ ಯಾವ ಹಂತ ತಲುಪಬಹುದು? ಒಂದು ವೇಳೆ ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟರೆ, ಇಲ್ಲವೇ ಬಿಟ್ಟುಕೊಡದೆ ಹೋದರೆ ಆಗುವ ಪರಿಣಾಮ ಏನು'' ಅಂತ ಪ್ರಶ್ನಿಸಿದ್ದಾರೆ.

ಹಾಗೆಯೇ ಮುಂದುವರಿದು, ''ನನಗನ್ನಿಸುವ ಪ್ರಕಾರ, ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಟ್ಟರೆ ಸಿದ್ದರಾಮಯ್ಯ ಅವರ ಬೆಂಬಲಿಗರು ಕಾಂಗ್ರೆಸ್‌ನಿಂದ ಹೊರಬರುತ್ತಾರೆ. ಒಂದು ವೇಳೆ ಅವರು ಅಧಿಕಾರ ಬಿಟ್ಟುಕೊಡದೆ ಹೋದರೆ ಡಿ.ಕೆ. ಶಿವಕುಮಾರ್ ಅವರು ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್ ತೊರೆಯುತ್ತಾರೆ. ಹೀಗೆ ಯಾವುದೇ ಬೆಳವಣಿಗೆಗಳು ನಡೆಯಲಿ, ಅದನ್ನು ಎನ್‌ಕ್ಯಾಶ್ ಮಾಡಿಕೊಳ್ಳಲು ಬಿಜೆಪಿಗೆ ಸಾಧ್ಯವಿದೆ ಮತ್ತು ಎನ್‌ಕ್ಯಾಶ್ ಮಾಡಿಕೊಳ್ಳಬೇಕು ಕೂಡಾ. ಹೀಗಾಗಿಯೇ ನಾವು ಕರ್ನಾಟಕದಲ್ಲಿ ಏನಾಗಲಿದೆ ಎಂಬ ಬಗ್ಗೆ ಸೂಕ್ಷ್ಮವಾಗಿ ಗಮನಿಸುತ್ತಿದ್ದೇವೆ. ಆದರೆ ಈ ವಿಷಯದಲ್ಲಿ ಇನ್ನಷ್ಟು ಸೂಕ್ಷ್ಮವಾಗಿ ಗಮನಿಸುವ ಅಗತ್ಯವಿದೆ ಎಂದು ನಿಮ್ಮನ್ನು ಕೇಳುತ್ತಿದ್ದೇನೆ. ನಿಮಗೇನನ್ನಿಸುತ್ತದೆ?'' ಎಂದು ಅಮಿತ್ ಶಾ ಸ್ಪಷ್ಟವಾಗಿ ಕೇಳಿದ್ದಾರೆ.

ಯಾವಾಗ ಅಮಿತ್ ಶಾ ಅವರು ಈ ವಿಷಯದ ಬಗ್ಗೆ ಪ್ರಸ್ತಾಪಿಸಿದರೋ ಆಗ ಕುಮಾರಸ್ವಾಮಿ ಅವರು, ''ಸರ್, ಕರ್ನಾಟಕದಲ್ಲಿ ಮುಖ್ಯಮಂತ್ರಿ ಹುದ್ದೆಗಾಗಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರ ಮಧ್ಯೆ ಸಂಘರ್ಷ ನಡೆಯುತ್ತಿರುವುದೇನೋ ನಿಜ. ಆದರೆ ನನಗನ್ನಿಸುವ ಪ್ರಕಾರ ಅದು ತಾರಕಕ್ಕೆ ಹೋಗುವುದಿಲ್ಲ. ಅಂದರೆ ಸರಕಾರ ಉರುಳುವ ಮಟ್ಟಕ್ಕೆ ಹೋಗುವುದಿಲ್ಲ'' ಎಂದಿದ್ದಾರೆ.

ಕುಮಾರಸ್ವಾಮಿಯವರ ಮಾತುಗಳನ್ನು ಕೇಳಿದ ಅಮಿತ್ ಶಾ ಅಚ್ಚರಿಗೊಂಡಿದ್ದಲ್ಲದೆ, ''ಅದು ಹೇಗೆ ಕುಮಾರ್ ಸೋಮೀಜಿ, ಅಷ್ಟು ಬಹಿರಂಗವಾಗಿ ಆ ಇಬ್ಬರ ಮಧ್ಯೆ ಕದನ ನಡೆಯುತ್ತಿದೆ. ಇಬ್ಬರಿಗೂ ಹತ್ತಿರವಾದವರು ನಮ್ಮ ಪಕ್ಷದ ಕೆಲ ನಾಯಕರ ಜತೆ ಸಂಪರ್ಕದಲ್ಲಿದ್ದಾರೆ. ಅವರ ಪ್ರಕಾರ, ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಟ್ಟರೂ ಸರಕಾರಕ್ಕೆ ಅಪಾಯವಿದೆ, ಬಿಟ್ಟುಕೊಡದಿದ್ದರೂ ಕಾಂಗ್ರೆಸ್ ಸರಕಾರ ಅಲುಗಾಡಲಿದೆ'' ಎಂದಿದ್ದಾರೆ.

ಆದರೆ ಈ ಹಂತದಲ್ಲಿ ಮಾತನಾಡಿದ ಕುಮಾರಸ್ವಾಮಿಯವರು, ''ಸರ್, ನಾನು ಸಿದ್ದರಾಮಯ್ಯ ಅವರನ್ನು ಸುದೀರ್ಘ ಕಾಲದಿಂದ ನೋಡಿಕೊಂಡು ಬಂದಿದ್ದೇನೆ. ಎಷ್ಟೇ ಆದರೂ ಅವರು ನಮ್ಮ ಪಕ್ಷದಲ್ಲಿದ್ದವರು. ಅವರು ಯಾವ ಹೆಜ್ಜೆಗಳನ್ನಿಡುತ್ತಾರೆ ಅಂತ ನನಗೆ ಗೊತ್ತಿದೆ. ನನಗಿರುವ ಮಾಹಿತಿಯ ಪ್ರಕಾರ ಯಾವ ಕಾರಣಕ್ಕೂ ಅವರನ್ನು ಬಲವಂತವಾಗಿ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ಸಾಧ್ಯವೇ ಇಲ್ಲ. ಒಂದು ವೇಳೆ ಹಾಗೇನಾದರೂ ಮಾಡಿದರೆ ಸರಕಾರಕ್ಕೆ ಅಪಾಯವಾಗಬಹುದು. ಇದು ಕಾಂಗ್ರೆಸ್ ವರಿಷ್ಠರಿಗೂ ಗೊತ್ತಿದೆ. ಹೀಗಾಗಿ ಅವರು ಬಲವಂತವಾಗಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವುದಿಲ್ಲ'' ಎಂದಿದ್ದಾರೆ.

ಆಗೆಲ್ಲ ಅಮಿತ್ ಶಾ ಅವರು, ''ಹಾಗೇನಾದರೂ ಕಾಂಗ್ರೆಸ್ ವರಿಷ್ಠರು ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಕೊಡದಿದ್ದರೆ ಶಿವಕುಮಾರ್ ಅವರು ಕಾಂಗ್ರೆಸ್‌ನಿಂದ ಹೊರಬರುವುದಿಲ್ಲವೇ?'' ಎಂದು ಕೇಳಿದ್ದಾರೆ. ಆಗಲೂ ಕೂಲಾಗಿ ಉತ್ತರಿಸಿದ ಕುಮಾರಸ್ವಾಮಿ, ''ಯಾವ ಕಾರಣಕ್ಕೂ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷವನ್ನು ತೊರೆಯುವುದಿಲ್ಲ. ಯಾಕೆಂದರೆ ಅವರ ರಾಜಕೀಯದ ಬಳ್ಳಿಗಳು ಕಾಂಗ್ರೆಸ್‌ನಲ್ಲಿ ಗಟ್ಟಿಯಾಗಿವೆ. ಹೀಗಾಗಿ ಅವರು ತಮ್ಮಿಂದ ಎಷ್ಟು ಸಾಧ್ಯವೋ ಅಷ್ಟು ಒತ್ತಡ ಹೇರಿ ಮುಖ್ಯಮಂತ್ರಿ ಹುದ್ದೆ ಪಡೆಯಲು ಬಯಸುತ್ತಾರೆ. ಆದರೆ ಇಂಥ ಒತ್ತಡಗಳು ಕೆಲಸ ಮಾಡದೆ ನಿರಾಶೆಯಾದರೂ ಅವರು ಕಾಂಗ್ರೆಸ್ ಅನ್ನು ತೊರೆಯುವುದಿಲ್ಲ. ಯಾಕೆಂದರೆ ಇವತ್ತು ಸರಕಾರದ ಮಟ್ಟದಲ್ಲಿ ಅವರು ತುಂಬ ಕಂಫರ್ಟಬಲ್ ಆಗಿದ್ದಾರೆ'' ಎಂದು ವಿವರಿಸಿದ್ದಾರೆ.

ಹೀಗೆ ಕುಮಾರಸ್ವಾಮಿ ಅವರಾಡಿದ ಮಾತನ್ನು ಕೇಳಿ ಯೋಚನೆಗೆ ಬಿದ್ದ ಅಮಿತ್ ಶಾ ಅವರು, ''ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಬಲವಂತವಾಗಿ ಕೆಳಗಿಳಿಸಿದರೆ ಆಗೇನಾಗುತ್ತದೆ?'' ಎಂದು ಪ್ರಶ್ನಿಸಿದ್ದಾರೆ. ಆಗಲೂ ಕುಮಾರಸ್ವಾಮಿಯವರು, ''ಸರ್, ಕಾಂಗ್ರೆಸ್ ವರಿಷ್ಠರು ಯಾವ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನು ಬಲವಂತವಾಗಿ ಕೆಳಗಿಳಿಸುವುದಿಲ್ಲ. ಯಾಕೆಂದರೆ ಅದರ ಪರಿಣಾಮ ಏನಾಗುತ್ತದೆ ಅಂತ ಅವರಿಗೆ ಗೊತ್ತಿದೆ. ಹೀಗಾಗಿ ಅವರು ಸಿದ್ದರಾಮಯ್ಯ ಅವರ ಮನವೊಲಿಕೆ ಕಾರ್ಯವನ್ನು ಶುರು ಮಾಡುತ್ತಾರೆ. ಈ ಮನವೊಲಿಕೆ ಕಾರ್ಯ ತಕ್ಷಣವೇ ಫಲಪ್ರದವಾಗುತ್ತದೆ ಅಂತಲ್ಲ, ಆದರೆ ಮುಂದಿನ ದಿನಗಳಲ್ಲಿ ಅದು ಫಲಪ್ರದವಾಗಬಹುದು. ಯಾಕೆಂದರೆ ಸಿದ್ದರಾಮಯ್ಯ ಅವರಿಗೂ ಕಾಂಗ್ರೆಸ್ ವರಿಷ್ಠರ ವಿಷಯದಲ್ಲಿ ಗೌರವವಿದೆ. ಹೀಗಾಗಿ ವರಿಷ್ಠರು ಮನವೊಲಿಸಿದರೆ ಅವರು ಕೆಲ ಕಾಲದ ನಂತರ ಅಧಿಕಾರ ಬಿಟ್ಟುಕೊಡಬಹುದು. ಆದ್ದರಿಂದ ಸದ್ಯದ ಸ್ಥಿತಿಯಲ್ಲಿ ಅವರು ಅಧಿಕಾರ ಬಿಟ್ಟುಕೊಟ್ಟರೂ, ಬಿಟ್ಟುಕೊಡದೆ ಹೋದರೂ ಸರಕಾರಕ್ಕೆ ಯಾವ ಅಪಾಯವೂ ಇಲ್ಲ'' ಎಂದು ಹೇಳಿದ್ದಾರೆ.

ಯಾವಾಗ ಕುಮಾರಸ್ವಾಮಿಯವರು ಇಷ್ಟು ಸ್ಪಷ್ಟವಾಗಿ ವಿವರ ನೀಡಿದರೋ ಆಗ ಅಮಿತ್ ಶಾ ಅವರು, ''ಪರಿಸ್ಥಿತಿ ಹೀಗಿದ್ದಾಗ ನಾವು ಇನ್ನಷ್ಟು ಕಾಲ ತಾಳ್ಮೆಯಿಂದ ಕಾಯುವುದೇ ಒಳ್ಳೆಯದು'' ಎಂದು ಹೇಳಿ ಮೌನವಾದರಂತೆ.

ರಾಹುಲ್ ಮಾಡಿದ ಗೀತೋಪದೇಶ: ಈ ಮಧ್ಯೆ ದಿಲ್ಲಿಯ ಕಾಂಗ್ರೆಸ್ ಕಂಪೋಂಡಿನಿಂದ ಕುತೂಹಲಕಾರಿ ಸುದ್ದಿಯೊಂದು ತೇಲಿಬಂದಿದೆ. ಕರ್ನಾಟಕದ ಇಬ್ಬರು ಯುವ ನಾಯಕರಿಗೆ ರಾಹುಲ್ ಗಾಂಧಿಯವರು ಗೀತೋಪದೇಶ ಮಾಡಿದ್ದಾರೆ ಎಂಬುದೇ ಆ ಸುದ್ದಿ.

ಅಂದ ಹಾಗೆ, ಕರ್ನಾಟಕದಲ್ಲಿ ಕುರ್ಚಿಯ ಕಿತ್ತಾಟ ತಾರಕಕ್ಕೇರಿತ್ತಲ್ಲ? ಈ ಸಂದರ್ಭದಲ್ಲಿ ಇಲ್ಲಿನ ಬೆಳವಣಿಗೆಗಳ ಬಗ್ಗೆ ರಾಹುಲ್ ಗಾಂಧಿಯವರಿಗೆ ವಿವರ ನೀಡಲು ಮತ್ತು ಅಲ್ಲಿಂದ ಸಂದೇಶ ಹೊತ್ತು ತರಲು ಕರ್ನಾಟಕದ ಕಂದಾಯ ಸಚಿವರಾದ ಕೃಷ್ಣ ಭೈರೇಗೌಡ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ್ ಖರ್ಗೆ ಆಗಾಗ ದಿಲ್ಲಿಗೆ ಹೋಗುತ್ತಿದ್ದರು. ಈ ಸಂದರ್ಭದಲ್ಲಿ ಈ ಇಬ್ಬರು ನಾಯಕರ ಜತೆ ಪ್ರತ್ಯೇಕವಾಗಿ ಮಾತನಾಡುತ್ತಿದ್ದ ರಾಹುಲ್ ಗಾಂಧಿಯವರು, ''ನೀವು ಡಿ.ಕೆ.ಶಿವಕುಮಾರ್ ಅವರಿಗೆ ಸೂಕ್ಷ್ಮವಾಗಿ ಮೆಸೇಜು ಕೊಡಿ.ನಾವು ಸಿದ್ದರಾಮಯ್ಯ ಅವರಿಂದ ಬಲವಂತವಾಗಿ ಅಧಿಕಾರ ಕಿತ್ತುಕೊಳ್ಳುವುದು ಅಪಾಯಕಾರಿ. ಹೀಗಾಗಿ ಮೆಲ್ಲಗೆ ಅವರ ಮನವೊಲಿಸುವ ಕೆಲಸ ಮಾಡೋಣ. ಆಮೇಲೆ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಸಿಗುವಂತೆ ಮಾಡೋಣ'' ಎಂದು ಹೇಳುತ್ತಿದ್ದರಂತೆ.

ಆದರೆ ಈ ಸಂದರ್ಭದಲ್ಲಿ ಅವರು ಅಧಿಕಾರ ಹಂಚಿಕೆಯ ರಗಳೆಯ ಬಗ್ಗೆ ಮಾತ್ರ ಮಾತನಾಡದೆ ಬೇರೆ ನೆಲೆಗೆ ತಲುಪಿ, ''ರೀ, ನೀವು ಮಂತ್ರಿಗಳಾಗಿ ತುಂಬ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಬಗ್ಗೆ ತುಂಬ ಒಳ್ಳೆಯ ರಿಪೋರ್ಟ್ ಇದೆ. ಅದೇ ರೀತಿ ಬಿಜೆಪಿಯನ್ನು ಎದುರಿಸುವ ವಿಷಯದಲ್ಲೂ ನೀವು ಪರ್‌ಫೆಕ್ಟ್ ಆಗಿದ್ದೀರಿ. ರಾಜಕಾರಣದಲ್ಲಿ ಇವೆಲ್ಲ ನಿಮಗೆ ಪ್ಲಸ್ ಆಗುತ್ತವೆ ಎಂಬುದೇನೋ ನಿಜ. ಆದರೆ ಅಧಿಕಾರ ರಾಜಕಾರಣಕ್ಕೆ ಇದಿಷ್ಟೇ ಸಾಲುವುದಿಲ್ಲ. ಬದಲಿಗೆ ನಿಮ್ಮ ಬೆಂಬಲಕ್ಕೆ ಶಾಸಕರ ಪಡೆಯೂ ಇರಬೇಕು. ಹೀಗೆ ನಿಮ್ಮನ್ನು ಬಲವಾಗಿ ಬೆಂಬಲಿಸುವ ಶಾಸಕರು ಇಲ್ಲದಿದ್ದರೆ ನಾಳೆ ಮುಖ್ಯಮಂತ್ರಿಯಂಥ ಹುದ್ದೆಗೆ ನೀವು ಹೋಗುವುದು ಕಷ್ಟ'' ಎಂದು ವಿವರಿಸಿದ್ದಾರೆ.

ಇದೇ ರೀತಿ ಮುಂದುವರಿದಿರುವ ಅವರು, ''ನನಗನ್ನಿಸುವ ಪ್ರಕಾರ, ಭವಿಷ್ಯದ ಕರ್ನಾಟಕದ ನೇತೃತ್ವವನ್ನು ವಹಿಸಿಕೊಳ್ಳಲು ನೀವು ಅರ್ಹ ನಾಯಕರು. ಆದರೆ ಇಂಥ ಅರ್ಹತೆಗೆ ಶಾಸಕರ ಬಲವೂ ಇರಬೇಕು. ಹೀಗಾಗಿ ಈಗಿನಿಂದಲೇ ನೀವು ಪಕ್ಷದ ಶಾಸಕರ ವಿಶ್ವಾಸ ಗಿಟ್ಟಿಸುವ ಕೆಲಸವನ್ನು ಶುರುಮಾಡಿ. ಮುಂದಿನ ದಿನಗಳಲ್ಲಿ ಅದು ಕಣ್ಣಿಗೆ ಕಾಣುವಷ್ಟು ಪ್ರಖರವಾಗಿದ್ದರೆ ನೀವು ಮುಖ್ಯಮಂತ್ರಿ ಹುದ್ದೆಗೆ ಏರಬಹುದು. ಹಾಗೆ ನೀವು ಏರಬೇಕು ಎಂಬುದೇ ನನ್ನಾಸೆ'' ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಯಾವಾಗ ಅವರು ಹೀಗೆ ಗೀತೋಪದೇಶ ಮಾಡಿದರೋ, ಆಗ ಸಚಿವರಾದ ಕೃಷ್ಣ ಭೈರೇಗೌಡ ಮತ್ತು ಪ್ರಿಯಾಂಕ್ ಖರ್ಗೆ ಯೋಚನೆಗೆ ಬಿದ್ದಿದ್ದಾರೆ ಎಂಬುದು ಲೇಟೆಸ್ಟು ಸುದ್ದಿ.

ಬೊಮ್ಮಾಯಿ ರೂಪಿಸಿದ ಸಂಕಷ್ಟ ಸೂತ್ರ: ಇನ್ನು ಕೆಲ ದಿನಗಳ ಹಿಂದೆ, ದಿಲ್ಲಿಯಲ್ಲಿರುವ ಹಿರಿಯ ನಾಯಕರೊಬ್ಬರ ಮನೆಯಲ್ಲಿ ಬಿಜೆಪಿಯ ಪ್ರಮುಖ ನಾಯಕರ ಸಭೆ ನಡೆದಿದೆ. ಈ ಸಭೆಯಲ್ಲಿ ಮಾತನಾಡಿದ ಕೆಲ ನಾಯಕರು, ''ಅಲ್ರೀ, ಈ ವಿಜಯೇಂದ್ರ ಅವರನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ ಅಂತ ಎಷ್ಟೇ ಹೋರಾಟ ನಡೆದರೂ ಬಿಜೆಪಿಯ ವರಿಷ್ಠರು ಕಿವಿಯ ಮೇಲೆ ಹಾಕಿಕೊಳ್ಳುತ್ತಿಲ್ಲ. ಹಾಗಂತ ಇದೇ ಸ್ಥಿತಿ ಮುಂದುವರಿದು ವಿಧಾನಸಭಾ ಚುನಾವಣೆಯನ್ನು ವಿಜಯೇಂದ್ರ ಅವರ ನೇತೃತ್ವದಲ್ಲೇ ಎದುರಿಸುವ ಅನಿವಾರ್ಯತೆ ಸೃಷ್ಟಿಯಾದರೆ ನಮ್ಮ ಗತಿ ಏನು?'' ಅಂತ ಚಿಂತೆಯಿಂದ ಕೇಳಿದ್ದಾರೆ.

''ಎಷ್ಟೇ ಆದರೂ ಯಡಿಯೂರಪ್ಪ ಅವರು ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾದವರು. ಹೀಗೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ಆಡಳಿತದ ಮೇಲೆ ದೊಡ್ಡ ಮಟ್ಟದ ಕಂಟ್ರೋಲು ಇಟ್ಟುಕೊಂಡು 'ಡಿಫ್ಯಾಕ್ಟೋ ಚೀಫ್ ಮಿನಿಸ್ಟರ್' ತರಹ ಇದ್ದವರು ವಿಜಯೇಂದ್ರ. ಯಡಿಯೂರಪ್ಪನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭಕ್ಕೆ ಹೋಲಿಸಿದರೆ, ಎರಡನೇ ಬಾರಿ ಮುಖ್ಯಮಂತ್ರಿಯಾದಾಗ ಆ ಪೋಸ್ಟಿನಲ್ಲಿ ಸುಪ್ರೀಮ್ ಪವರ್ ಚಲಾಯಿಸಿದವರು ವಿಜಯೇಂದ್ರ. ಹೀಗಾಗಿ ಸಹಜವಾಗಿಯೇ ಅವರಿಗೆ ದೊಡ್ಡ ಮಟ್ಟದ ಶಕ್ತಿ ಇದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತಮ್ಮದೇ ನೇತೃತ್ವದಲ್ಲಿ ಬಿಜೆಪಿ ಹೋರಾಟ ನಡೆಸುವುದು ಅನಿವಾರ್ಯವಾದರೆ, ಈ ಹೋರಾಟಕ್ಕೆ ಅಗತ್ಯವಾದ 'ಡೆಡ್ಲಿ' ಶಸ್ತ್ರಾಸ್ತ್ರಗಳನ್ನು ಒದಗಿಸುವ ಕೋಠಿಗಳೂ ಅವರ ಬಳಿ ಇವೆ. ಹೀಗೆ ಎಲ್ಲ ಶಕ್ತಿ ಇರುವ ವಿಜಯೇಂದ್ರ ಅವರು ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ನೇತೃತ್ವ ವಹಿಸಿಕೊಂಡರೆ ನಮ್ಮ ಗತಿ ಏನು?'' ಎಂಬ ಆತಂಕವೂ ವ್ಯಕ್ತವಾಗಿದೆ.

ಆಗೆಲ್ಲ ಮಧ್ಯೆ ಪ್ರವೇಶಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು, ''ನೋಡ್ರೀ, ಮುಂದಿನ ಚುನಾವಣೆಯ ಹೊತ್ತಿಗೆ ಬೇರೊಬ್ಬರು ಪಕ್ಷದ ರಾಜ್ಯಾಧ್ಯಕ್ಷರಾಗಬೇಕು ಎಂಬುದು ನಮ್ಮಿಚ್ಛೆ. ಆದರೆ ಅದು ಈಡೇರಿಬಿಡುತ್ತದೆ ಅಂತ ಹೇಳಲು ಸಾಧ್ಯವಿಲ್ಲ. ಹಾಗಂತ ವಿಜಯೇಂದ್ರ ಅವರಿಗೆ ಸರೆಂಡರ್ ಆಗಿ ಇರಲೂ ಸಾಧ್ಯವಿಲ್ಲ. ಹೀಗಾಗಿ ಪಕ್ಷದ ರಾಜ್ಯ ಘಟಕಕ್ಕೆ ಬೇರೊಬ್ಬರು ಅಧ್ಯಕ್ಷರಾಗಬೇಕು ಎಂಬ ಹೋರಾಟ ಅದರ ಪಾಡಿಗೆ ನಡೆಯಲಿ. ಆದರೆ ಅದು ಯಶಸ್ವಿಯಾಗದಿದ್ದರೆ ನಾವು ಸುಮ್ಮನಿರಲೂ ಸಾಧ್ಯವಿಲ್ಲ. ಬದಲಿಗೆ, ನಮ್ಮ ನಮ್ಮ ನೆಲೆಗಳಲ್ಲಿ ಪಕ್ಷವನ್ನು ಬಲಿಷ್ಠಗೊಳಿಸಿ ಕಂಟ್ರೋಲಿನಲ್ಲಿಟ್ಟುಕೊಳ್ಳುವುದು, ಆ ಮೂಲಕ ಮುಂದಿನ ಚುನಾವಣೆಯಲ್ಲಿ ಪಕ್ಷ ಗೆದ್ದು ಅಧಿಕಾರ ಹಿಡಿಯುವಂತೆ ಮಾಡುವುದು ನಮ್ಮ ಗುರಿಯಾಗಿರಬೇಕು. ಹೀಗೆ ನಮ್ಮ ಗುರಿ ಸ್ಪಷ್ಟವಾಗಿದ್ದರೆ ವಿಜಯೇಂದ್ರ ಅಧ್ಯಕ್ಷರಾಗಿದ್ದರೂ ನಮಗೆ ತೊಂದರೆ ಇಲ್ಲ'' ಎಂದಿದ್ದಾರೆ.

ಬಿಜೆಪಿ ಮೂಲಗಳ ಪ್ರಕಾರ, ಸಭೆಯಲ್ಲಿ ಬಸವರಾಜ ಬೊಮ್ಮಾಯಿ ಅವರು ಮಂಡಿಸಿದ ಸಂಕಷ್ಟ ಸೂತ್ರ ಬಹುತೇಕ ಎಲ್ಲರಿಗೂ ಒಪ್ಪಿಗೆಯಾಗಿದೆ. ಅರ್ಥಾತ್, ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನಿಳಿಸಲು ಎಲ್ಲ ಬಗೆಯ ಹೋರಾಟ ನಡೆಸುವುದು, ಒಂದು ವೇಳೆ ಅದು ಯಶಸ್ವಿಯಾಗದೆ ಇದ್ದರೆ ತಮ್ಮ ತಮ್ಮ ಪಾಳೇಪಟ್ಟುಗಳನ್ನು ಭದ್ರಗೊಳಿಸಿಕೊಂಡು ಹಿತ ಕಾಪಾಡಿಕೊಳ್ಳುವುದು ಅನಿವಾರ್ಯ ಎಂಬುದು ಮನದಟ್ಟಾಗಿದೆ.

ಲಾಸ್ಟ್ ಸಿಪ್: ಅಂದ ಹಾಗೆ, ಡಿಕೆಶಿ ಇಂಥ ದಿನ ಸಿಎಂ ಆಗುತ್ತಾರೆ ಅಂತ ಡೇಟು ಕೊಡುತ್ತಲೇ ಬಂದಿರುವ ಡಿಕೆಶಿ ಪಾಳಯ ಈಗ ಜನವರಿ 16 ಇಲ್ಲವೇ 17ರಂದು ಕ್ರಾಂತಿ ಸಂಭವಿಸಲಿದೆ ಎನ್ನುತ್ತಿದೆ. ಆದರೆ ಸಿಎಂ ಪಾಳಯ ಮಾತ್ರ, ''ಅಧಿಕಾರ ಹಂಚಿಕೆ ಒಪ್ಪಂದಕ್ಕೆ ನಾನು ರೆಸ್ಪಾನ್ಸಿಬಲ್ ಅಲ್ಲ ಅಂತ ರಾಹುಲ್ ಗಾಂಧಿ ಹೇಳಿದ್ದಾರೆ ಮತ್ತು ಸಂಪುಟ ಪುನಾರಚನೆಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಹೀಗಾಗಿ ಜನವರಿ ಅಂತ್ಯದ ಹೊತ್ತಿಗೆ ಪುನಾನರಚನೆ ನಿಶ್ಚಿತ'' ಎನ್ನುತ್ತಿದೆ.

ವಿಕಸಿತ ಭಾರತಕ್ಕಾಗಿ ಯುವ ನಾಯಕತ್ವದ ಅನಾವರಣ

ರಾಜಕೀಯ ಹಿನ್ನೆಲೆಯಿಲ್ಲದ ಒಂದು ಲಕ್ಷ ಯುವಕರನ್ನು ಸಾರ್ವಜನಿಕ ಜೀವನಕ್ಕೆ ಕರೆತರುವಂತೆ ಕೆಂಪು ಕೋಟೆಯಿಂದ ಪ್ರಧಾನಮಂತ್ರಿ, ನರೇಂದ್ರ ಮೋದಿಯವರು ನೀಡಿದ ಕರೆಯಿಂದ ಪ್ರೇರಿತರಾಗಿ, ಜನವರಿ 2025ರಲ್ಲಿ ವಿಕಸಿತ ಭಾರತ ಯುವ ನಾಯಕರ ಸಂವಾದವನ್ನು ಪ್ರಾರಂಭಿಸಲಾಯಿತು.

ಯುವಶಕ್ತಿ

ಡಾ. ಮನ್ಸುಖ್ ಮಾಂಡವೀಯ
vveditoped@gmail.com

ಇಂದು ಭಾರತದ ಬೆಳವಣಿಗೆಯ ಕಥೆಯನ್ನು, ಅದರ ಆಲೋಚನೆಗಳನ್ನು ವಿಶೇಷವಾಗಿ ರೂಪಿಸುತ್ತಿರುವವರು ಬರೆಯುತ್ತಿದ್ದಾರೆ. ಇಂದು ದೇಶಾದ್ಯಂತ ಯುವ ಭಾರತೀಯರು, 2047ರ ವೇಳೆಗೆ ಭಾರತ ಹೇಗೆ ವೇಗವಾಗಿ ಬೆಳೆಯಬಹುದು, ಉತ್ತಮವಾಗಿ ಆಡಳಿತ ನಡೆಸಬಹುದು ಮತ್ತು ಅಭಿವೃದ್ಧಿ ಹೊಂದಬಹುದು ಎಂಬುದರ ಕುರಿತು ಆಳವಾಗಿ ಯೋಚಿಸುತ್ತಿದ್ದಾರೆ. ಅವರ ಆಲೋಚನೆಗಳು ಕ್ಯಾಂಪಸ್‌ಗಳು ಮತ್ತು ಸಮುದಾಯಗಳು, ಸ್ಟಾರ್ಟ್-ಅಪ್‌ಗಳು ಮತ್ತು ಕ್ರೀಡಾ ಕ್ಷೇತ್ರಗಳು, ತರಗತಿ ಕೊಠಡಿಗಳು ಮತ್ತು ಗ್ರಾಮ ಸಭೆಗಳಿಂದ ಈ ಕುರಿತು ನಾನಾ ವಿಚಾರಗಳು ಹೊರಹೊಮ್ಮುತ್ತಿವೆ. ನಿಜವಾದ ಪ್ರಶ್ನೆಯೆಂದರೆ ಯುವಕರಿಗೆ ಕೊಡುಗೆ ನೀಡಲು ಏನಾದರೂ ಇದೆಯೇ ಎಂಬುದು ಅಲ್ಲ, ಬದಲಾಗಿ ಅವರ ಆಲೋಚನೆಗಳಿಗೆ ರಾಷ್ಟ್ರದ ನಿರ್ದೇಶನದ ಮೇಲೆ ಪ್ರಭಾವ ಬೀರಲು ವಿಶ್ವಾಸಾರ್ಹ ವೇದಿಕೆಯನ್ನು ನೀಡಲಾಗಿದೆಯೇ ಎಂಬುದಾಗಿದೆ. ಹೌದು, ಇಂಥ ವೇದಿಕೆಯನ್ನು ಒದಗಿಸಲು ವಿಕಸಿತ ಭಾರತ ಯುವನಾಯಕರ ಸಂವಾದವನ್ನು (ವಿಬಿವೈಎಲ್‌ಡಿ) ವಿಶೇಷ ರೂಪವಾಗಿ ವಿನ್ಯಾಸಗೊಳಿಸಲಾಗಿದೆ.

ಭಾರತವು ಇಂದು ವಿಶ್ವದ ಅತಿದೊಡ್ಡ ಯುವ ಜನಸಂಖ್ಯೆಗೆ ನೆಲೆಯಾಗಿದೆ. ಆದ್ದರಿಂದ ರಾಷ್ಟ್ರದ ಭವಿಷ್ಯದ ದಿಕ್ಕನ್ನು ನೀತಿಗಳು ಅಥವಾ ಸಂಸ್ಥೆಗಳಿಂದ ಮಾತ್ರವಲ್ಲ, ಅದರ ಯುವ ನಾಗರಿಕರ ಕಲ್ಪನೆ, ದೃಢವಿಶ್ವಾಸ ಮತ್ತು ಧೈರ್ಯದಿಂದ ರೂಪಿಸಲಾಗುತ್ತದೆ ಎಂಬುದು ಸಹಜ. ಯುವ ಶಕ್ತಿಯ ಈ ವಿಶಾಲವಾದ ಪುಂಜವು ಜನಸಂಖ್ಯಾ ಪ್ರಯೋಜನಕ್ಕಿಂತ ಹೆಚ್ಚಿನದಾಗಿದೆ; ಇದು ಭಾರತದ ಶ್ರೇಷ್ಠ ರಾಷ್ಟ್ರೀಯ ಆಸ್ತಿಯಾಗಿದ್ದು, ನಾವೀನ್ಯವನ್ನು ಮುನ್ನಡೆಸುವ, ಪ್ರಜಾಪ್ರಭುತ್ವವನ್ನು ಬಲಪಡಿಸುವ ಮತ್ತು ದೇಶವನ್ನು ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯತ್ತ ಮುನ್ನಡೆಸುವ ಸಾಮರ್ಥ್ಯವನ್ನು ಹೊಂದಿದೆ.

ಭಾರತದ ಯುವಪೀಳಿಗೆಯ ಆಕಾಂಕ್ಷೆಗಳು ಬಲವಾದ ಉದ್ದೇಶ ಮತ್ತು ಸಾಧ್ಯತೆಯ ಪ್ರಜ್ಞೆಯಿಂದ ಮಾರ್ಗದರ್ಶಿಸಲ್ಪಡುತ್ತವೆ. ಇಂದಿನ ಯುವಕರು ವೈಯಕ್ತಿಕ ಪ್ರಗತಿಯಿಂದ ಮಾತ್ರ ನಡೆಸಲ್ಪಡುವುದಿಲ್ಲ; ಅವರು ಜವಾಬ್ದಾರಿಯನ್ನು ಹೊತ್ತುಕೊಂಡು ಅರ್ಥಪೂರ್ಣ ಪರಿಣಾಮ ಬೀರುವ ಬಯಕೆಯಿಂದ ಸಮಾನವಾಗಿ ಪ್ರೇರೇಪಿಸಲ್ಪಡುತ್ತಾರೆ. ಅವರು ತಮ್ಮ ಸೃಜನಶೀಲತೆಯನ್ನು ಸೂಕ್ತ ಪರಿಹಾರಗಳಾಗಿ, ಅವರ ಶಕ್ತಿಯನ್ನು ಉತ್ತಮ ನಾಯಕತ್ವವಾಗಿ ಮತ್ತು ಅವರ ಮಹತ್ವಾಕಾಂಕ್ಷೆಯನ್ನು ಸೇವೆಯಾಗಿ ಪರಿವರ್ತಿಸುವ ನೂತನ ವಿವಿಧ ಮಾರ್ಗಗಳನ್ನು ಹುಡುಕುತ್ತಾರೆ.

ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವನಾಗಿ ನನಗೆ ಹಲವಾರು ಸಂದರ್ಭಗಳಲ್ಲಿ, ವಿಶ್ವವಿದ್ಯಾಲಯದ ಕ್ಯಾಂಪಸ್‌ಗಳಲ್ಲಿ, ಗ್ರಾಮೀಣ ಜಿಲ್ಲೆಗಳಲ್ಲಿ, ಕ್ರೀಡಾ ರಂಗಗಳಲ್ಲಿ ಮತ್ತು ಯುವಜನರ ನೇತೃತ್ವದ ಸಮುದಾಯ ಉಪಕ್ರಮಗಳಲ್ಲಿ ವಿವಿಧ ವ್ಯವಸ್ಥೆಗಳಲ್ಲಿ ಯುವ ಭಾರತೀಯರೊಂದಿಗೆ ತೊಡಗಿಸಿಕೊಳ್ಳಲು ವಿಶೇಷ ಅವಕಾಶ ಸಿಕ್ಕಿದೆ. ಎಲ್ಲೆಡೆ ಯುವಜನರು ದೇಶದ ಭವಿಷ್ಯದ ಬಗ್ಗೆ ಯೋಚಿಸುವ ಗಂಭೀರತೆಯೇ ಸ್ಥಿರವಾಗಿ ಎದ್ದು ಕಾಣಿಸುತ್ತಿದೆ. ತಮ್ಮ ಹಳ್ಳಿಗಳಲ್ಲಿ ಅನೌಪಚಾರಿಕ ಕಲಿಕಾ ಕೇಂದ್ರಗಳನ್ನು ಆಯೋಜಿಸಿದ್ದ ಗ್ರಾಮೀಣ ಯುವ ಸ್ವಯಂಸೇವಕರ ಗುಂಪನ್ನು ಭೇಟಿಯಾದದ್ದನ್ನು ನಾನು ಸದಾ ನೆನಪಿಸಿಕೊಳ್ಳುತ್ತೇನೆ. ಸೀಮಿತ ಸಂಪನ್ಮೂಲಗಳೊಂದಿಗೆ ಆದರೆ ದೃಢನಿಶ್ಚಯದೊಂದಿಗೆ, ಅವರು ಸ್ಥಳೀಯವಾಗಿ ವಿನ್ಯಾಸಗೊಳಿಸಲಾದ ಪರಿಹಾರಗಳ ಮೂಲಕ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಯಲ್ಲಿನ ಅಂತರವನ್ನು ಪರಿಹರಿಸುತ್ತಿದ್ದರು. ಅವರ ಆಲೋಚನೆಗಳು ಪ್ರಾಯೋಗಿಕವಾಗಿದ್ದವು, ನೆಲದ ವಾಸ್ತವಗಳಲ್ಲಿ ಬೇರೂರಿದ್ದವು ಮತ್ತು ಜವಾಬ್ದಾರಿಯ ಸ್ಪಷ್ಟ ಪ್ರಜ್ಞೆಯಿಂದ ನಡೆಸಲ್ಪಟ್ಟಂಥವಾಗಿದ್ದವು. ಈ ರೀತಿಯ ಅನುಭವಗಳು ಸರಳ ಸತ್ಯವನ್ನು ಪುನರುಚ್ಚರಿಸುತ್ತವೆ: ಯುವಜನರನ್ನು ನಂಬಿ ಅವರಿಗೆ ಸೂಕ್ತ ಜಾಗ ನೀಡಿದಾಗ, ಅವರು ಕೇವಲ ಭಾಗವಹಿಸುವುದಿಲ್ಲ, ಅವರು ಮುನ್ನಡೆಸುತ್ತಾರೆ.

ರಾಜಕೀಯ ಹಿನ್ನೆಲೆಯಿಲ್ಲದ ಒಂದು ಲಕ್ಷ ಯುವಕರನ್ನು ಸಾರ್ವಜನಿಕ ಜೀವನಕ್ಕೆ ಕರೆತರುವಂತೆ ಕೆಂಪು ಕೋಟೆಯಿಂದ

ಪ್ರಧಾನಮಂತ್ರಿ, ನರೇಂದ್ರ ಮೋದಿಯವರು ನೀಡಿದ ಕರೆಯಿಂದ ಪ್ರೇರಿತರಾಗಿ, ಜನವರಿ 2025ರಲ್ಲಿ ವಿಕಸಿತ ಭಾರತ ಯುವ ನಾಯಕರ ಸಂವಾದವನ್ನು ಪ್ರಾರಂಭಿಸಲಾಯಿತು. ಇದು ರಾಷ್ಟ್ರೀಯ ಯುವ ಉತ್ಸವವನ್ನು ಸಂಪೂರ್ಣವಾಗಿ ಹೊಸ ಸ್ವರೂಪದಲ್ಲಿ ಮರುರೂಪಿಸಿತು. ಪ್ರತಿಕ್ರಿಯೆ ಅಭೂತಪೂರ್ವವಾಗಿತ್ತು. ವಿಕಸಿತ ಭಾರತ ಸವಾಲಿನ ಮೂಲಕ 30 ಲಕ್ಷಕ್ಕೂ ಹೆಚ್ಚು ಯುವಕರು ತೊಡಗಿಸಿಕೊಂಡಿದ್ದರು. ಎರಡು ಲಕ್ಷಕ್ಕೂ ಹೆಚ್ಚು ಪ್ರಬಂಧಗಳನ್ನು ಸಲ್ಲಿಸಲಾಯಿತು ಮತ್ತು ಸಾವಿರಾರು ಯುವಕರು ರಾಜ್ಯ ಮಟ್ಟದಲ್ಲಿ ತಮ್ಮ ಆಲೋಚನೆಗಳನ್ನು ಮಂಡಿಸಿದರು. ಈ ಪ್ರಯಾಣವು ನವದೆಹಲಿಯ ಭಾರತ ಮಂಟಪದಲ್ಲಿ ಕೊನೆಗೊಂಡಿತು, ಅಲ್ಲಿ 3,000 ಯುವ ನಾಯಕರು ಪ್ರಧಾನಮಂತ್ರಿಯವರೊಂದಿಗೆ ಮುಕ್ತವಾಗಿ ತೆರೆದುಕೊಂಡ ಮನದಲ್ಲಿ ಹರಿಯುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ ಸಂವಾದ ರೀತಿಯಲ್ಲಿ ಸಂವಹನ ನಡೆಸಿದರು. ಪ್ರಧಾನಮಂತ್ರಿಯವರು ಹಲವಾರು ಗಂಟೆಗಳ ಕಾಲ ಅವರುಗಳ ಆಲೋಚನೆಗಳನ್ನು ಆಲಿಸಿದರು ಮತ್ತು ಅವರನ್ನು ಮುನ್ನಡೆಸಲು ಪ್ರೇರೇಪಿಸಿದರು.

ಐತಿಹಾಸಿಕವಾಗಿಸಿದ ನಿಶ್ಚಿತಾರ್ಥದ ಸ್ವರೂಪ.

2047ರ ಭಾರತವನ್ನು ರೂಪಿಸುವಲ್ಲಿ ಭಾರತದ ಯುವಕರ ಧ್ವನಿಗಳು ಮುಖ್ಯವೆಂದು ಅದು ಅಕ್ಷರಶಃ ಗುರುತಿಸಿತು. ಭಾಗವಹಿಸಿದ ಯುವ ಮನಸ್ಸುಗಳನ್ನು ರಾಷ್ಟ್ರೀಯ ಸವಾಲುಗಳ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು, ಪರಿಹಾರಗಳನ್ನು ಪ್ರಸ್ತಾಪಿಸಲು ಮತ್ತು ವೈಯಕ್ತಿಕ ಮಹತ್ವಾಕಾಂಕ್ಷೆಯನ್ನು ಸಾಮೂಹಿಕ ಉದ್ದೇಶದೊಂದಿಗೆ ಜೋಡಿಸಲು, ಆಕಾಂಕ್ಷೆ ಮತ್ತು ಕ್ರಿಯೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಪ್ರೋತ್ಸಾಹಿಸಲಾಯಿತು.

ವಿಕಸಿತ ಭಾರತ ಯುವ ನಾಯಕರ ಸಂವಾದದ ಬಲವು ಅದರ ಪ್ರಮಾಣದಲ್ಲಿ ಮಾತ್ರವಲ್ಲದೆ ಅದರ ವಿನ್ಯಾಸ ಕೂಡ ಇದೇ ಚಿಂತನೆ, ಭಾಷೆ, ಸಂಸ್ಕೃತಿ ಮತ್ತು ಜೀವನ ಅನುಭವದ ವೈವಿಧ್ಯತೆಯು ಉಪಕ್ರಮದ ರಚನೆಯಲ್ಲಿ ಹುದುಗಿದೆ. ನಗರ ಮತ್ತು ಗ್ರಾಮೀಣ ಭಾರತದ ಯುವಕರು, ವಿದ್ಯಾರ್ಥಿಗಳು ಮತ್ತು ವೃತ್ತಿಪರರು, ನಾವೀನ್ಯಕಾರರು ಮತ್ತು ತಳಮಟ್ಟದ ನಾಯಕರು ಸಾಮಾನ್ಯ ವೇದಿಕೆಯಲ್ಲಿ ಒಟ್ಟಿಗೆ ಸೇರುತ್ತಾರೆ. ನಿಶ್ಚಿತಾರ್ಥದ ಬಹು ಹಂತಗಳು ವಿಚಾರಗಳನ್ನು ಸಂವಾದ ಮತ್ತು ವಿನಿಮಯದ ಮೂಲಕ ಪರಿಷ್ಕರಿಸುವುದನ್ನು ಖಚಿತಪಡಿಸುತ್ತದೆ. ಇದನ್ನು ಭೌಗೋಳಿಕತೆ, ಭಾಷೆ ಅಥವಾ ಹಿನ್ನೆಲೆಯಿಂದ ಫಿಲ್ಟರ್ ಮಾಡಲಾಗುವುದಿಲ್ಲ. ಹಾಗಾಗಿ, ವಿಷಯ ಮತ್ತು ಕೌಶಲ ಆಧಾರಿತವಾಗಿ ಆಯ್ಕೆ ಮಾಡುವಾಗ, ಭಾಗವಹಿಸುವ ಪ್ರತಿಯೊಬ್ಬ ಯುವಕನಿಗೆ ಅದನ್ನು ವರ್ಧಿಸಲು ಧ್ವನಿ ಮತ್ತು ವೇದಿಕೆ ಎರಡನ್ನೂ ಹೊಂದಿರುವುದನ್ನು ಸಂವಾದ ಖಚಿತಪಡಿಸುತ್ತದೆ.

ಸ್ವಾತಂತ್ರ್ಯ ಹೋರಾಟದಿಂದ ಸ್ವತಂತ್ರ ಭಾರತದ ಸಂಸ್ಥೆಗಳ ನಿರ್ಮಾಣದವರೆಗಿನ ರಾಷ್ಟ್ರದ ನಿರ್ಣಾಯಕ ಕ್ಷಣಗಳ ಹೃದಯಭಾಗದಲ್ಲಿ ಭಾರತದ ಯುವಕರು ಯಾವಾಗಲೂ ಇದ್ದಾರೆ. ಪ್ರತಿ ತಿರುವಿನ ಹಂತದಲ್ಲೂ, ಯುವ ಭಾರತೀಯರು ಧೈರ್ಯ, ದೃಢನಿಶ್ಚಯ ಮತ್ತು ಮುನ್ನಡೆಸುವ ಇಚ್ಛೆಯೊಂದಿಗೆ ಮುಂದೆ ಬಂದಿದ್ದಾರೆ. ಇಂದು, ರಾಷ್ಟ್ರವು ಮತ್ತೊಮ್ಮೆ ತನ್ನ ಯುವಕರನ್ನು ಭಾಗವಹಿಸುವಿಕೆಗಾಗಿ ಮಾತ್ರವಲ್ಲ, ಭಾರತದ ಬೆಳವಣಿಗೆಯ ಕಥೆಯನ್ನು ಸಹ-ಸೃಷ್ಟಿಸುವಲ್ಲಿ ನಾಯಕತ್ವ ಮತ್ತು ಚೈತನ್ಯಕ್ಕಾಗಿ ನೋಡುತ್ತದೆ. 2047ರಲ್ಲಿ ವಿಕಸಿತ ಭಾರತದ ದೃಷ್ಟಿಕೋನವು ಆರ್ಥಿಕ ಪ್ರಗತಿಯನ್ನು ಮೀರಿದೆ; ಜತೆಗೆ, ಇದು ಸಾಮಾಜಿಕ ಸಾಮರಸ್ಯ, ಪರಿಸರ ಜವಾಬ್ದಾರಿ, ತಾಂತ್ರಿಕ ಉಸ್ತುವಾರಿ ಮತ್ತು ಅಂತರ್ಗತ ಬೆಳವಣಿಗೆಗೆ ಕರೆ ನೀಡುತ್ತದೆ. ಈ ಸಂಕೀರ್ಣ ಸವಾಲುಗಳಿಗೆ ತಾಜಾ ಚಿಂತನೆ, ಹೊಂದಿಕೊಳ್ಳುವಿಕೆ ಮತ್ತು ಹೊಸದನ್ನು ಅಳವಡಿಸಿಕೊಳ್ಳುವ ಸಾಮರ್ಥ್ಯದ ಅಗತ್ಯವಿದೆ. ಇವು ಭಾರತದ ಯುವ ಶಕ್ತಿಯಲ್ಲಿ ಬಲವಾಗಿ ನೆಲೆಸಿರುವ ಗುಣಗಳಾಗಿವೆ.

2026ರ ಜನವರಿ 9-12ರ ಅವಧಿಯಲ್ಲಿ ನಿಗದಿಪಡಿಸಲಾದ ಮೊದಲ ಆವೃತ್ತಿಯಾದ ವಿಕಸಿತ ಭಾರತ ಯುವ ನಾಯಕರ ಸಂವಾದ ಕಾರ್ಯಕ್ರಮ ನಡೆಯಲಿದೆ. ಇದು ಅದ್ಭುತ ಯಶಸ್ಸು ಸಾಧಿಸಲಿದೆ. ಇದರ ನಂತರ ರಾಷ್ಟ್ರೀಯ ಯುವಕರು ಜಾಗತಿಕ ಅನುರಣನದೊಂದಿಗೆ ಸಭೆ ಸೇರುವುದರಿಂದ ನಿರ್ಣಾಯಕ ಜಿಗಿತವನ್ನು ಕಾಣಲಿದ್ದಾರೆ. ಇದು ಭಾರತದ ಜಾಗತಿಕ ವಿಕಾಸವನ್ನು ಸೂಚಿಸುತ್ತದೆ. ಡಿಸೈನ್ ಫಾರ್ ಭಾರತ್ ಮತ್ತು ಟೆಕ್ ಫಾರ್ ವಿಕಸಿತ್ ಭಾರತ್‌ನಂಥ ಹೊಸ ಉಪಕ್ರಮಗಳು ಮತ್ತು ಅಂತಾರಾಷ್ಟ್ರೀಯ ಭಾರತೀಯ ಯುವ ವಲಸೆಗಾರರ ಸೇರ್ಪಡೆಯೊಂದಿಗೆ, ಸಂಭಾಷಣೆಯು ಗಡಿಗಳನ್ನು ಮೀರಿ ವಿಸ್ತರಿಸುತ್ತದೆ. ಆದರೆ, ಅದರ ಹೃದಯಭಾಗದಲ್ಲಿ, ಧ್ಯೇಯವು ಬದಲಾಗದೆ ಉಳಿದಿದೆ. ಇದು, ಯುವ ಭಾರತೀಯರು ಧೈರ್ಯದಿಂದ ಯೋಚಿಸಲು, ನಿರ್ಭಯವಾಗಿ ವ್ಯವಸ್ಥೆ ರಚಿಸಲು ಮತ್ತು ದೃಢನಿಶ್ಚಯದಿಂದ ಮುನ್ನಡೆಸಲು ಸಂಪೂರ್ಣ ಅಧಿಕಾರ ನೀಡುವುದು.

ಈ ವರ್ಷದ ಆವೃತ್ತಿಯ ಪ್ರಮಾಣವು ಯುವಜನತೆಯ ಆ ಮಹತ್ವಾಕಾಂಕ್ಷೆಗಳ ಆಳವನ್ನು ಒತ್ತಿಹೇಳುತ್ತದೆ. 2026ರ ವಿಕಸಿತ ಭಾರತ ಯುವ ನಾಯಕರ ಸಂವಾದಕ್ಕಾಗಿ ಆಯ್ಕೆಯ ಮೊದಲ ಹಂತವಾದ ವಿಕಸಿತ ಭಾರತ ರಸಪ್ರಶ್ನೆಯಲ್ಲಿ 50 ಲಕ್ಷಕ್ಕೂ ಹೆಚ್ಚು ಯುವಕರು ಭಾಗವಹಿಸಿದ್ದರು. ಇದು ಯುವಜನರು ತೊಡಗಿಸಿಕೊಳ್ಳುವ ಈ ರೀತಿಯ ಅತಿದೊಡ್ಡ ಕಸರತ್ತುಗಳಲ್ಲಿ ಒಂದಾಗಿದೆ. ನಿರಂತರವಾಗಿ ನಾಲ್ಕು ದಿನಗಳಲ್ಲಿ, ದೇಶದ ಪ್ರತಿಯೊಂದು ಮೂಲೆಯಿಂದ ಭಾಗವಹಿಸುವವರು ಪ್ರಮುಖ ರಾಷ್ಟ್ರೀಯ ಮತ್ತು ಜಾಗತಿಕ ಧ್ವನಿಗಳೊಂದಿಗೆ ತೊಡಗಿಸಿಕೊಳ್ಳುತ್ತಾರೆ, ಶಿಸ್ತುಗಳು ಮತ್ತು ಭೌಗೋಳಿಕತೆಯನ್ನು ಮೀರಿದ ಪ್ರಾಯೋಗಿಕ ಒಳನೋಟಗಳು, ಆಲೋಚನೆಗಳು ಮತ್ತು ದೃಷ್ಟಿಕೋನಗಳನ್ನು ಹಂಚಿಕೊಳ್ಳಲು ಮತ್ತು ಪರಸ್ಪರ ಸ್ಪರ್ಧೆ ಮೂಲಕ ಇಡೀ ದೇಶದ ಗಮನವನ್ನು ಸೆಳೆಯುತ್ತಾರೆ.

ಈ ವೇದಿಕೆಯು ನಮ್ಮ ಯುವಶಕ್ತಿಗೆ ಮಾತನಾಡಲು ಮಾತ್ರವಲ್ಲದೆ, ಕೇಳಲು ಕೂಡ ಅವಕಾಶವನ್ನು ನೀಡುತ್ತದೆ. ಈ ವೇದಿಕೆಯು ಯುವ ಭಾರತೀಯರು ತಮ್ಮ ಆಲೋಚನೆಗಳು, ಆಕಾಂಕ್ಷೆಗಳು ಮತ್ತು ಪರಿಹಾರಗಳನ್ನು ನೇರವಾಗಿ ಭಾರತದ ಪ್ರಧಾನಮಂತ್ರಿಯವರಿಗೆ ವ್ಯಕ್ತಪಡಿಸಲು ಅನುವು ಮಾಡಿಕೊಡುತ್ತದೆ. ಸ್ವಾಮಿ ವಿವೇಕಾನಂದರ ಸ್ಮರಣಾರ್ಥವಾಗಿ ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುವ ಜನವರಿ 12ರಂದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತ ಮಂಟಪದಲ್ಲಿ ಯುವಕರೊಂದಿಗೆ ವೈಯಕ್ತಿಕವಾಗಿ ಸಂವಹನ ನಡೆಸಲಿದ್ದಾರೆ. ಭಾರತದ ಭವಿಷ್ಯವನ್ನು ಹೇಗೆ ಕಲ್ಪಿಸಿಕೊಳ್ಳುತ್ತಾರೆ ಮತ್ತು ರೂಪಿಸಲು ಉದ್ದೇಶಿಸಿದ್ದಾರೆ ಎಂಬುದನ್ನು ನೇರವಾಗಿ ಸ್ವತಃ ಪ್ರಧಾನಮಂತ್ರಿಯವರೇ ಆಲಿಸಲಿದ್ದಾರೆ.

ಭಾರತವು ಸ್ವಾತಂತ್ರ್ಯದ ಶತಮಾನೋತ್ಸವದತ್ತ ಸಾಗುತ್ತಿರುವಾಗ, ಧೈರ್ಯದಿಂದ ಊಹಿಸುವ ಮತ್ತು ವಿಚಾರಗಳನ್ನು ಅರ್ಥಪೂರ್ಣ ಕಾರ್ಯವಾಗಿ ಪರಿವರ್ತಿಸುವ ಸಂಕಲ್ಪವನ್ನು ಹೊಂದಿರುವ ಯುವ ವ್ಯಕ್ತಿಗಳ ಭಾಗವಹಿಸುವಿಕೆಯನ್ನು ಈ ವೇದಿಕೆ ಬಯಸುತ್ತದೆ. ಕೇವಲ ಸಂವಾದಕ್ಕೆ ವೇದಿಕೆ ಆಗುವುದಕ್ಕಿಂತ ಹೆಚ್ಚಾಗಿ, ಈ ಸಂದರ್ಭವು ಯುವ ಭಾರತೀಯರನ್ನು ಮುಂಚೂಣಿಯಿಂದ ಮುನ್ನಡೆಸಲು, ರಾಷ್ಟ್ರೀಯ ಸವಾಲುಗಳನ್ನು ಎದುರಿಸಲು ಮತ್ತು ವಿಕಸಿತ ಭಾರತವನ್ನು ನಿರ್ಮಿಸುವತ್ತ ತಮ್ಮ ಮಹತ್ವಾಕಾಂಕ್ಷೆಗಳನ್ನು ಮುಕ್ತವಾಗಿ ಹರಿಸಲು ಕರೆ ನೀಡುವ ಒಂದು ಚಳವಳಿಯಾಗಿ ರೂಪಾಂತರವಾಗಲಿದೆ.

ವಿಶ್ವಗುರುವಾಗಿ ಭಾರತವನ್ನು ಮುನ್ನಡೆಸುವ ವಿಶ್ವಾಸ ಮತ್ತು ಸೇವೆ ಸಲ್ಲಿಸುವ ಬದ್ಧತೆ ಇರುವವರು ನಾಳೆಯ ದೇಶವನ್ನು ನಿರ್ಮಿಸುತ್ತಾರೆ. ಭಾರತದ ಯುವಕರು ಇದಕ್ಕೆ ಸಿದ್ಧರಾಗಿದ್ದಾರೆ. ರಾಷ್ಟ್ರವು ಅವರೊಂದಿಗೆ ನಡೆಯಲು ಸಿದ್ಧರಾಗಿರಬೇಕು.

(ಲೇಖಕರು ಕೇಂದ್ರ ಯುವ ವ್ಯವಹಾರಗಳು ಮತ್ತು ಕ್ರೀಡಾ ಖಾತೆಯ ಸಚಿವರು)

ಭಟ್ಟರ್ ಸ್ಕಾಚ್

- **ರವಿ ದೊಡ್ಡಬಳ್ಳಾಪುರ, ಬೆಂಗಳೂರು**
ಭಟ್ರೇ, ಪತ್ರಿಕೆ ಓದುವುದರಿಂದ ಆಗುವ ದೊಡ್ಡ ಲಾಭವೇನು?
– **ಜಗತ್ತಿನ ಎಲ್ಲ ಗಲಾಟೆಗಳನ್ನು ಓದಿ ಮುಗಿಸಿದ ಮೇಲೆ, ಅದನ್ನು ಹರವಿ ಅದರ ಮೇಲೆ ಆರಾಮವಾಗಿ ಮಲಗಬಹುದು!**

- **ಕೆ.ನಾಣಯ್ಯ, ಸೋಮವಾರಪೇಟೆ**
ಭಟ್ರೇ, ರಾಜಕಾರಣಿಗಳು ಚುನಾವಣೆ ಮುಗಿದ ಮೇಲೆ ಏಕೆ ಕಾಣಿಸುವುದಿಲ್ಲ?
– **ಯಾಕೆಂದರೆ ಅವರಿಗೆ ಗೆದ್ದ ಮೇಲೆ ಜನಸೇವೆ ಮಾಡಲು ಸಮಯವೇ ಇರುವುದಿಲ್ಲ, ಸೋತವರನ್ನು ಹುಡುಕುವ ವ್ಯವಧಾನವೂ ಇರುವುದಿಲ್ಲ!**

- **ವಿ.ಮೂರ್ತಿ, ಕೆಂಗೇರಿ**
ಭಟ್ರೇ, ಹೆಣ್ಣುಮಕ್ಕಳು ಶಾಪಿಂಗ್ ಹೋಗುವಾಗ ಗಂಡಂದಿರನ್ನು ಏಕೆ ಕರೆದುಕೊಂಡು ಹೋಗುತ್ತಾರೆ?
– **ಬ್ಯಾಗ್ ಹೊರಲು ಒಬ್ಬ 'ಬಾಡಿ ಗಾರ್ಡ್' ಮತ್ತು ಬಿಲ್ ಕಟ್ಟಲು ಒಬ್ಬ 'ಎಟಿಎಂ' ಬೇಕಲ್ಲವೇ?**

- **ರಾಘವ ಜೋಶಿ, ಬೆಂಗಳೂರು**
ಭಟ್ರೇ, ಮೇಕಪ್ ಮತ್ತು ಮಳೆ ಇವೆರಡರಲ್ಲಿ ಯಾವುದು ಡೇಂಜರ್?
– **ಮಳೆ ಬಂದಾಗ ಮೇಕಪ್ ತೊಳೆದು ಹೋದರೆ, ಮನೆಯವರೇ 'ಇವರು ಯಾರು?' ಎಂದು ಕೇಳುವ ಪರಿಸ್ಥಿತಿ ಬರಬಹುದು!**

- **ರೂಪಾ, ಬೆಂಗಳೂರು**
ಭಟ್ರೇ, ಕೆಲವರು ತಮ್ಮ ಸಣ್ಣತನವನ್ನು ಬಿಡುವುದೇ ಇಲ್ಲವೇಕೆ?
– **ಯಾಕೆಂದರೆ ದೊಡ್ಡ ಮನಸ್ಸು ಮಾಡಬೇಕೆಂದರೆ ಹೃದಯದಲ್ಲಿ ಖಾಲಿ ಜಾಗವಿರಬೇಕು, ಅಲ್ಲಿ ಈಗ ಅಸೂಯೆ ಬಾಡಿಗೆಗೆ ಬಂದಿದೆಯಲ್ಲ!**

- **ಜಗತ್ ವಿ.ರಾಜ್, ಬೆಂಗಳೂರು**
ಭಟ್ರೇ, ಸಾಲ ಕೊಟ್ಟವನಿಗೂ ಸಾಲ ಪಡೆದವನಿಗೂ ಇರುವ ವ್ಯತ್ಯಾಸವೇನು?
– **ಸಾಲ ಕೊಟ್ಟವನಿಗೆ ರಾತ್ರಿ ನಿದ್ದೆ ಬರುವುದಿಲ್ಲ, ಸಾಲ ಪಡೆದವನಿಗೆ ಬೆಳಗ್ಗೆ ಫೋನ್ ಎತ್ತಲು ಇಷ್ಟವಿರುವುದಿಲ್ಲ!**

- **ರಾಜೇಶ್ವರಿ, (ವಾಟ್ಸಾಪ್ ಮೂಲಕ)**
ಭಟ್ರೇ, ಡಯಟ್ ಅಂದರೆ ಏನು?
– **ರುಚಿಯಾದ ತಿಂಡಿಗಳನ್ನು ನೋಡಿ ಮನಸ್ಸಲ್ಲೇ ತಿಂದು, ಹೊಟ್ಟೆ ತುಂಬಿಸಿಕೊಳ್ಳುವುದು!**

- **ಕೆ.ನಾಗರಾಜ ದೀಕ್ಷಿತ್, ಮೈಸೂರು**
ಭಟ್ರೇ, ವಾಟ್ಸಾಪ್ ಗ್ರೂಪ್‌ಗಳಲ್ಲಿ ಅತಿ ಹೆಚ್ಚು ಸುಳ್ಳು ಹೇಳುವುದು ಯಾರು?
– **'ಟೈಪಿಂಗ್...' ಅಂತ ತೋರಿಸಿ ಅರ್ಧ ಗಂಟೆಯ ನಂತರ ಬರಿ ಒಂದು 'ಓಕೆ' ಇಮೋಜಿ ಕಳುಹಿಸುವವರು!**

- **ಪಿ.ವಿನೋದ್ ರಾವ್, ಬೆಂಗಳೂರು**
ಭಟ್ರೇ, ಆಫೀಸ್‌ನಲ್ಲಿ ಬಾಸ್ ಯಾವಾಗಲೂ ಯಾಕೆ ಗಂಭೀರವಾಗಿರುತ್ತಾರೆ?
– **ಯಾಕೆಂದರೆ ಅವರು ನಕ್ಕರೆ, ಕೆಲಸದವರು ಅದನ್ನು 'ಇವತ್ತು ಬೇಗ ಮನೆಗೆ ಹೋಗಬಹುದು' ಎಂಬ ಸಿಗ್ನಲ್ ಅಂದುಕೊಳ್ಳುತ್ತಾರೆ!**

- **ಪಾಪಣ್ಣ, ಮಲ್ಲೇಶ್ವರ**
ಭಟ್ರೇ, ಮದುವೆಯ ನಂತರ ಗಂಡನ ಪರಿಸ್ಥಿತಿ ಹೇಗಿರುತ್ತದೆ?
– **ಥೇಟು ನಿನ್ನ ಹೆಸರಿನಂತಿರುತ್ತದೆ!**

ಇರಾಣ... ಯಾಕಿಷ್ಟು ಹೈರಾಣ...!?

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಅದು 1979-80ರ ಕಾಲ. ಆಗ ನಾನು ನಾಲ್ಕು ಮತ್ತು ಐದನೆಯ ತರಗತಿಯಲ್ಲಿದ್ದೆ. ಇರಾಣ (ಇರಾನ್) ದೇಶದಿಂದ ಬಂದಿದ್ದ ನಾಲ್ಕು ಜನರು ಶಿರಸಿಯ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದರು. ಅದರಲ್ಲಿ, ಅಬ್ಬಾಸ್ ಮತ್ತು ಅಲಿ ಹೆಸರಿನ ಇಬ್ಬರು ನಮ್ಮ ಮುಂದಿನ ಮನೆಯಲ್ಲಿ ಬಾಡಿಗೆಗೆ ಉಳಿದುಕೊಂಡಿದ್ದರು. ಆ ಕಾಲದಲ್ಲಿ ಶಿರಸಿಯಲ್ಲಿದ್ದ ಬೆರಳೆಣಿಕೆಯಷ್ಟು 'ಯಜ್ಡಿ' ಮೋಟರ್ ಬೈಕ್‌ನಲ್ಲಿ ಅಲಿಯದ್ದೂ ಒಂದಾಗಿತ್ತು. ಅದರಲ್ಲೂ ನಮ್ಮ ಬೀದಿಯಲ್ಲಿ ಯಜ್ಡಿ ಬೈಕ್ ಸದ್ದು ಮಾಡಿದರೆ, ಅಲಿ ಬಂದ ಅಂತಲೇ ಲೆಕ್ಕ. ಆದರೆ ಆತ ಇನ್ನಿಬ್ಬರ ಜತೆಯೇ ಹೆಚ್ಚು ಓಡಾಡುತ್ತಿದ್ದ. ಆಗೆಲ್ಲ ಮನೆಯಲ್ಲಿ ಅಬ್ಬಾಸ್ ಒಬ್ಬನೇ ಇರುತ್ತಿದ್ದ ದಿನಗಳೇ ಹೆಚ್ಚು.

ಪಿಯುಸಿವರೆಗಿನ ಓದನ್ನು ಇರಾಣದಲ್ಲಿಯೇ ಮುಗಿಸಿದ್ದ ಅಬ್ಬಾಸ್, ಬಿಎ ಮೊದಲನೆಯ ವರ್ಷಕ್ಕೆ ಬಂದು ಸೇರಿಕೊಂಡಿದ್ದ. 6 ಅಡಿ ಎತ್ತರ ಇದ್ದ ಅಬ್ಬಾಸ್ ಇರಾಣಿನ ಸೇಬು ಹಣ್ಣಿನಂತೆ ಕೆಂಪು ಕೆಂಪಾಗಿದ್ದ. 30 ವರ್ಷದ ಆಸುಪಾಸಿನಲ್ಲಿದ್ದ ಅಬ್ಬಾಸ್ ತಲೆ ಮಾತ್ರ ಆಗಲೇ ಅರ್ಧ ಬೋಳಾಗಿತ್ತು. ಆ ದಿನಗಳಲ್ಲಿ ಇರಾಣ ಸರಕಾರದಿಂದ ವಿದ್ಯಾರ್ಥಿವೇತನ ಪಡೆದು ವಿದ್ಯಾರ್ಥಿಗಳು ಭಾರತಕ್ಕೆ, ಅಂತೆಯೇ ಇತರ ದೇಶಗಳಿಗೂ ಕಲಿಯಲು ಹೋಗುತ್ತಿದ್ದರು. ನನಗೆ ತಿಳಿದಂತೆ ಅಬ್ಬಾಸ್‌ಗೆ ಬಡತನವೇನೂ ಇರಲಿಲ್ಲ, ಆದರೂ ಅಲ್ಲಿಯ ಸರಕಾರದಿಂದ ವಿದ್ಯಾರ್ಥಿವೇತನ ಸಿಗುತ್ತಿತ್ತು.

ನನಗೆ ಗೊತ್ತಿದ್ದ 'ಯೆಸ್', 'ನೋ' ಇಂಗ್ಲಿಷ್, ಅವನಿಗೆ ಗೊತ್ತಿದ್ದ 'ಬೇಕು', 'ಬೇಡ' ಕನ್ನಡದಿಂದಲೇ ನಾವಿಬ್ಬರೂ ಸ್ನೇಹಿತ(!?)ರಾಗಿದ್ದೆವು. ನಮ್ಮಿಬ್ಬರ ನಡುವೆ ಭಾಷೆಯ ಬೇಲಿ ಇರಲಿಲ್ಲ. ಕ್ರಮೇಣ ಆತನಿಂದ ನಾನು ಕೆಲವು ಇಂಗ್ಲಿಷ್ ಪದಗಳನ್ನೂ, ನನ್ನಿಂದ ಆತ ಕನ್ನಡದ ಪದಗಳನ್ನೂ ಕಲಿತ. ನನ್ನನ್ನು ಆತ ಒಂದು ಕನ್ನಡ ಸಿನಿಮಾಕ್ಕೂ ಕರೆದುಕೊಂಡು ಹೋಗಿದ್ದ ಎಂದು ನೆನಪು.

ಕೆಲವು ವಿಷಯಗಳಿಗಾಗಿ ಅಬ್ಬಾಸ್ ನನಗೆ ಇಷ್ಟವಾಗುತ್ತಿದ್ದ. ಆತನ ಮುಖದಲ್ಲಿ ಮುಗುಳ್ನಗು ಎಂದಿಗೂ ಮಾಸುತ್ತಿರಲಿಲ್ಲ. ನಾನಾಗಲಿ, ನನ್ನ ಸ್ನೇಹಿತರಾಗಲಿ, ಎಲ್ಲೇ ಕಂಡರೂ ಮುಗುಳ್ನಗೆಯೊಂದಿಗೆ ಮಾತನಾಡಿಸುತ್ತಿದ್ದ. ವಯಸ್ಸಿನ ಅಂತರ ಮರೆತು ಕೆಲವೊಮ್ಮೆ ಕ್ರಿಕೆಟ್ ಆಡಲು ಬಂದು ಸೇರಿಕೊಳ್ಳುತ್ತಿದ್ದ. ನಾನು ಅವನ ಮನೆಗೆ ಹೋದರಂತೂ ಆತನಿಗೆ ಸಂಭ್ರಮ. ಬಿಸ್ಕತ್ತು, ಚಾಕಲೇಟ್, ಹಣ್ಣು, ಏನಾದರೂ ತಿನ್ನಿಸಿದರೆ ಮಾತ್ರ ಆತನಿಗೆ ಸಮಾಧಾನ. ನಾನೂ ಆತನ ಮನೆಗೆ ಹೋದರೆ ಹೆಚ್ಚಾಗಿ ಮೋಸಂಬಿಹಣ್ಣು ಕೊಡುವಂತೆ ಕೇಳುತ್ತಿದ್ದೆ. ಕಾರಣ, ನಾವೆಲ್ಲ ಕೈಯಲ್ಲಿ ಸುಲಿಯುತ್ತಿದ್ದ ಮೋಸಂಬಿಯನ್ನು ಅಬ್ಬಾಸ್ ಚಾಕುವಿನಿಂದ ಚಕಚಕನೆ ನಿಮಿಷಾರ್ಧದಲ್ಲಿ ನುಣ್ಣಗೆ ಕೆತ್ತಿ ಇಡುತ್ತಿದ್ದ. ನನಗೆ ಅದನ್ನು ತಿನ್ನುವುದಕ್ಕಿಂತ ನೋಡುವುದೇ ಖುಷಿಯಾಗುತ್ತಿತ್ತು.

ಒಮ್ಮೆ 'ನಿಮ್ಮ ದೇಶದ ದುಡ್ಡು ಹೇಗಿರುತ್ತದೆ?' ಎಂದು ಕೇಳಿದ್ದಕ್ಕೆ, ಒಂದು ನೋಟು, ಕೆಲವು ನಾಣ್ಯಗಳನ್ನು ನನ್ನ ಕೈಯಲ್ಲಿಟ್ಟು, 'ಇದನ್ನು ನೀನೇ ಇಟ್ಟುಕೋ' ಎಂದಿದ್ದ. ಆಗ ಅದರ ಮೌಲ್ಯ ಎಷ್ಟು ಎಂದು ತಿಳಿಯದಿದ್ದರೂ, ಭಾರತದ ರುಪಾಯಿಗೆ ಹೋಲಿಸಿದರೆ, ಹೆಚ್ಚು ಎಂಬುದು ಗೊತ್ತಿತ್ತು. ಈಗ, ಭಾರತದ ಒಂದು ರುಪಾಯಿ ಕೊಟ್ಟರೆ ಇರಾಣಿನ 11,000ಕ್ಕೂ ಹೆಚ್ಚು ರಿಯಾಲ್ ನಮ್ಮ ಕೈಗೆ ಬರುತ್ತದೆ, ಇರಲಿ. ಹೀಗಿರುವಾಗ ಒಂದು ದಿನ ಅಬ್ಬಾಸ್ ಬಹಳ ಬೇಸರದಲ್ಲಿದ್ದ. ಕಣ್ಣಲ್ಲಿ ನೀರು ತುಂಬಿಕೊಂಡಿದ್ದ. ಏನಾಯಿತು ಎಂದು ಕೇಳಿದಾಗ, 'ನಾನು ಓದುವುದನ್ನು ನಿಲ್ಲಿಸಿ ನನ್ನ ದೇಶಕ್ಕೆ ಹಿಂದಿರುಗಿ ಹೋಗಬೇಕಾಗಿದೆ. ನನ್ನ ದೇಶದಲ್ಲಿ ಪರಿಸ್ಥಿತಿ ಚೆನ್ನಾಗಿಲ್ಲ. ಯುದ್ಧದ ವಾತಾವರಣ ಇರುವುದರಿಂದ ಈಗಿನ ಸರಕಾರ ನಮ್ಮನ್ನೆಲ್ಲ ನಮ್ಮ ದೇಶಕ್ಕೆ ಹಿಂದಿರುಗಿ ಬರಲು ಹೇಳುತ್ತಿದೆ' ಎಂದಿದ್ದ. ಅಂದು ಅವನ ಬಳಿ ಇದ್ದ ಒಂದೆರಡು ಪುಸ್ತಕ, ಪಟ್ಟಿ, ಮ್ಯಾಗಜಿನ್, ಬಿಸ್ಕತ್ತು ಇತ್ಯಾದಿಗಳನ್ನೆಲ್ಲ ಒಂದು ಚೀಲಕ್ಕೆ ತುಂಬಿಸಿ ನನಗೆ ಕೊಟ್ಟಿದ್ದ. ಮಾರನೇ ದಿನ ನಾನು ಏಳುವುದರ ಒಳಗೇ ಆತ ಊರುಬಿಟ್ಟಿದ್ದ ಎಂದು ತಿಳಿದಾಗ ಬಹಳ ಬೇಸರವಾಗಿತ್ತು. ಅದಾಗಿ ಸುಮಾರು ಒಂದೂವರೆ ದಶಕ ಕಳೆದು, ನಾನು ಸೌದಿ ಅರೇಬಿಯಾಕ್ಕೆ ಬಂದ ನಂತರವೇ ಇರಾಣದ ರಾಜಕೀಯ, ಇರಾಣ ಮತ್ತು ಇರಾಕಿನ ನಡುವಿನ ಯುದ್ಧದ ವಿವರ ಇತ್ಯಾದಿಗಳ ಹೆಚ್ಚಿನ ಮಾಹಿತಿ ತಿಳಿಯಿತು.

ಒಮ್ಮೊಮ್ಮೆ ಕೆಲವು ಸಂಬಂಧಗಳು, ಅದರಲ್ಲೂ ಬಾಲ್ಯದ ನೆನಪುಗಳು ಎಷ್ಟು ಗಟ್ಟಿಯಾಗಿಬಿಡುತ್ತವೆ ಎಂದರೆ, ಇಂದಿಗೂ ಯಾವುದೇ ವಿಷಯಕ್ಕೆ 'ಇರಾಣ' ಹೆಸರು ಕೇಳಿದರೂ ನನಗೆ ಮೊದಲು ನೆನಪಾಗುವುದೇ ಅಬ್ಬಾಸ್. ಆಗ ಆಡಳಿತ ಹಿಂದಿರುಗಿ ಬರುವಂತೆ ಹೇಳಿತ್ತೋ ಅಥವಾ ಆತನ ಮನೆಯವರು ಕರೆಸಿಕೊಂಡಿದ್ದರೋ ಗೊತ್ತಿಲ್ಲ. ಒಂದು ವೇಳೆ ಅಬ್ಬಾಸ್ ಅದನ್ನೆಲ್ಲ ವಿವರಿಸಿದ್ದರೂ ನನಗೆ ಎಷ್ಟರ ಮಟ್ಟಿಗೆ ಅರ್ಥವಾಗುತ್ತಿತ್ತೋ ಗೊತ್ತಿಲ್ಲ. ಆತ ಓದು ಮುಗಿಸಲಾಗದೇ ಬೇಸರದಲ್ಲಿ ಹಿಂದಿರುಗಿದ್ದ ಎಂಬುದು ಮಾತ್ರ ನನಗೆ ಅರ್ಥವಾಗಿತ್ತು.

ಸೌದಿ ಅರೇಬಿಯಾಕ್ಕೆ ಬಂದಮೇಲೆ ನಾನು ಇರಾಣದ ರಾಜಕೀಯದ ಕುರಿತು ಹೆಚ್ಚಿನ ಮಾಹಿತಿ ಪಡೆಯಲಾರಂಭಿಸಿದೆ. ಅಬ್ಬಾಸ್ ಭಾರತದಲ್ಲಿ ಓದಲು ಬಂದಾಗ 'ಇಂಪೆರಿಯಲ್ ಸ್ಟೇಟ್ ಆಫ್ ಇರಾಣ'ದಲ್ಲಿ ಶಾ ಮೊಹಮ್ಮದ್ ರೆಜಾ ಪಹಲಾವಿ ರಾಜಾಡಳಿತ ನಡೆಸುತ್ತಿದ್ದ. ಸುಮಾರು 4 ದಶಕಗಳ ಆಡಳಿತ ನಡೆಸಿದ್ದ ಆತ ಇರಾಣಿನ 'ಶಹನ್ಶಾ' (ರಾಜರ ರಾಜ) ಎಂದೇ ಖ್ಯಾತನಾಗಿದ್ದ. ರಾಜಮನೆತನದ ಆಡಳಿತದಲ್ಲಿ ಆತನೇ ಕೊನೆಯವನೂ ಆಗಿಹೋದ. ಉದಾರ ಮನೋಭಾವ ಉಳ್ಳವನಾಗಿದ್ದ ಆತನಿಗೆ ಅಮೆರಿಕ ಮತ್ತು ಯುರೋಪ್ ದೇಶಗಳೊಂದಿಗೆ ನಿಕಟ ಸಂಬಂಧವಿತ್ತು. ಆತನ ಅವಧಿಯಲ್ಲಿ ಇರಾಣ ಸಾಕಷ್ಟು ಅಭಿವೃದ್ಧಿ ಕಂಡಿತ್ತು. 1960ರ ದಶಕದಲ್ಲಿ ಆತ 'ವೈಟ್ ರೆವಲ್ಯೂಷನ್' ಆರಂಭಿಸಿದ್ದ. ಸಾರಿಗೆ ಸಂಪರ್ಕ, ಕೃಷಿಯ ಅಭಿವೃದ್ಧಿಗಾಗಿ ಅಣೆಕಟ್ಟುಗಳ ನಿರ್ಮಾಣ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜು, ಕಾರ್ಖಾನೆಗಳು ಇತ್ಯಾದಿಗಳನ್ನು ಸ್ಥಾಪಿಸಿ, ತನ್ನ ದೇಶವೂ ಪಶ್ಚಿಮದ ದೇಶಗಳಂತೆಯೇ ಮುಂದುವರಿಯಬೇಕು ಎಂದು ಕನಸು ಕಂಡಿದ್ದ. ತನ್ನ ದೇಶದ ಜನ ವಿದೇಶಕ್ಕೆ ಹೋಗಿ ಓದಲಿ ಎಂದು ವಿದ್ಯಾರ್ಥಿವೇತನ ನೀಡಲು ಆರಂಭಿಸಿದ. ಹೆಣ್ಣು ಮಕ್ಕಳಿಗೂ ವಿದ್ಯಾಭ್ಯಾಸ, ವಾಹನ ಚಾಲನೆ, ಉಡುಗೆ-ತೊಡುಗೆ, ಹೆಣ್ಣು ಮಕ್ಕಳು ಒಬ್ಬೊಬ್ಬರೇ ಓಡಾಡುವುದು, ಗಂಡು-ಹೆಣ್ಣು ಒಟ್ಟಿಗೇ ಓದುವುದು, ಸಭೆ-ಸಮಾರಂಭಗಳಲ್ಲಿ, ಹೋಟೆಲುಗಳಲ್ಲಿ ಒಟ್ಟಿಗೇ ಸೇರುವುದು, ಹೆಣ್ಣು ಮಕ್ಕಳು ಮದ್ಯಪಾನ ಮಾಡುವುದು, ಸಿಗರೇಟ್ ಸೇದುವುದು ಯಾವುದಕ್ಕೂ ನಿರ್ಬಂಧಗಳಿರಲಿಲ್ಲ. ಆತ ಅಧಿಕಾರ ಹಿಡಿಯುವಾಗಲೇ ದೇಶದಲ್ಲಿ ತೈಲನಿಕ್ಷೇಪ ದೊರೆತು 25 ವರ್ಷಗಳಾಗಿದ್ದರಿಂದ ಹಣದ ಕೊರತೆಯೂ ಇರಲಿಲ್ಲ.

ಪಹಲಾವಿಗೆ ಅಮೆರಿಕದೊಂದಿಗೆ ಒಳ್ಳೆಯ ಸ್ನೇಹವಿತ್ತು. ಆ ಕಾಲದಲ್ಲಿ ಅಮೆರಿಕಕ್ಕೆ ಉಳಿದ ಮಧ್ಯಪ್ರಾಚ್ಯ ದೇಶಗಳ ಪೈಕಿ ಇರಾಣ ಹೆಚ್ಚು ಆಪ್ತವಾಗಿತ್ತು. ಆದರೆ 1978ರ ವೇಳೆಗೆ ದೇಶದ ಒಳಗೆ ಪಹಲಾವಿ ಸರಕಾರದ ವಿರುದ್ಧ ಪ್ರತಿಭಟನೆಗಳು ಆರಂಭವಾದವು. ಅದಕ್ಕೆ ಕಾರಣ ನಿರುದ್ಯೋಗ ಸಮಸ್ಯೆಯಾಗಿತ್ತು. ದೇಶದಲ್ಲಿ ಒಮ್ಮೆಲೇ ಶಿಕ್ಷಣ ಸಂಸ್ಥೆಗಳು ಹೆಚ್ಚಾದ್ದರಿಂದ, ವಿದ್ಯಾರ್ಥಿಗಳು ವಿದೇಶಕ್ಕೆ ಹೋಗಿ ಓದಿಕೊಂಡು ಬಂದದ್ದರಿಂದ ಶಿಕ್ಷಿತರ ಸಂಖ್ಯೆ ಶೇ. 75ರಷ್ಟು ಹೆಚ್ಚಾಗಿತ್ತು. ಆದರೆ ಅವರಿಗೆ ದೇಶದಲ್ಲಿ ಅಷ್ಟು ಉದ್ಯೋಗವೇ ಇರಲಿಲ್ಲ. ಅವರೆಲ್ಲ ಪ್ರತಿಭಟನೆಗೆ ಇಳಿದಿದ್ದರು. ಅವರೊಂದಿಗೆ ಉದಾರತೆಯನ್ನು ಸಹಿಸಲಾಗದ ಇಸ್ಲಾಮ್ ಧರ್ಮಗುರುಗಳು, ತೀವ್ರಗಾಮಿಗಳು ಕೈಜೋಡಿಸಿದರು. ಇವರಿಗೆ ಪರದೆಯ ಹಿಂದಿನಿಂದ ಬ್ರಿಟನ್ ಸಹಾಯ ಮಾಡುತ್ತಿದ್ದುದರಿಂದ ಇದು ದಂಗೆಯಾಗಿ ಮಾರ್ಪಾಡಾಯಿತು. ಜನ ಖೊಮೇನಿಯನ್ನು ದೇವಮಾನವನಂತೆ ಕಾಣತೊಡಗಿದರು. ಆತ "ಪಹಲಾವಿ ಅಮೆರಿಕದ ಏಜೆಂಟ್, ಅಮೆರಿಕ ಇಸ್ಲಾಂ ವಿರೋಧಿ ದೇಶ' ಎನ್ನುವುದರೊಂದಿಗೆ ಅಮೆರಿಕವನ್ನು The Great Satan (ಮಹಾ ರಾಕ್ಷಸ) ಎಂದು ಕರೆದ. ಜನ ಅದನ್ನು ನಂಬಿದರು. ದಂಗೆ ತೀವ್ರವಾದಾಗ, ದಂಗೆಯನ್ನು ನಿಗ್ರಹಿಸಲು ಪಹಲಾವಿ ಅಮೆರಿಕದ ಸಹಕಾರ ಕೇಳಿದ. ಇರಾಣದಲ್ಲಿರುವ ಅಮೆರಿಕದ ಗುಪ್ತಚರರು ದಂಗೆ ತೀವ್ರವಾಗಿಲ್ಲವೆಂದೂ, ಇನೂ ಹತ್ತು ವರ್ಷ ಪಹಲಾವಿಯೇ ಆಡಳಿತ ನಡೆಸುತ್ತಾನೆಂದೂ ವರದಿ ನೀಡಿದ್ದರಿಂದ ಜಿಮ್ಮಿ ಕಾರ್ಟರ್ ನೇತೃತ್ವದ ಅಮೆರಿಕ ಸರಕಾರ ಅಷ್ಟೊಂದು ಆಸಕ್ತಿವಹಿಸಲಿಲ್ಲ, ಸಹಕರಿಸಲಿಲ್ಲ. ಆ ವೇಳೆಗಾಗಲೇ ಪಹಲಾವಿಗೆ ಕ್ಯಾನ್ಸರ್ ಆವರಿಸಿಕೊಂಡು 5 ವರ್ಷವಾಗಿತ್ತು. ಇನ್ನು ಒಂದು ವರ್ಷ ಮಾತ್ರ ಬದುಕಬಹುದು ಎಂದು ವೈದ್ಯರು ಹೇಳಿದ್ದರು. ಶಾ ಪಹಲಾವಿ ತನ್ನ ಹೆಂಡತಿ ಮಕ್ಕಳ ಸಮೇತ ಇರಾಣ ಬಿಟ್ಟು ಅಮೆರಿಕಕ್ಕೆ ಹೋದ. ಒಂದು ವರ್ಷದೊಳಗೆ ಪ್ರಾಣವನ್ನೂ ಬಿಟ್ಟ.

1979ರಲ್ಲಿ ರುಹೊಲ್ಲಾ ಖೊಮೇನಿ ನೇತೃತ್ವದಲ್ಲಿ 'ಇಸ್ಲಾಮಿಕ್ ರೆವಲ್ಯೂಷನ್' ಅಧಿಕಾರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿತು. ಖೊಮೇನಿ ಹೊಸ ಸಂವಿಧಾನ ರಚಿಸಿದ. ತನ್ನನ್ನು 'ಸರ್ವೋಚ್ಚ ನಾಯಕ' ಎಂದು ಕರೆದುಕೊಂಡ. ಜನ ಒಪ್ಪಿದರು. ಅಧಿಕಾರಕ್ಕೆ ಬರುತ್ತಿದ್ದಂತೆ ಆತನ ಸರಕಾರ ಟೆಹರಾನ್‌ನಲ್ಲಿರುವ ಅಮೆರಿಕದ ದೂತವಾಸದಲ್ಲಿದ್ದ 50 ಜನರನ್ನು ಬಂದಿಯಾಗಿಸಿತು. ಇದರಿಂದ ರೊಚ್ಚಿಗೆದ್ದ ಅಮೆರಿಕ ಮೊದಲ ಬಾರಿಗೆ ಇರಾಣದ ಮೇಲೆ ನಿರ್ಬಂಧ ಹೇರಿತು. ಆದರೆ ಖೊಮೇನಿ ಯಾವುದಕ್ಕೂ ತಲೆ ಕೆಡಿಸಿಕೊಳ್ಳಲಿಲ್ಲ. ಸಾಲದು ಎಂಬಂತೆ, ಆ ಪ್ರದೇಶಗಳಲ್ಲಿ ಹುಟ್ಟಿಕೊಂಡ ಹಿಜಬುಲ್ಲ, ಐಆರ್‌ಜಿಸಿ ಮುಂತಾದ ಮೂಲಭೂತವಾದಿ, ತೀವ್ರಗಾಮಿ ಸಂಘಟನೆಗಳಿಗೆ ಸರಕಾರ ಸಹಾಯ ಮಾಡತೊಡಗಿತು. ಇದರಿಂದಾಗಿ ಮಧ್ಯಪ್ರಾಚ್ಯದ ಮುಸ್ಲಿಂ ದೇಶಗಳಲ್ಲೇ ಅಶಾಂತಿ ಹರಡುವಂತಾಯಿತು. ಅಧಿಕಾರ ಹಿಡಿದು ಒಂದು ವರ್ಷವಾಗುತ್ತಿದ್ದಂತೆ ಪಕ್ಕದ ಇರಾಕ್ ದೇಶದೊಂದಿಗೆ ಯುದ್ಧಕ್ಕೆ ಇಳಿದ. 1989ರಲ್ಲಿ ಖೊಮೇನಿ ಹೃದಯಾಘಾತದಿಂದ ತೀರಿಹೋದ. ಕೆಲವು ವರ್ಷ ಅವನ ಮಗ, ಈಗ ಅವನ ಮೊಮ್ಮಗ ಅಲಿ ಖೊಮೇನಿ ಇರಾಣದಲ್ಲಿ ಅಧಿಕಾರ ನಡೆಸುತ್ತಿದ್ದಾರೆ.

ಇರಾಣದಲ್ಲಿ ಶರಿಯಾ ಕಾನೂನು ಜಾರಿಗೆ ಬಂದದ್ದರಿಂದ ಸಾರ್ವಜನಿಕ ಸ್ಥಳಗಳಲ್ಲಿ, ಸಾರಿಗೆ ಸಂಚಾರಗಳಲ್ಲಿ, ಹೋಟೆಲುಗಳಲ್ಲಿಯೂ ಪುರುಷರು ಮತ್ತು ಮಹಿಳೆಯರಿಗೆ ಬೇರೆ ಬೇರೆ ಸ್ಥಳ ನಿಗದಿಯಾಯಿತು. ಜನರ ಮೇಲೆ ನಿಗಾ ಇಡಲು ಅಲ್ಲಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಯಿತು. ಮಾರಲ್ ಪೊಲೀಸರ ಪಡೆ ತಯಾರಾಯಿತು. ಕಾನೂನು ಮೀರಿ ನಡೆದವರು ಕಠಿಣ ಶಿಕ್ಷೆಗೆ ಗುರಿಯಾಗಬೇಕಾಯಿತು. ನಾಲ್ಕೂವರೆ ದಶಕಗಳವರೆಗೆ ಉದಾರವಾಗಿದ್ದ ದೇಶ ಇದ್ದಕ್ಕಿದ್ದಂತೆ ಈ ರೀತಿ ನಿರ್ಬಂಧಕ್ಕೊಳಗಾಗುವುದನ್ನು ಅಲ್ಲಿಯ ಜನ ಸಹಿಸದಾದರು. ಪರಿಣಾಮವಾಗಿ, ದೇಶದಾದ್ಯಂತ 50,000ಕ್ಕೂ ಹೆಚ್ಚು ಮಸೀದಿಗಳು ಮುಚ್ಚಲ್ಪಟ್ಟಿವೆ, ಮದರಸಾಗಳು ಕಡಿಮೆಯಾಗುತ್ತಿವೆ.

ಕಳೆದ ಕೆಲವು ವರ್ಷಗಳಿಂದ ಇರಾಣದಲ್ಲಿ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಅತಿ ಎನಿಸುವ ಕಾನೂನಿಗೆ ಪ್ರತಿಭಟನೆಯ ರೂಪದಲ್ಲಿ ಮಹಿಳೆಯರು ಹಿಜಾಬ್ ಕಿತ್ತೆಸೆಯುವುದು, ಬುರ್ಖಾ ಸುಡುವುದು, ಕೂದಲು ಕತ್ತರಿಸಿಕೊಳ್ಳುವುದು, ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವ ಮೌಲ್ವಿಗಳ ಪೇಟ ಕೆಡಹುವುದು ಇತ್ಯಾದಿಗಳು ಆಗಾಗ ನಡೆಯುತ್ತಿವೆ. ಹಣದುಬ್ಬರ, ನಿರುದ್ಯೋಗ, ಭ್ರಷ್ಟಾಚಾರ ಮಿತಿಮೀರಿದೆ. ವ್ಯಾಪಾರಸ್ಥರು ಧಾನ್ಯವನ್ನು ಬೀದಿಗೆ ತಂದು ಸುರಿಯುತ್ತಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳೂ ಪ್ರತಿಭಟನೆಯಲ್ಲಿ ಶಾಮೀಲಾಗಿದ್ದಾರೆ. ಇರಾಣದ ಜನ ಸದ್ಯದ ಪರಿಸ್ಥಿತಿಯಲ್ಲಿ ಹೈರಾಣಾಗಿದ್ದಾರೆ..

ಈಗ ಇರಾಣದಿಂದ ಬರುತ್ತಿರುವ ಸುದ್ದಿ ನಿಜವಾದರೆ, ದೇಶದಲ್ಲಿರುವ ಮೂವತ್ತೊಂದೂ ಪ್ರಾಂತ್ಯದ 180ಕ್ಕೂ ಹೆಚ್ಚು ನಗರ, ಪಟ್ಟಣಗಳಲ್ಲಿ ಜನ ದಂಗೆ ಎದ್ದು ಬೀದಿಗೆ ಇಳಿದಿದ್ದಾರೆ. ರಾಜಧಾನಿ ಟೆಹರಾನ್‌ನಲ್ಲಿಯೇ 30ಕ್ಕೂ ಹೆಚ್ಚು ಸ್ಥಳಗಳಲ್ಲಿ ಪೊಲೀಸ್ ಮತ್ತು ಪ್ರದರ್ಶನಕಾರರು ಮುಖಾಮುಖಿಯಾಗುತ್ತಿದ್ದಾರೆ. ಸರ್ವೋಚ್ಚ ನಾಯಕ ಖೊಮೇನಿಯ ಹುಟ್ಟೂರಾದ ಮಶಾದ್‌ನಲ್ಲಿಯೂ ಹೆಚ್ಚಿನ ಪ್ರತಿಭಟನೆ ನಡೆಯುತ್ತಿದ್ದು, ಜನ ಆತನ ಪ್ರತಿಕೃತಿ, ಬ್ಯಾನರ್‌ಗಳಿಗೆ ಬೆಂಕಿ ಹಚ್ಚುತ್ತಿದ್ದಾರೆ. ವರದಿ ನಿಜವಾದರೆ, 200ಕ್ಕೂ ಹೆಚ್ಚು ಪ್ರತಿಭಟನಾಕಾರರು ಪೊಲೀಸರ ಗುಂಡಿಗೆ ಬಲಿಯಾಗಿದ್ದಾರೆ. ಇವರನ್ನೆಲ್ಲ ನಿಯಂತ್ರಿಸುವುದಕ್ಕಾಗಿ ಸರಕಾರ ಇಂಟರ್ನೆಟ್ ಅನ್ನು ಸ್ತಬ್ಧಗೊಳಿಸಿದೆ. ಮೊಬೈಲ್ ನೆಟ್‌ವರ್ಕ್, ಸಾಮಾಜಿಕ ಜಾಲತಾಣ, ಲೈವ್ ವಿಡಿಯೋ, ಗ್ರೌಂಡ್ ಫೂಟೇಜ್ ಎಲ್ಲವೂ ನಿಂತುಹೋಗಿವೆ. ಆದರೂ ಜನರ ವಿರೋಧ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಪ್ರತಿಭಟನಾಕಾರರು ಸರಕಾರಿ ಕಟ್ಟಡಗಳು, ವಾಹನಗಳು, ಖಾಸಗಿ ಬ್ಯಾಂಕ್‌ಗಳಿಗೆ ಬೆಂಕಿ ಇಡುತ್ತಿದ್ದಾರೆ ಎಂಬ ಸುದ್ದಿ ಬರುತ್ತಿದೆ. ಪ್ರತಿಭಟನಾಕಾರರ ಮೇಲೆ ಉಗ್ರಕ್ರಮ ಕೈಗೊಳ್ಳುವುದಾಗಿ ಖೊಮೇನಿ ಹೇಳಿದರೆ, ಅವರ ಮೇಲೆ ಗುಂಡು ಹಾರಿಸಿದರೆ ಇರಾನ್ ಮೇಲೆ ಕ್ರಮ ಜರುಗಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ್ದಾರೆ. ಈ ನಡುವೆ ಖೊಮೇನಿಯೇ ದೇಶ ಬಿಟ್ಟು ರಷ್ಯಾಕ್ಕೆ ಹೋಗುವ ತಯಾರಿ ನಡೆಸಿದ್ದಾರೆ ಎಂಬ ವದಂತಿ ಇದೆ. ಈಗಾಗಲೇ 12 ವಿಮಾನದಲ್ಲಿ ತಮ್ಮ ವಸ್ತುಗಳೊಂದಿಗೆ ಹಣ, ಬಂಗಾರವನ್ನೆಲ್ಲ ರಷ್ಯಾಕ್ಕೆ ದಾಟಿಸಿದ್ದಾರೆ ಎಂಬ ವದಂತಿಗಳೂ ಕೇಳಿಬರುತ್ತಿವೆ. ಮಾಧ್ಯಮಗಳಲ್ಲಂತೂ, ಇನ್ನು ಕೆಲವೇ ಗಂಟೆಗಳಲ್ಲಿ ಇರಾಣದಲ್ಲಿ ಹೊಸ ಸರಕಾರ ಬರುತ್ತದೆ ಎಂಬಂತೆ ಹೇಳಲಾಗುತ್ತಿದೆ. ಅಮೆರಿಕದಲ್ಲಿ ವಾಸವಾಗಿರುವ ಶಾ ಮೊಹಮ್ಮದ್ ಪಹಲಾವಿಯ ಮಗ ರೆಜಾ ಪಹಲಾವಿಯಿಂದ ಹಿಡಿದು, ಇರಾಣದ ವಿರೋಧಪಕ್ಷವಾದ ನ್ಯಾಷನಲ್ ಕೌನ್ಸಿಲ್ ಆಫ್ ರೆಸಿಸ್ಟನ್ಸ್ ಆಫ್ ಇರಾನ್ ಪಕ್ಷದ ನಾಯಕಿ ಮರಿಯಮ್ ರಜಾವಿಯವರೆಗೆ ಸರಕಾರ ಬದಲಾಗುವವರೆಗೂ ಹೋರಾಟ ನಿಲ್ಲಿಸದಂತೆ ಕರೆಕೊಡುತ್ತಿದ್ದಾರೆ. ಇರಾಣದ ಜನ ಅವರನ್ನು ಬೆಂಬಲಿಸುವುದರೊಂದಿಗೆ, 'ಸರ್ವಾಧಿಕಾರಿಗೆ ಮರಣದಂಡನೆ' ಎಂದು ಕೂಗುತ್ತಿದ್ದಾರೆ. ಭಾರತದ ಟಿವಿ ಚಾನೆಲ್‌ಗಳು, ಯುಟ್ಯೂಬರ್‌ಗಳು ಇರಾಣದಲ್ಲಿ ಸರಕಾರ ಬದಲಾದರೆ ಭಾರತಕ್ಕೆ ಆಗುವ ಲಾಭ-ನಷ್ಟದ ಲೆಕ್ಕ ಹಾಕುತ್ತಿದ್ದಾರೆ.

ಹಾಗಾದರೆ ಈ ಬಾರಿ ಇರಾಣದಲ್ಲಿ ಸರಕಾರ ಬದಲಾಗುತ್ತದೆಯೇ? ಕಾಲಚಕ್ರ ತಿರುಗುತ್ತಿದೆಯೇ? ಅದರ ಕುರಿತು ಈಗ ಹೇಳುವುದು ಕಷ್ಟ. ಏಕೆಂದರೆ ಮಾಧ್ಯಮದಲ್ಲಿ ಬರುತ್ತಿರುವ ಸುದ್ದಿಗಳಲ್ಲಿ ಎಷ್ಟು ನಂಬಬೇಕು, ಬಿಡಬೇಕು ಗೊತ್ತಿಲ್ಲ. ಅಲ್ಲದೆ, ಖೊಮೇನಿ ಸರಕಾರ ದಂಗೆಯನ್ನು ಹತ್ತಿಕ್ಕಲು ಇದುವರೆಗೆ ಸೇನೆಯನ್ನು ಬಳಸಲಿಲ್ಲ. ಒಮ್ಮೆ ಸೇನೆ ಬೀದಿಗೆ ಇಳಿದರೆ ಪರಿಣಾಮ ಏನಾಗುತ್ತದೆ ಎಂದು ಹೇಳುವುದು ಕಷ್ಟ. ಒಂದು ಕಡೆ ಇರಾಣದಲ್ಲಿ 'ರೆಸಿಸ್ಟನ್ಸ್ ಯುನಿಟ್'ಗಳು ಸಾಕಷ್ಟು ಕಡೆ ಹರಡಿಕೊಂಡಿವೆ. ಒಂದೊಂದು ಯುನಿಟ್‌ನಲ್ಲೂ ಸಾವಿರಾರು ಜನರಿದ್ದಾರೆ. ಅವರನ್ನೆಲ್ಲ ತಡೆಹಿಡಿಯುವುದು ಕಷ್ಟವಾಗಬಹುದು. ಇನ್ನೊಂದು ಕಡೆ ಅಮೆರಿಕದ ನಡೆಯ ಕಡೆಗೂ ಲಕ್ಷ್ಯ ಕೊಡಬೇಕು. ಸದ್ಯ ಯಾವುದೇ ಕೊಲ್ಲಿ ರಾಷ್ಟ್ರಗಳಾಗಲಿ, ಉಳಿದ ಮುಸ್ಲಿಂ ದೇಶವಾಗಲಿ, ಇರಾಣಿನ ಬೆಂಬಲಕ್ಕೆ ಬರುತ್ತಿಲ್ಲ, ಇದರಿಂದ ಸರಕಾರವೂ ಹೈರಾಣಾಗಿದೆ.

ಇವುಗಳ ನಡುವೆ ಅಬ್ಬಾಸ್ ಎಲ್ಲಿದ್ದಾನೋ, ಹೇಗಿದ್ದಾನೋ?

ತನ್ನಿಮಿತ್ತ

ರವಿ ಕಂಗಳ

ಸರ್ವಧರ್ಮ ಸಮನ್ವಯ ಸೂತ್ರಧಾರ ವಿವೇಕಾನಂದರು

ಈ ಜಗತ್ತು ಕಂಡ ಶ್ರೇಷ್ಠ ವೀರಸನ್ಯಾಸಿ ಸ್ವಾಮಿ ವಿವೇಕಾನಂದರು. ಸರ್ವಧರ್ಮ ಸಮನ್ವಯದ ಸೂತ್ರ ಪಠಿಸಿ, ಹಿಂದೂ ಧರ್ಮ ಮತ್ತು ಭಾರತೀಯ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯ ಮಾಡಿಕೊಟ್ಟ ಇವರು, ಪ್ರತಿಯೊಬ್ಬರಲ್ಲಿ ಅಡಗಿದ್ದ ಆತ್ಮವಿಶ್ವಾಸವನ್ನು ಬಡಿದೆಬ್ಬಿಸಿ ಧೀಶಕ್ತಿಯನ್ನು ಜಾಗೃತಗೊಳಿಸಿದವರು. ಚೈತನ್ಯದ ಬುಗ್ಗೆಯಾಗಿ ಲೋಕಸಂಚಾರ ಮಾಡುತ್ತಾ, ಯುವಜನರ ಕಣ್ಮಣಿಯಾಗಿ, ಸ್ಫೂರ್ತಿಯ ಸೆಲೆಯಾಗಿ ಆದರ್ಶ ಜೀವನದ ರಹದಾರಿಯನ್ನು ನಿರ್ಮಿಸಿದವರು.

"ಹೇಡಿಗಳು, ಬಲಹೀನರು ಮಾತ್ರವೇ ಪಾಪಗಳನ್ನು ಮಾಡುತ್ತಾರೆ, ಸುಳ್ಳು ಹೇಳುತ್ತಾರೆ; ಆದರೆ ಧೀರರು ಯಾವಾಗಲೂ ನೀತಿವಂತರಾಗಿರುತ್ತಾರೆ. ಹೀಗಾಗಿ ಧೀರರಾಗಿ, ನೀತಿವಂತರಾಗಿ, ಸಹಾನುಭೂತಿಯುಳ್ಳವರಾಗಿ" ಎಂದು ಕರೆನೀಡಿದ ವಿವೇಕಾನಂದರು 1883ರ ಸೆಪ್ಟೆಂಬರ್‌ನಲ್ಲಿ ಅಮೆರಿಕದ ಶಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಮಾಡಿದ ಭಾಷಣವು ಇಡೀ ವಿಶ್ವಕ್ಕೆ ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಪರಿಚಯಿಸಿತು. 'East is East, West is West; they will never meet' ಎನ್ನುತ್ತಿದ್ದ ಸಂಕುಚಿತ ಮನಸ್ಸುಗಳಿಗೆ ವಿವೇಕಾನಂದರ ಈ ಭಾಷಣವು ಚಿಕಿತ್ಸೆ ನೀಡಿ, ವಿಶ್ವಭ್ರಾತೃತ್ವದ ಭಾವವನ್ನು ಬೆಸೆಯಿತು.

ವಿದೇಶಿಯೊಬ್ಬ ರವೀಂದ್ರನಾಥ ಟ್ಯಾಗೋರರನ್ನು ಒಮ್ಮೆ ಭೇಟಿಯಾಗಿ, "ಭಾರತದ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಯಾರನ್ನು ಸಂದರ್ಶಿಸಿದರೆ ಸಂಪೂರ್ಣ ಮಾಹಿತಿ ದಕ್ಕುತ್ತದೆ?" ಎಂದು ಕೇಳಿದಾಗ, "If you want know India, you will have to meet and study Swamy Vivekananda" ಎಂದು ಅವರು ಉತ್ತರಿಸಿದರಂತೆ. ಈ ಮಾತು ಅಕ್ಷರಶಃ ನಿಜ. ಭಾರತದ ಸಂಸ್ಕೃತಿಯನ್ನು ತಮ್ಮ ದೇಹದ ಕಣಕಣದಲ್ಲೂ ಮೈಗೂಡಿಸಿಕೊಂಡು ತಮ್ಮ 'ವಿವೇಕವಾಣಿ'ಯ ಮೂಲಕ ಲೋಕಕ್ಕೆಲ್ಲಾ ಪ್ರಚುರಪಡಿಸಿದವರು ವಿವೇಕಾನಂದರು. ಕರ್ಮರಹಸ್ಯ, ರಾಜಯೋಗ, ಭಕ್ತಿಯೋಗ, ಜ್ಞಾನಯೋಗ, ಧ್ಯಾನಸಮಾಧಿ, ಮನಃಶಕ್ತಿಗಳ ಕುರಿತಾಗಿ ಅದ್ಭುತ ವಿಚಾರಧಾರೆಗಳನ್ನು ಮಂಡಿಸುತ್ತ, ಧರ್ಮ ಮತ್ತು ಆತ್ಮಸಾಕ್ಷಾತ್ಕಾರದ ಅವಶ್ಯಕತೆಯ ಕುರಿತು ಮನಮುಟ್ಟುವ ರೀತಿಯಲ್ಲಿ ವಿಶ್ವದೆಲ್ಲೆಡೆ ಉಪನ್ಯಾಸ ನೀಡಿದವರು ವಿವೇಕಾನಂದರು.

ಶ್ರೀ ರಾಮಕೃಷ್ಣ ಪರಮಹಂಸರ ಕೃಪಾಕಟಾಕ್ಷಕ್ಕೆ ಪಾತ್ರರಾಗಿದ್ದ ವಿವೇಕಾನಂದರು ಅವರ ಬೋಧನೆಯಿಂದ ಪಡೆದ ಶಕ್ತಿಯಿಂದಾಗಿ ದೇವರ ಇರುವಿಕೆಯ ಕುರಿತಾಗಿ ಸಮರ್ಥವಾಗಿ ವ್ಯಾಖ್ಯಾನಿಸುತ್ತಿದ್ದರು. ದೇವರ ಬಗೆಗಿನ ನಂಬಿಕೆ ಎಲ್ಲಿಯವರೆಗೆ ಇರುತ್ತದೆ ಎಂದು ಒಮ್ಮೆ ಕೇಳಿದ್ದಕ್ಕೆ, "ಸಿದ್ಧಾಂತ ಹೇಗಾದರೂ ಇರಲಿ, ತತ್ವ ಯಾವ ರೀತಿಯಲ್ಲಿ ಬೇಕಾದರೂ ಇರಲಿ, ಎಲ್ಲಿಯವರೆಗೆ ಈ ಪ್ರಪಂಚದಲ್ಲಿ ಸಾವು ಎಂಬುದು ಇದೆಯೋ, ಮಾನವನ ಹೃದಯದಲ್ಲಿ ದುರ್ಬಲತೆ ಎಂಬುದು ಇದೆಯೋ, ಎಲ್ಲಿಯವರೆಗೆ ಮಾನವನ ಹೃದಯಾಂತರಾಳದಿಂದ ಒಂದು ಪ್ರಾರ್ಥನೆ ಬರುವುದೋ, ಅಲ್ಲಿಯವರೆಗೂ ದೇವರಲ್ಲಿ ನಂಬಿಕೆ ಇದ್ದೇ ಇರುವುದು" ಎಂದು ಉತ್ತರಿಸಿದ್ದರು ವಿವೇಕಾನಂದರು.

"ಯಾವುದಾದರೂ ಒಂದು ಧರ್ಮದ ಜಯದಿಂದ ಅಥವಾ ಉಳಿದ ಧರ್ಮಗಳ ನಾಶದಿಂದ ಧಾರ್ಮಿಕ ಏಕತೆ ಸಾಕಾರಗೊಳ್ಳುತ್ತದೆ ಎಂದು ಯಾರಾದರೂ ಆಶಿಸಿದರೆ ಅದು ಅಸಾಧ್ಯ ಬಯಕೆ. ಬೀಜವನ್ನು ನೆಲದಲ್ಲಿ ಬಿತ್ತಿ ಆಗಿದೆ. ಅದರ ಸುತ್ತಲೂ ಮಣ್ಣು-ನೀರು-ಗಾಳಿ ಇವೆ. ಬೀಜ ಮಣ್ಣಾಗುವುದೇ? ನೀರಾಗುವುದೇ? ಗಾಳಿಯಾಗುವುದೇ? ಇಲ್ಲ ಅದೊಂದು ಸಸಿಯಾಗುವುದು ಹೌದು ತಾನೆ.... ಅದು ತನ್ನ ಬೆಳವಣಿಗೆಯ ನಿಯಮವನ್ನು ಅನುಸರಿಸಿ ಬೆಳೆಯುತ್ತದೆ, ಅದಕ್ಕಾಗಿ ಗಾಳಿ ಮತ್ತು ನೀರನ್ನು ಅದು ಜೀರ್ಣಿಸಿಕೊಳ್ಳುತ್ತದೆ. ಧರ್ಮವೂ ಹೀಗೆಯೇ. ಒಬ್ಬ ಕ್ರೈಸ್ತನು ಹಿಂದೂ ಅಥವಾ ಬೌದ್ಧನಾಗಬೇಕಿಲ್ಲ. ಪ್ರತಿಯೊಬ್ಬರು ಕೂಡ ತಮ್ಮ ವ್ಯಕ್ತಿತ್ವವನ್ನು ನಾಶಮಾಡಿಕೊಳ್ಳದೆ, ಮತ್ತೊಬ್ಬರ ಭಾವವನ್ನು ಹೀರಿಕೊಂಡು, ತಮ್ಮ ಬೆಳವಣಿಗೆಯ ನಿಯಮದಂತೆ ಬೆಳೆಯಬೇಕು" ಎನ್ನುತ್ತಿದ್ದ ವಿವೇಕಾನಂದರು, ಜನರು ತಂತಮ್ಮ ಧರ್ಮವನ್ನು ಪ್ರೀತಿಸುವಂತೆ ಕರೆನೀಡಿ, ಸರ್ವಧರ್ಮ ಸಹಿಷ್ಣುತೆಯ ಬೀಜವನ್ನು ಅಂಕುರಿಸಿದರು ಮತ್ತು ಮಾನವನಲ್ಲಿ ಈಗಾಗಲೇ ಅಡಗಿರುವ ದೈವತ್ವವನ್ನು ಪ್ರಕಾಶಪಡಿಸುವುದೇ ಧರ್ಮವೆಂದು ಜಗತ್ತಿಗೆ ತೋರ್ಪಡಿಸಿಕೊಟ್ಟರು.

"ಮೂರು ಸಾಗರ, ನೂರು ಮಂದಿರ, ಸಾವಿರ ದೈವವಿದ್ದರೇನು? ಗಂಗೆಯಿದ್ದರೇನು? ಸಿಂಧುವಿದ್ದರೇನು? ಗಿರಿಹಿಮಾಲಯವಿದ್ದರೇನು? ವೇದವಿದ್ದರೇನು? ಭೂಮಿಯಿದ್ದರೇನು? ಘನ ಪರಂಪರೆಯಿದ್ದರೇನು- ಸಾರ್ಥಕ ದೇಶದ ಯುವಕರೇ ಮಲಗಿ ನಿದ್ರಿಸುತ್ತಿದ್ದರೆ!" ಎಂದು ಚುಚ್ಚುಮದ್ದು ನೀಡುವ ಮೂಲಕ, ಬದುಕಿದ್ದೂ ಸತ್ತಂತಿರುವ ಯುವಶಕ್ತಿಯನ್ನು ಬಡಿದೆಬ್ಬಿಸಿ, "ಏಳಿ, ಎದ್ದೇಳಿ.... ಗುರಿಮುಟ್ಟುವ ತನಕ ನಿಲ್ಲದಿರಿ. ನಿಮ್ಮಲ್ಲಿರುವ ಶಕ್ತಿಯನ್ನು ಒಂದುಗೂಡಿಸಿ ಕಾರ್ಯೋನ್ಮುಖರಾಗಿ. ಈ ಜೀವನವಾದರೂ ಎಷ್ಟು ದಿನ? ನೀವು ಈ ಜಗತ್ತಿಗೆ ಬಂದ ಮೇಲೆ ಏನನ್ನಾದರೂ ಸಾಧಿಸಿ, ಈ ಭೂಮಿಯಲ್ಲಿ ನಿಮ್ಮ ಗೆಲುವಿನ ಹೆಜ್ಜೆಗುರುತುಗಳನ್ನು ಬಿಟ್ಟುಹೋಗಿ. ಇಲ್ಲದಿದ್ದರೆ ನಿಮಗೂ, ನಿರ್ಜೀವ ವಸ್ತುಗಳಿಗೂ ಏನು ವ್ಯತ್ಯಾಸ?!" ಎಂದು ಹೇಳುತ್ತಾರೆ. ಸತ್ಯನಿಷ್ಠೆ, ಪವಿತ್ರತೆ ಮತ್ತು ನಿಸ್ವಾರ್ಥತೆ ಎಂಬ ಮೂರು ಗುಣ-ವೈಶಿಷ್ಟ್ಯಗಳು ಇರುವವರನ್ನು ಈ ಜಗತ್ತಿನ ಯಾವ ಶಕ್ತಿಯೂ ನಿಗ್ರಹಿಸಲು ಸಾಧ್ಯವಿಲ್ಲ; ಇವುಗಳಿಂದ ಸಂಪನ್ನನಾದವನು ಇಡೀ ಜಗತ್ತಿನ ವಿರೋಧವನ್ನೇ ಎದುರಿಸಿ ಗೆಲ್ಲಬಲ್ಲ ಎಂದು ಹೇಳುವ ಮೂಲಕ, ನಮ್ಮ ಆತ್ಮಬಲವನ್ನು ಸಮರ್ಥವಾಗಿ ಬಳಸಿಕೊಳ್ಳಲು ವಿವೇಕಾನಂದರು ಕರೆ ನೀಡುತ್ತಾರೆ. ಸ್ವಾಮಿ ವಿವೇಕಾನಂದರ ಅಂಥ ಮತ್ತಷ್ಟು ಸ್ಫೂರ್ತಿಕಿಡಿಗಳು ಹೀಗಿವೆ:

- ಈ ಜಗತ್ತಿನಲ್ಲಿ ಪ್ರತಿಯೊಬ್ಬರೂ ಅದೆಷ್ಟೇ ಕಷ್ಟವಾದರೂ ತಮ್ಮ ಪಾಲಿನ ಕರ್ತವ್ಯಗಳನ್ನು ಮಾಡಲೇಬೇಕು. ಅದೇ ರೀತಿಯಲ್ಲಿ, ಮಾಡಬಾರದ ಪಾಪಕಾರ್ಯಗಳ ಕಡೆಗೆ ಕಣ್ಣೆತ್ತಿಯೂ ನೋಡಬಾರದು.
- ಕರ್ತವ್ಯವೆಂದರೆ ನಾವು ಇತರರಿಗೆ ಸಹಾಯ ಮಾಡುವುದು, ಜಗತ್ತಿಗೆ ಒಳ್ಳೆಯದನ್ನು ನೀಡುವುದು. ಯಾವುದು ಸ್ವಾರ್ಥದಿಂದ ಕೂಡಿದ ಕಾಯಕವಾಗಿರುತ್ತದೆಯೋ ಅದು ಅನೈತಿಕ, ಸ್ವಾರ್ಥಶೂನ್ಯವಾಗಿರುವಂಥದ್ದು ನೈತಿಕ.
- ಸಾಮಾನ್ಯವಾಗಿ ಜಗತ್ತಿನ ಪ್ರತಿಯೊಂದು ವಸ್ತು/ವಿಷಯವೂ ಒಳ್ಳೆಯದು ಮತ್ತು ಕೆಟ್ಟದ್ದರಿಂದ ಕೂಡಿರುತ್ತದೆ. ಬೆಂಕಿಯು ಸ್ವತಃ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ ಹೇಗೆಂದರೆ, ನಮಗೆ ಚಳಿಯಾದಾಗ ದೇಹಕ್ಕೆ ಬೆಚ್ಚಗಿನ ಅನುಭವ ಕೊಡುವ ಬೆಂಕಿಯನ್ನು 'ಒಳ್ಳೆಯದು' ಎನ್ನುತ್ತೇವೆ. ಒಂದೊಮ್ಮೆ ಅದೇ ಬೆಂಕಿಯು ನಮ್ಮ ಕೈಕಾಲುಗಳನ್ನು ಸುಟ್ಟರೆ ಅದನ್ನು 'ಕೆಟ್ಟದು' ಎನ್ನುತ್ತೇವೆ.
- ನಮಗೆ ದಾರಿಯಲ್ಲಿ ರಾಮ ಮತ್ತು ರಾವಣರ ಕಲ್ಲಿನ ವಿಗ್ರಹಗಳು ಸಿಕ್ಕರೆ, ರಾಮನ ವಿಗ್ರಹವನ್ನೇ ಎತ್ತಿಕೊಳ್ಳುತ್ತೇವೆ. ಏಕೆಂದರೆ ರಾಮನು ಧರ್ಮನಿಷ್ಠ, ಆದರ್ಶ ಗುಣಗಳ ಸಾಕಾರಮೂರ್ತಿ. ರಾವಣನೋ ಕ್ರೂರಿ, ಸೀತೆಯನ್ನು ಬಲವಂತವಾಗಿ ಎಳೆದೊಯ್ದ ನೀಚ. ಒಂದು ವೇಳೆ ರಾಮನ ವಿಗ್ರಹವು ಕಬ್ಬಿಣದ್ದೂ, ರಾವಣನ ವಿಗ್ರಹವು ಚಿನ್ನದ್ದೂ ಆಗಿದ್ದರೆ, ನಾವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೇವೆ? ಖಂಡಿತ, ನಿಮ್ಮ ಊಹೆ ಸರಿಯಾಗಿದೆ. ಅದು ರಾವಣನದ್ದು ಅಲ್ಲವೇ.... ಕಾರಣ, ಮೊದಲ ನಿದರ್ಶನದಲ್ಲಿ ನಾವು ವ್ಯಕ್ತಿತ್ವಕ್ಕೆ ಗೌರವ ನೀಡಿ ಆಯ್ಕೆಮಾಡಿದರೆ, ಎರಡನೆಯ ನಿದರ್ಶನದಲ್ಲಿ ವಸ್ತುವಿನ ಮೌಲ್ಯದ ಮೋಹಕ್ಕೆ ಒಳಗಾಗಿ, ಕೆಟ್ಟವನೆಂದು ಗೊತ್ತಿದ್ದರೂ ರಾವಣನ ವಿಗ್ರಹವನ್ನೇ ಆಯ್ಕೆಮಾಡಿಕೊಳ್ಳುತ್ತೇವೆ! ಹೀಗೆಯೇ ಪ್ರಪಂಚವೂ ಅವರವರ ಅನುಕೂಲಕ್ಕೆ ತಕ್ಕಂತೆ ಒಳ್ಳೆಯದಾಗಿಯೋ ಕೆಟ್ಟದ್ದಾಗಿಯೋ ಕಾಣುತ್ತದೆ.
- ಜಗತ್ತನ್ನು ಸರಿಪಡಿಸಲು ಹೋಗುವ ಮೊದಲು, ನಮ್ಮನ್ನು ನಾವು ಪರಿವರ್ತಿಸಿಕೊಂಡು ಈ ಸಮಾಜವು ಒಪ್ಪುವ ರೀತಿಯಲ್ಲಿ ನಡೆದಿದ್ದೇ ಆದಲ್ಲಿ, ಮೂರ್ಖರ ಸಂಖ್ಯೆಯಲ್ಲಿ ಒಬ್ಬ ಕಡಿಮೆಯಾದಂತೆ ಆಗುತ್ತದೆ. ಅಲ್ಲವೇ?!

ವಿವೇಕಾನಂದರ ಚಿಂತನೆಗಳು ಮತ್ತು ಒಂದೊಂದು ನುಡಿಮುತ್ತುಗಳು ಕೂಡ ಯುವಜನರ ಪಾಲಿನ ಬದುಕಿನ ತುತ್ತುಗಳು ಹಾಗೂ ಒಟ್ಟಾರೆಯಾಗಿ ಭಾರತೀಯ ಸಂಸ್ಕೃತಿಯ ಸೊತ್ತುಗಳು. ಅವರ ಜನ್ಮದಿನವಾದ ಜನವರಿ 12ನ್ನು ರಾಷ್ಟ್ರೀಯ ಯುವದಿನವಾಗಿ ಆಚರಿಸಲಾಗುತ್ತದೆ. ಈ ಶುಭಸಂದರ್ಭದಲ್ಲಿ ಅವರ ದಿವ್ಯಸಂದೇಶಗಳನ್ನು ಅಳವಡಿಸಿಕೊಂಡು, ಭಾರತದ ಭವ್ಯ ಸಂಸ್ಕೃತಿಯನ್ನು ಉಳಿಸಿ-ಬೆಳೆಸಿ, ಬಲಿಷ್ಠ ಭಾರತವನ್ನು ನಿರ್ಮಾಣ ಮಾಡುವಲ್ಲಿ ಅಳಿಲುಸೇವೆ ಸಲ್ಲಿಸೋಣ. ಮೌಲ್ಯಯುತ ಜೀವನವನ್ನು ಕಟ್ಟಿಕೊಂಡು ಸಂತೃಪ್ತಭಾವದಿಂದ ಜೀವಿಸೋಣ.

(ಲೇಖಕರು ಶಿಕ್ಷಕರು)

ತಾಳಮದ್ದಳೆ: ಕಲೆ ಮತ್ತು ಕಾಲಧರ್ಮದ ಸಂಘರ್ಷ

ಪೂರ್ವರಂಗದ ಶಿಸ್ತು, ಪ್ರಸಂಗದ ಆಶಯ ಮತ್ತು ಕಾವ್ಯದ ಸೌಂದರ್ಯವನ್ನು ಗೌಣವಾಗಿಸಿ, ಕೇವಲ ತಾರ್ಕಿಕ ಜಗಳಗಳನ್ನು ಅಥವಾ ಅಪ್ರಸ್ತುತ ರಾಜಕೀಯ-ಸಾಮಾಜಿಕ ವಿಷಯಗಳನ್ನು ತಾಳಮದ್ದಳೆಯ ವೇದಿಕೆಗೆ ಎಳೆದು ತರುವುದು ರಸಭಂಗಕ್ಕೆ ದಾರಿಯಾಗುತ್ತದೆ. ಕಲೆ ಎನ್ನುವುದು ಲೋಕಧರ್ಮಿಯಿಂದ ನಾಟ್ಯಧರ್ಮಿಯೆಡೆಗೆ ಸಾಗಬೇಕು.



ತಾಳ-ಮೇಳ

ಸಂದೀಪ್ ಶರ್ಮಾ ಮೂಟೇರಿ
vveditoped@gmail.com

ಭಾರತೀಯ ಕಲಾಮೀಮಾಂಸೆಯಲ್ಲಿ 'ಕಲೆ' ಎಂಬುದು ಕೇವಲ ಮನೋರಂಜನೆಯ ಲಘು ಸಾಧನವಲ್ಲ; ಅದೊಂದು ತಪಸ್ಸು, ಪರಂಪರೆಯ ವಾಹಿನಿ ಮತ್ತು ಲೋಕವೃತ್ತದ ಅನುಕರಣೆ. ಅದರಲ್ಲೂ ಕರಾವಳಿ ಕರ್ನಾಟಕದ ಅಸ್ಮಿತೆಯಾದ ಯಕ್ಷಗಾನ ಮತ್ತು ಅದರ ವಾಚಿಕ ರೂಪವಾದ ತಾಳಮದ್ದಳೆ ಕೇವಲ ಪ್ರದರ್ಶಕ ಕಲೆಗಳಲ್ಲ, ಅವು ಶಬ್ದ ಮತ್ತು ಅರ್ಥಗಳ ಸಮಾಗಮದ ವಾಕ್-ತಪಸ್ಸು. ಕಲೆಯ ಪರಮೋದ್ದೇಶ ರಸಾನುಭೂತಿ. ಆದರೆ ಇಂದು ಕಾಲಧರ್ಮದ ಪ್ರಭಾವವೋ ಅಥವಾ ಮಾರುಕಟ್ಟೆಯ ಅನಿವಾರ್ಯತೆಯೋ, ಈ ಪವಿತ್ರ ಕಲೆ ವಾಣಿಜ್ಯೀಕರಣದ ಸುಳಿಗೆ ಸಿಲುಕಿ ತನ್ನ ಮೂಲಸತ್ವವನ್ನು ಬಲಿಕೊಡುತ್ತಿದೆಯೇ ಎಂಬ ಗಹನವಾದ ಜಿಜ್ಞಾಸೆ ಕಲಾಭಿಮಾನಿಗಳಲ್ಲಿ ಮೂಡಿದೆ.

ತಾಳಮದ್ದಳೆ ಎಂದರೆ ಅರ್ಥಧಾರಿಗಳ ಬೌದ್ಧಿಕ ಕಸರತ್ತು. ಅಲ್ಲಿ ವೇಷ-ಭೂಷಣಗಳಿಲ್ಲ, ಕೇವಲ ಶಬ್ದದ ಮೂಲಕ ರಸನಿಷ್ಪತ್ತಿ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಇಲ್ಲಿ ಕಲಾವಿದ ಕೇವಲ ಒಬ್ಬ ನಟನಲ್ಲ, ಅವನು ವ್ಯಾಕರಣ, ಭಾಮಹ-ದಂಡಿಗಳ ಅಲಂಕಾರ ಶಾಸ್ತ್ರ ಮತ್ತು ಪುರಾಣಗಳ ಮರ್ಮವನ್ನರಿತ ಪ್ರತಿಭಾವಂತನಾಗಿರಬೇಕು. ಆದರೆ ಇಂದಿನ ತಾಳಮದ್ದಳೆಗಳಲ್ಲಿ ಔಚಿತ್ಯಕ್ಕಿಂತ ಜನಪ್ರಿಯತೆಯೇ ಪ್ರಧಾನವಾಗುತ್ತಿದೆ. ಪಾತ್ರದ ಗಾಂಭೀರ್ಯವನ್ನು ಎತ್ತಿಹಿಡಿಯಬೇಕಾದ ಸಂಭಾಷಣೆಗಳು ಇಂದು ಕೇವಲ ಚಪ್ಪಾಳೆ ಗಿಟ್ಟಿಸುವ ಹಾಸ್ಯ ಅಥವಾ ಚತುರೋಕ್ತಿಗಳಿಗೆ ಸೀಮಿತವಾಗುತ್ತಿರುವುದು ಕಲಾತ್ಮಕವಾಗಿ ದೊಡ್ಡ ಕುಸಿತ.

ಪೂರ್ವರಂಗದ ಶಿಸ್ತು, ಪ್ರಸಂಗದ ಆಶಯ ಮತ್ತು ಕಾವ್ಯದ ಸೌಂದರ್ಯವನ್ನು ಗೌಣವಾಗಿಸಿ, ಕೇವಲ ತಾರ್ಕಿಕ ಜಗಳಗಳನ್ನು ಅಥವಾ ಅಪ್ರಸ್ತುತ ರಾಜಕೀಯ-ಸಾಮಾಜಿಕ ವಿಷಯಗಳನ್ನು ತಾಳಮದ್ದಳೆಯ ವೇದಿಕೆಗೆ ಎಳೆದು ತರುವುದು ರಸಭಂಗಕ್ಕೆ ದಾರಿಯಾಗುತ್ತದೆ. ಕಲೆ ಎನ್ನುವುದು ಲೋಕಧರ್ಮಿಯಿಂದ ನಾಟ್ಯಧರ್ಮಿಯೆಡೆಗೆ ಸಾಗಬೇಕು. ಆದರೆ ಇಂದು ಮಾರುಕಟ್ಟೆಯ ಅಬ್ಬರದಲ್ಲಿ ವಿರುದ್ಧವೇ ನಡೆಯುತ್ತಿದೆ; ಅಧ್ಯಾತ್ಮ ಮತ್ತು ಪುರಾಣಗಳ ಗಹನ ವಿಚಾರಗಳನ್ನು ಸವಕಲು ಹರಟೆಯ ಮಟ್ಟಕ್ಕೆ ಇಳಿಸಲಾಗುತ್ತಿದೆ. ಇದು ಕಲಾತ್ಮಕ ಅಧೋಗತಿಯಲ್ಲದೆ ಮತ್ತೇನು?

ಯಕ್ಷಗಾನದ ಇಂದಿನ ಸ್ಥಿತಿಯನ್ನು ಗಮನಿಸಿದರೆ, ಅಲ್ಲಿ ಕಲೆಗಿಂತ ಉದ್ಯಮದ ಲಕ್ಷಣಗಳೇ ಎದ್ದು ಕಾಣುತ್ತಿವೆ. ಮೇಳಗಳ ಸಂಖ್ಯೆ ಹೆಚ್ಚಾದಂತೆ ಗುಣಮಟ್ಟ ಕ್ಷೀಣಿಸುತ್ತಿದೆ. ಕಲಾ ಪ್ರದರ್ಶನಗಳು ಕೇವಲ ಇಡೀ ರಾತ್ರಿ ಮನೋರಂಜನೆಯ ಪ್ಯಾಕೇಜ್‌ಗಳಾಗುತ್ತಿವೆ. ಕಲಾವಿದನಿಗೆ ಸಿಗಬೇಕಾದ ಗೌರವಧನ ಮತ್ತು ಮನ್ನಣೆ ಮುಖ್ಯವೇ ಹೌದು, ಆದರೆ ಅದನ್ನು ಕಲೆಯ ಆಂತರಿಕ ಶುದ್ಧಿಯನ್ನು ಬಲಿಗೊಟ್ಟು ನೀಡುವಂತೆ/ಪಡೆಯುವಂತೆ ಆಗಬಾರದು. ವಾಣಿಜ್ಯೀಕರಣದ ಪ್ರಭಾವದಿಂದಾಗಿ ತಾರಾ ವರ್ಚಸ್ಸು ಯಕ್ಷಗಾನಕ್ಕೆ ಲಗ್ಗೆ ಇಟ್ಟಿದೆ. ಒಬ್ಬ ನಿರ್ದಿಷ್ಟ ಕಲಾವಿದ ಇದ್ದರೆ ಮಾತ್ರ ಪ್ರೇಕ್ಷಕರು ಬರುತ್ತಾರೆ ಎಂಬ ಸ್ಥಿತಿ ನಿರ್ಮಾಣವಾಗಿರುವುದು ಸಂಘಟಕರು ಮಾರುಕಟ್ಟೆಯ ತಂತ್ರಕ್ಕೆ ಶರಣಾಗಿರುವುದರ ದ್ಯೋತಕವಾಗಿದೆ.

ಇದರಿಂದಾಗಿ ಸಮಷ್ಟಿ ಕಲೆಯಾದ ಯಕ್ಷಗಾನವು ವೈಯಕ್ತಿಕ ಪ್ರದರ್ಶನದ ವೇದಿಕೆಯಾಗುತ್ತಿದೆ. ಹಳೆಯ ಕಾಲದ ಬೈಠಕ್ ಶೈಲಿಯ ತಾಳಮದ್ದಳೆಗಳಲ್ಲಿ ಇರುತ್ತಿದ್ದ ಆ ನಿಶ್ಶಬ್ದ ಏಕಾಗ್ರತೆ ಮತ್ತು ಭಕ್ತಿಯ ಪರಾಕಾಷ್ಠೆ ಇಂದು ಮೈಕ್ ಸೆಟ್‌ಗಳ ಅಬ್ಬರ ಮತ್ತು ಸಾಮಾಜಿಕ ಜಾಲತಾಣಗಳ ರೀಲ್ಸ್ ಸಂಸ್ಕೃತಿಯಲ್ಲಿ ಕಳೆದುಹೋಗುತ್ತಿದೆ. ಯುಟ್ಯೂಬ್ ಕ್ಲಿಪ್ಪಿಂಗ್‌ಗಳಿಗಾಗಿ ಅಬ್ಬರದ ಮಾತುಗಳನ್ನು ಆಡುವುದು ಕಲೆಯ ಧ್ವನಿಯನ್ನು ಕೊಲ್ಲುತ್ತಿದೆ.

ಇಂದಿನ ತಾಳಮದ್ದಳೆಗಳಲ್ಲಿ ವಾದ ಹೆಚ್ಚಾಗುತ್ತಿದೆ, ಆದರೆ ಸಂವಾದ ಮರೆಯಾಗುತ್ತಿದೆ. ಒಬ್ಬ ಅರ್ಥಧಾರಿ ತನ್ನ ಪಾತ್ರದ ಔಚಿತ್ಯವನ್ನು ಮೀರಿ ಇನ್ನೊಬ್ಬ ಕಲಾವಿದನನ್ನು ಬೌದ್ಧಿಕವಾಗಿ ಸೋಲಿಸಲು ಯತ್ನಿಸುವುದು ಕಲೆಗೆ ಮಾಡುವ ಅಪಚಾರ. ಮಹಾಕಾವ್ಯಗಳಾದ ರಾಮಾಯಣ-ಮಹಾಭಾರತಗಳು ನಮಗೆ ಕಲಿಸುವುದು ಮೌಲ್ಯಗಳನ್ನು, ಕೇವಲ ಕುತರ್ಕಗಳನ್ನಲ್ಲ. ಆದರೆ ವಾಣಿಜ್ಯೀಕರಣದ ಒತ್ತಡದಲ್ಲಿ ಕಲಾವಿದರು ಪ್ರೇಕ್ಷಕರ ಶಿಳ್ಳೆಗಾಗಿ ಪುರಾಣದ ಪಾತ್ರಗಳನ್ನು ಆಧುನಿಕ ನ್ಯಾಯಾಲಯದ ವಕೀಲರಂತೆ ಬಿಂಬಿಸುತ್ತಿದ್ದಾರೆ.

ಕಲೆಯು ಪ್ರೇಕ್ಷಕನನ್ನು ಸಂಸ್ಕಾರದ ಕಡೆಗೆ ಒಯ್ಯಬೇಕು. ಆದರೆ ಇಂದಿನ ಪ್ರವೃತ್ತಿಯು ಪ್ರೇಕ್ಷಕನನ್ನು ಕೇವಲ ಕ್ಷಣಿಕ ಮನೋರಂಜನೆಯಲ್ಲಿ ಬಂಧಿಸಿಡುತ್ತಿದೆ. ಅರ್ಥ ಎನ್ನುವುದು ಶಬ್ದದ ಆತ್ಮ. ಆ ಆತ್ಮವನ್ನೇ ಮರೆತು ಕೇವಲ ಶಬ್ದಜಾಲದಲ್ಲಿ ವಿಹರಿಸುವುದು ಕಲಾ ದಾರಿದ್ರ್ಯದ ಲಕ್ಷಣ. ಇಂಗ್ಲಿಷ್ ಪದಗಳ ಅತಿಯಾದ ಬಳಕೆ, ಸಿನಿಮಾ ಮಾದರಿಯ ಸಂಭಾಷಣೆಗಳು ಯಕ್ಷಗಾನದ ವಾಚಿಕ ವೈಭವವನ್ನು ಕುರೂಪಗೊಳಿಸುತ್ತಿವೆ.

ಯಾವುದೇ ಕಲೆ ಉಳಿಯುವುದು ಸಹೃದಯರಿಂದ. ಇಂದು ನಮಗೆ ಗ್ರಾಹಕರು ಸಿಗುತ್ತಿದ್ದಾರೆಯೇ ಹೊರತು ಸಹೃದಯರು ಸಿಗುತ್ತಿಲ್ಲ. ಕಲೆಯ ಸೂಕ್ಷ್ಮತೆಯನ್ನು ಆಸ್ವಾದಿಸುವ ತಾಳ್ಮೆ ಪ್ರೇಕ್ಷಕರಲ್ಲಿ ಕಡಿಮೆಯಾಗುತ್ತಿದೆ. ಇದಕ್ಕೆ ಕಲಾವಿದರಷ್ಟೇ ಸಂಘಟಕರು ಮತ್ತು ಪ್ರಾಯೋಜಕರೂ ಕಾರಣರು. ಕೇವಲ ಹಣದ ಬಲದಿಂದ ಕಲೆಯ ಸ್ವರೂಪವನ್ನು ಬದಲಿಸುವುದು ಅಪಾಯಕಾರಿ. ಯಕ್ಷಗಾನದ ತೆಂಕು ಮತ್ತು ಬಡಗು ತಿಟ್ಟುಗಳ ನಡುವಿನ ಸಂಘರ್ಷಗಳಾಗಲಿ ಅಥವಾ ಶೈಲಿಗಳ ಮಿಶ್ರಣವಾಗಲಿ, ಅವು ಕಲೆಯ ಶ್ರೀಮಂತಿಕೆಯನ್ನು ಹೆಚ್ಚಿಸಬೇಕೇ ಹೊರತು ಗೊಂದಲವನ್ನಲ್ಲ.



ಪ್ರಾಯೋಜಕರು ಕೇವಲ ತಮ್ಮ ಬ್ರಾಂಡ್ ಪ್ರಚಾರಕ್ಕಾಗಿ ಕಲೆಯನ್ನು ಬಳಸಿಕೊಳ್ಳಬಾರದು. ಬದಲಾಗಿ, ಕಲೆಯ ಮೂಲ ಆಶಯವನ್ನು ಸಂರಕ್ಷಿಸುವ ಪೋಷಕರಾಗಬೇಕು. ಮಾರುಕಟ್ಟೆಯ ಅನಿವಾರ್ಯತೆಯನ್ನು ಒಪ್ಪುತ್ತಲೇ, ಕಲೆಯ ಆತ್ಮವನ್ನು ಉಳಿಸಿಕೊಳ್ಳುವ ಮಧ್ಯಮ ಮಾರ್ಗವೊಂದನ್ನು ಕಂಡುಕೊಳ್ಳಬೇಕಾದ ಕಾಲವಿದು. ಶಾಸ್ತ್ರ ಮತ್ತು ಪ್ರಯೋಗಗಳ ನಡುವೆ ಸಮತೋಲನವಿದ್ದಾಗ ಮಾತ್ರ ಕಲೆಯು ಆನಂದ ಮತ್ತು ಬೋಧನೆ ಎಂಬ ಎರಡೂ ಉದ್ದೇಶಗಳನ್ನು ಸಫಲಗೊಳಿಸಲು ಸಾಧ್ಯ.

ಈ ಪರಿಸ್ಥಿತಿಯನ್ನು ಸುಧಾರಿಸಲು ಕೆಲವು ಕಟ್ಟುನಿಟ್ಟಿನ ಕ್ರಮಗಳು ಅನಿವಾರ್ಯ:

1. ಕಲಾಶಿಕ್ಷಣದ ಪುನಶ್ಚೇತನ: ಯಕ್ಷಗಾನದ ಛಂದಸ್ಸು, ರಾಗ ಮತ್ತು ಅರ್ಥಗಾರಿಕೆಯ ಬಗ್ಗೆ ಯುವ ಪೀಳಿಗೆಗೆ ಕೇವಲ ತಾಂತ್ರಿಕವಲ್ಲದ, ಶಾಸ್ತ್ರೀಯ ಮತ್ತು ಸಾಹಿತ್ಯಿಕ ಶಿಕ್ಷಣ ನೀಡಬೇಕು.
2. ಔಚಿತ್ಯ ಪ್ರಜ್ಞೆ: ಪ್ರದರ್ಶನಗಳಲ್ಲಿ ಕಾಲಮಿತಿಯ ಜತೆಗೆ ವಿಷಯದ ಗಾಂಭೀರ್ಯವನ್ನು ಕಾಪಾಡಿಕೊಳ್ಳುವ ಆತ್ಮ-ನಿಯಂತ್ರಣ ಕಲಾವಿದರಲ್ಲಿ ಮೂಡಬೇಕು.
3. ಗಂಭೀರ ವಿಮರ್ಶೆ: ಕೇವಲ ಹೊಗಳಿಕೆಯಲ್ಲದೆ, ಕಲೆಯ ದೋಷಗಳನ್ನು ಎತ್ತಿ ತೋರಿಸುವ ನಿಷ್ಠುರ ವಿಮರ್ಶಕರು ಮತ್ತು ಅಧ್ಯಯನಶೀಲ ಪ್ರೇಕ್ಷಕ ವರ್ಗ ಸೃಷ್ಟಿಯಾಗಬೇಕು.
4. ದಾಖಲೀಕರಣ: ಹಳೆಯ ತಲೆಮಾರಿನ ವಿದ್ವತ್ಪೂರ್ಣ ಅರ್ಥಗಾರಿಕೆಯನ್ನು ದಾಖಲಿಸಿ, ಅದನ್ನು ಇಂದಿನ ಕಲಾವಿದರಿಗೆ ಪಠ್ಯದಂತೆ ಪರಿಚಯಿಸಬೇಕು.

ಕಲೆ ಎಂಬುದು ಹರಿಯುವ ನದಿ; ಅದು ಕಾಲಕ್ಕೆ ತಕ್ಕಂತೆ ಬದಲಾಗುವುದು ಪ್ರಕೃತಿ ಸಹಜ. ಆದರೆ ನದಿಯ ಹರಿವು ಬದಲಾಗಬೇಕೇ ಹೊರತು ಅದರ ನೀರು ಮಲಿನವಾಗಬಾರದು. ಯಕ್ಷಗಾನ ಮತ್ತು ತಾಳಮದ್ದಳೆಗಳು ನಮ್ಮ ಸಾಂಸ್ಕೃತಿಕ ಗಂಗೋತ್ರಿಗಳು. ಮಾರುಕಟ್ಟೆಯ ಅಬ್ಬರದಲ್ಲಿ ಈ ಕನ್ನಡಿ ಮಸುಕಾಗದಂತೆ ನೋಡಿಕೊಳ್ಳುವುದು ಪ್ರಬುದ್ಧ ಸಮಾಜದ ಲಕ್ಷಣ. ತಾಳಮದ್ದಳೆಯ ಅರ್ಥಗಾರಿಕೆಯು ಕೇವಲ ತರ್ಕವಾಗದೆ 'ತತ್ವ'ವಾಗಲಿ, ಯಕ್ಷಗಾನವು ಕೇವಲ ಚಲನಶೀಲ ಪ್ರದರ್ಶನವಾಗದೆ ಒಂದು 'ದರ್ಶನ'ವಾಗಲಿ. ವಾಣಿಜ್ಯದ ಚೌಕಟ್ಟಿನಲ್ಲೂ ಕಲೆಯ ಸಾತ್ವಿಕತೆಯನ್ನು ಕಾಪಾಡಿಕೊಂಡಾಗ ಮಾತ್ರ ನಾವು ಮುಂದಿನ ಪೀಳಿಗೆಗೆ ಒಂದು ಜೀವಂತ ಪರಂಪರೆಯನ್ನು ಹಸ್ತಾಂತರಿಸಲು ಸಾಧ್ಯ. ಸತ್ಯ, ಶಿವ ಮತ್ತು ಸುಂದರ ಎಂಬ ಕಲಾಸೂತ್ರಗಳು ಮತ್ತೆ ಈ ವೇದಿಕೆಗಳಲ್ಲಿ ರಾರಾಜಿಸಲಿ ಎಂಬುವುದೇ ನಮ್ಮ ಆಶಯ.

(ಲೇಖಕರು ಎಂಜಿನಿಯರ್)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 362

ಸಮಾಚಾರ ಸಣ್ಣದಲ್ಲ

ದೇಗುಲ ಬಳಿ ಮುಸ್ಲಿಂ ಮಲವಿಸರ್ಜನೆ, ಥಳಿತ

ಹೈದರಾಬಾದ್: ತೆಲಂಗಾಣದ ದೇವಾಲಯ ಅಂಗಳದಲ್ಲೇ ಮಲ ವಿಸರ್ಜನೆ ಮಾಡಿ ಅಪವಿತ್ರಗೊಳಿಸಿದ ಮುಸ್ಲಿಂ ವ್ಯಕ್ತಿಗೆ ಸ್ಥಳೀಯರು ಥಳಿಸಿ ಪಾಠ ಕಲಿಸಿದ್ದಾರೆ. ಜ.10ರಂದು ರಾಜಧಾನಿ ನಗರ ಹೈದರಾಬಾದ್‌ನ ಮಲ್ಕಜಿಗ್ರಿಯಲ್ಲಿರುವ ದೇವಸ್ಥಾನದ ಗರ್ಭಗುಡಿ ಮುಂದೆಯೇ ಮುಸ್ಲಿಂ ವ್ಯಕ್ತಿಯೊಬ್ಬ ಮಲ ವಿಸರ್ಜನೆ ಮಾಡಿದ್ದು, ಸ್ಥಳೀಯರು ಹಿಡಿದು ಥಳಿಸಿದ್ದಾರೆ. ಅಲ್ಲದೇ, ಆತನಿಂದಲೇ ಸ್ಥಳವನ್ನು ಸ್ವಚ್ಛಗೊಳಿಸುವಂತೆ ಮಾಡಿದ್ದಾರೆ. ಬಳಿಕ ಕ್ಷಮೆ ಕೇಳುವಂತೆ ಮಾಡಿದ್ದಾರೆ. ಈ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಹಿಂದೂ ಸಮುದಾಯದಿಂದ ಆಕ್ರೋಶ ವ್ಯಕ್ತವಾಗುತ್ತಿದೆ. ಹಿಂದೂಗಳ ಧಾರ್ಮಿಕ ನಂಬಿಕೆಗೆ ಧಕ್ಕೆ ಉಂಟು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜನರು ಆಗ್ರಹಿಸಿದ್ದಾರೆ.

ಅಶ್ಲೀಲ ಕಂಟೆಂಟ್: ಎಕ್ಸ್ ಖಾತೆ ರದ್ದು

ದೆಹಲಿ: ವಿಶ್ವದ ನಂ.1 ಸಿರಿವಂತ ಉದ್ಯಮಿ ಎಲಾನ್ ಮಸ್ಕ್‌ರ ಮಾಲೀಕತ್ವದ 'ಎಕ್ಸ್' ಕಂಪನಿಯ ಗ್ರೋಕ್‌ನಲ್ಲಿನ ಅಶ್ಲೀಲ ಕಂಟೆಂಟ್ ವಿವಾದ ಸಂಬಂಧ ಕೇಂದ್ರ ಸರಕಾರದ ಕಟ್ಟು ನಿಟ್ಟು ಸೂಚನೆಗೆ ಮಣಿದಿರುವ 'ಎಕ್ಸ್' 600 ಖಾತೆಗಳು ಮತ್ತು 3500 ಕಂಟೆಂಟ್‌ಗಳನ್ನು ಡಿಲಿಟ್ ಮಾಡಿದೆ. ಈ ಖಾತೆಗಳಲ್ಲಿ 3,500 ಅಶ್ಲೀಲ ಕಟೆಂಟ್ ಅಪ್ಲೋಡ್ ಮಾಡಲಾಗಿತ್ತು. ಈ ಸಂಬಂಧ ಭಾರತದ ಮಾಹಿತಿ ತಂತ್ರಜ್ಞಾನ ಸಚಿವಾಲಯ 'ಎಕ್ಸ್'ಗೆ ಎಚ್ಚರಿಕೆ ನೀಡಿತ್ತು. ನಂತರ ಮೈಕ್ರೋಬ್ಲಾಗಿಂಗ್ ಸೈಟ್ 'ಎಕ್ಸ್' ತಪ್ಪು ಸರಿಪಡಿಸಲಾಗಿದೆ. ಭಾರತದ ಕಾನೂನು ಪಾಲಿಸುತ್ತೇವೆ ಎಂದು ಭರವಸೆ ನೀಡಿದೆ.

ಬಜೆಟ್ ಅಧಿವೇಶನ: ಮುರ್ಮು ಸಮ್ಮತಿ

ದೆಹಲಿ: 2026ರ ಬಜೆಟ್ ಅಧಿವೇಶನಕ್ಕಾಗಿ ಉಭಯ ಸದನಗಳ ಕಲಾಪವನ್ನು ಜ.28ರಿಂದಲೇ ಆರಂಭಿಸುವ ಪ್ರಸ್ತಾವನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅನುಮೋದನೆ ನೀಡಿದ್ದಾರೆ. ಅಧಿವೇಶನದ ಮೊದಲ ಹಂತ ಫೆ.13ರಂದು ಕೊನೆಗೊಳ್ಳಲಿದೆ. ಬಜೆಟ್ ಅಧಿವೇಶನದ 2ನೇ ಹಂತ ಮಾ.9ರಂದು ಆರಂಭವಾಗಿ ಏ.2ರವರೆಗೂ ಮುಂದುವರಿಯುತ್ತದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು 'ಎಕ್ಸ್' ಖಾತೆಯಲ್ಲಿ ಪ್ರಕಟಿಸಿದ್ದಾರೆ. ಉಭಯ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿ ಭಾಷಣ ಮಾಡುವುದರೊಂದಿಗೆ ಜಂಟಿ ಅಧಿವೇಶನ ಆರಂಭವಾಗುತ್ತದೆ. ಬಜೆಟ್ ಅಧಿವೇಶನ ಕ್ಯಾಲೆಂಡರ್ ವರ್ಷದಲ್ಲಿ ಸಂಸತ್ತಿನ ಮೊದಲ ಅಧಿವೇಶನವಾಗಿರುತ್ತದೆ. 2 ಹಂತಕ್ಕಾಗಿ ಮಧ್ಯೆ ವಿರಾಮ ನೀಡಿರುವುದರಿಂದ ಸ್ಥಾಯಿ ಸಮಿತಿಗಳು ವಿವಿಧ ಸಚಿವಾಲಯಗಳ ಅನುದಾನದ ಬೇಡಿಕೆಗಳನ್ನು ಪರಿಶೀಲಿಸಲು ಅನುವು ಮಾಡಿಕೊಡುತ್ತದೆ.

ರಸಗೊಬ್ಬರ ಶೇ.73 ದೇಶೀ ಉತ್ಪಾದನೆ

ದೆಹಲಿ: ಭಾರತ ರಸಗೊಬ್ಬರ ತಯಾರಿಕೆ ಕ್ಷೇತ್ರದಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. 2025ರಲ್ಲಿ ದೇಶದ ಒಟ್ಟು ರಸಗೊಬ್ಬರ ಅಗತ್ಯದ ಶೇ.73ರಷ್ಟನ್ನು ದೇಶೀಯವಾಗಿಯೇ ಉತ್ಪಾದಿಸಿ ಪೂರೈಸಲಾಗಿದೆ. 2025ರಲ್ಲಿ ದೇಶೀಯ ರಸಗೊಬ್ಬರ ಉತ್ಪಾದನೆ ಪ್ರಮಾಣ 5 ಕೋಟಿ 24 ಲಕ್ಷ 62 ಸಾವಿರ ಟನ್ ತಲುಪಿದೆ. ಇದು ಈವರೆಗಿನ ಗರಿಷ್ಠ ಮಟ್ಟದ ಉತ್ಪಾದನೆಯಾಗಿದೆ. 5 ವರ್ಷಗಳಿಂದ ನಿರಂತರ ಏರಿಕೆಯಾಗುತ್ತಿದೆ. 2021ರಲ್ಲಿ 4.33 ಕೋಟಿ ಟನ್, 2022ರಲ್ಲಿ 4.68 ಕೋಟಿ ಟನ್, 2023ರಲ್ಲಿ 5.08 ಕೋಟಿ ಟನ್, 2024ರಲ್ಲಿ 5.10 ಕೋಟಿ ಟನ್, 2025ರಲ್ಲಿ 5.25 ಕೋಟಿ ಟನ್ ರಸಗೊಬ್ಬರ ದೇಶದಲ್ಲೇ ಉತ್ಪಾದನೆಯಾಗಿದೆ. ಯೂರಿಯಾ, ಡಿಎಪಿ, ಎನ್‌ಪಿಕೆ ಮತ್ತು ಎಸ್‌ಎಸ್‌ಪಿ ರಸಗೊಬ್ಬರ ಉತ್ಪಾದನೆಯಲ್ಲಿ ಸ್ಥಿರ ಪ್ರಗತಿಯಾಗಿದೆ. ಭಾರತ ಸರಕಾರದ ಆತ್ಮನಿರ್ಭರ ಭಾರತ ದೃಷ್ಟಿಕೋನದನ್ವಯ ಹೊಸ ಘಟಕಗಳ ಸ್ಥಾಪನೆ, ಸ್ಥಗಿತ ಘಟಕಗಳ ಪುನರುಜ್ಜೀವನ ಎಂದು ರಸಗೊಬ್ಬರ ಸಚಿವಾಲಯ ಹೇಳಿಕೊಂಡಿದೆ.

ಷೇರು: ಉಚಿತ ಸಲಹೆ 1ಲಕ್ಷ ವಿಡಿಯೊ ಡಿಲಿಟ್

ಚೆನ್ನೈ: ನೋಂದಣಿ ಮಾಡಿಕೊಳ್ಳದೇ ಷೇರು ಹೂಡಿಕೆ ಮತ್ತು ಹಣಕಾಸು ಸಲಹೆಗಳನ್ನು ನೀಡುತ್ತಿದ್ದ 'ಫೈನಾನ್ಷಿಯಲ್ ಇನ್‌ಫ್ಲುಯೆನ್ಸ್‌ರ್'ಗಳಂತೆ ಚಾಲ್ತಿಯಲ್ಲಿದ್ದವರ ವಿರುದ್ಧ 'ಭಾರತೀಯ ಷೇರು ವಿನಿಮಯ ಮಂಡಳಿ'(ಸೆಬಿ) ಕಠಿಣ ಕ್ರಮ ಕೈಗೊಳ್ಳಲು ಆರಂಭಿಸಿದೆ. ಈ ಸಲಹೆಗಾರರ 1 ಲಕ್ಷ ವಿಡಿಯೊಗಳನ್ನು ಡಿಲಿಟ್ ಮಾಡಿಸಿದೆ. ಅನಧಿಕೃತ ಹೂಡಿಕೆ ಸಲಹೆಗಾರರ ಪತ್ತೆಗೆ 'ಸುದರ್ಶನ' ಹೆಸರಿನಲ್ಲಿ ಕೃತಕ ಬುದ್ಧಿಮತ್ತೆ(ಎಐ) ಆಧಾರಿತ ವ್ಯವಸ್ಥೆಯನ್ನು ಬಳಸಲಾಗುತ್ತಿದೆ ಎಂದು 'ಸೆಬಿ' ಅಧ್ಯಕ್ಷ ತುಹಿನ್ ಕಾಂತಾ ಪಾಂಡೆ ಚೆನ್ನೈನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

{ ಪಿಯೂಷ್ ಗೋಯಲ್ } ಕೇಂದ್ರ ವಾಣಿಜ್ಯ ಸಚಿವ

ಮಹಾರಾಷ್ಟ್ರ ರಾಜಕಾರಣದಲ್ಲಿ ಉದ್ಧವ್ ಠಾಕ್ರೆ-ರಾಜ್ ಠಾಕ್ರೆ ಜತೆಗೂಡಿರುವುದು ಹೇಗಿದೆ ಎಂದರೆ, '0 ಪ್ಲಸ್ 0 ಕೂಡಿದರೆ 0' ಬರುತ್ತದೆ. ಈ ಸೋದರ ಸಂಬಂಧಿಗಳ 'ಮರಾಠಿ ಮಾನೂಸ್' ತಂತ್ರ ಇನ್ನು ಮಹಾರಾಷ್ಟ್ರದ ಚುನಾವಣೆಗಳಲ್ಲಿ ನಡೆಯದು. ಏಕೆಂದರೆ ಮರಾಠಿ ಜನರ ಹೃದಯ ವಿಶಾಲವಾಗಿದೆ. ಅವರಿಗೆ ಮಹಾರಾಷ್ಟ್ರದಲ್ಲಿರುವ ಯಾರೂ 'ಹೊರಗಿನವರು' ಎನಿಸಲ್ಲ.

ದಾಳಿಕೋರರು ಸೋಮನಾಥ ಮಂದಿರ ನಾಶಕ್ಕೆ ಯತ್ನಿಸಿ ವಿಫಲರಾದರು | ಮಂದಿರ ರಕ್ಷಿಸಿ-ಪುನರುತ್ಥಾನ: ವೀರರಿಗೆ ನಮನ-ಸನ್ಮಾನ

ಸಾವಿರ ವರ್ಷಗಳ ದಾಳಿಗಳಿಗೂ ಅಲುಗಾಡದ ಶ್ರೀ ಸೋಮನಾಥ

ಗಾಂಧಿನಗರ: ಗುಜರಾತ್ ರಾಜ್ಯದಲ್ಲಿರುವ ಶ್ರೀ ಸೋಮನಾಥ ಮಂದಿರದ ಮೇಲೆ 1000 ವರ್ಷಗಳಿಂದಲೂ ಸತತ ದಾಳಿಗಳು ನಡೆಯುತ್ತಲೇ ಇವೆ. ಹಾಗೆ ಶ್ರೀ ಸೋಮನಾಥ ಮಂದಿರದ ಮೇಲೆ ದಾಳಿ ಮಾಡಲು ಬಂದವರೆಲ್ಲರೂ ಮಸಣ ಸೇರಿದರು. ಆದರೆ ಸೋಮನಾಥ ಮಾತ್ರ ಇಲ್ಲಿ ಮಂದಿರದೊಳಗೆ ಸ್ಥಿರವಾಗಿ ನಿಂತಿದ್ದಾನೆ ಎಂದು ಪ್ರಧಾನಿ ನರೇಂದ್ರ ಮೋದಿ ಭಕ್ತಿಯಿಂದ ನಮಿಸಿದರು.

ತವರು ರಾಜ್ಯ ಗುಜರಾತ್‌ನಲ್ಲಿ ಮೂರು ದಿನಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಎರಡನೇ ದಿನವಾದ ಭಾನುವಾರ ಐತಿಹಾಸಿಕ ಸೋಮನಾಥ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ದೇಶದ ಒಳಿತಿಗಾಗಿ, ಪ್ರಗತಿಗಾಗಿ ಶ್ರೀ ಸೋಮನಾಥ ಭಗವಾನರಲ್ಲಿ ಪ್ರಾರ್ಥನೆ ಸಲ್ಲಿಸಿದರು.

12 ಜ್ಯೋತಿರ್‌ಲಿಂಗಗಳಲ್ಲಿ ಒಂದಾದ ಗುಜರಾತ್ ರಾಜ್ಯದ ಶ್ರೀ ಸೋಮನಾಥ ದೇವಾಲಯದ ಮೇಲೆ 1026ರ ಜನವರಿಯಲ್ಲಿ ಮೊಹಮ್ಮದ್ ಘಜನಿ ಮೊದಲ ಬಾರಿಗೆ ದಾಳಿ ನಡೆಸಿದ. ಆ ದಾಳಿ ನಡೆದು ಇದೇ ಜ.10ಕ್ಕೆ 1,000 ವರ್ಷಗಳು ಸಂದಿವೆ. ಸಾವಿರ ವರ್ಷಗಳ ಅವಧಿಯಲ್ಲಿ ಹಲವು ಬಾರಿ ಅನ್ಯಧರ್ಮೀಯರ ದಾಳಿಗಳಾದರೂ ಶ್ರೀ ಸೋಮನಾಥ ಮಂದಿರದ ಭವ್ಯತೆ ಮರುಸ್ಥಾಪಿಸಲಾಗಿದೆ. ಈ ಪ್ರಯತ್ನಗಳ ಫಲವಾಗಿ ಸೋಮನಾಥನ ಮಂದಿರ ಇಂದಿಗೂ ವೈಭವದಿಂದ ಕಂಗೊಳಿಸುತ್ತಿದೆ. ಹಾಗಾಗಿಯೇ 'ಸೋಮನಾಥ ಸ್ವಾಭಿಮಾನ ಪರ್ವ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

1000 ವರ್ಷಗಳ ಹಿಂದೆ ಭಾರತದ ಮೇಲೆ ದಂಡೆತ್ತಿ ಬಂದವರು ತಾವು ಗೆದ್ದಿದ್ದೇವೆ ಎಂದು ಭಾವಿಸುತ್ತಿದ್ದರು, ಆದರೆ ಇಂದಿಗೂ ಸೋಮನಾಥ ದೇವಾಲಯದಲ್ಲಿ ಹಾರುತ್ತಿರುವ ಧ್ವಜವು ಭಾರತದ ಶಕ್ತಿ ಎಷ್ಟಿದೆ ಎಂಬುದನ್ನು ಇಡೀ ಜಗತ್ತಿಗೇ ಸಾರುತ್ತಿದೆ ಎಂದು ಮೋಧಿ ಹೆಮ್ಮೆಯಿಂದ ನುಡಿದರು.

ಸೋಮನಾಥನ ಪವಿತ್ರ ವಿಗ್ರಹವನ್ನು ನಾಶಪಡಿಸಲಾಯಿತು. ಸೋಮನಾಥದ ಇತಿಹಾಸವನ್ನು ಮರೆಮಾಡಲಾಗಿದೆ, ಧಾರ್ಮಿಕ ಮತಾಂಧತೆಯನ್ನು ಸರಳ ದರೋಡೆ ಎಂದು ಚಿತ್ರಿಸಲಾಗಿದೆ ಎಂದು ಪ್ರಧಾನಿ ಮೋದಿ ದೇಶ-ವಿದೇಶದ ಇತಿಹಾಸಕಾರರ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ನಾವು ಪ್ರತಿ ಜೀವಿಯಲ್ಲಿಯೂ ಶಿವನನ್ನು ನೋಡುವ ಭಕ್ತರು. ಸೋಮನಾಥ ದೇವಾಲಯದ ಶೌರ್ಯದ ಗಾಥೆ 1000 ವರ್ಷಗಳನ್ನು ಪೂರೈಸಿದ್ದರೆ, ಸೋಮನಾಥ ದೇವಾಲಯದ ಪುನರ್ನಿರ್ಮಾಣವಾಗಿ 75 ವರ್ಷಗಳೇ ಪೂರ್ಣಗೊಂಡಿವೆ. ನಮ್ಮ ಪೂರ್ವಜರು ಭಗವಾನ್ ಶಿವನಿಗಾಗಿ, ಅವನ ಜ್ಯೋತಿರ್ಲಿಂಗ ಮಂದಿರದ ಮರುಸ್ಥಾಪನೆಗಾಗಿ ತಮ್ಮದೆನ್ನುವುದೆಲ್ಲವನ್ನೂ ತ್ಯಾಗ ಮಾಡಿದ್ದಾರೆ. ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ಮಂದಿರವನ್ನು ರಕ್ಷಿಸಿದ್ದಾರೆ ಎಂದು ಹಿರಿಯರನ್ನು ಮೋದಿ ಸ್ಮರಿಸಿ ನಮಿಸಿದರು. ದೇವಾಲಯದ ಟ್ರಸ್ಟಿ ಮತ್ತು ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತಿತರ ಗಣ್ಯರು ಹಾಜರಿದ್ದರು.

ಗುಜರಾತ್‌ನ ಸೋಮನಾಥ ಮಂದಿರದಲ್ಲಿ ಶಿವಲಿಂಗಕ್ಕೆ ಪ್ರಧಾನಿ ಮೋದಿ ಪೂಜೆ-ಅಭಿಷೇಕ

ಮುಖ್ಯಾಂಶಗಳು

- ಸೋಮನಾಥ ಪವಿತ್ರ ಕ್ಷೇತ್ರದ ನೈಜ ಇತಿಹಾಸವನ್ನು ಮುಚ್ಚಿಡಲಾಗಿದೆ
- ಕ್ರೌರ್ಯ ಪೂರ್ಣ ತೊಲಗಲಿ, ಗುಲಾಮಿ ಮನೋಭಾವ ತ್ಯಜಿಸಬೇಕು
- ದೇಶವನ್ನು ವಿಭಜಿಸುವ ಸಂಚು ಹೂಡುವ ಜನರನ್ನು ಸೋಲಿಸಬೇಕಿದೆ

ಡ್ರೋನ್ ಬೆಳಕಿನ ಚಿತ್ತಾರ

ಅರಬ್ಬಿ ಸಮುದ್ರ ತೀರದಲ್ಲಿ ಹರಡಿಕೊಂಡಿರುವ ಗುಜರಾತ್‌ನ ಶ್ರೀಸೋಮನಾಥ ಮಂದಿರ ಶನಿವಾರ ರಾತ್ರಿಯ ಕತ್ತಲೆಯಲ್ಲಿ ಅದ್ಭುತ ದೃಶ್ಯಗಳನ್ನು ಅನಾವರಣಗೊಳಿಸಿತು. 3,000 ಡ್ರೋನ್‌ಗಳು ಆಕಾಶದಲ್ಲಿ ಒಟ್ಟಾಗಿ ಸೋಮನಾಥ ಮಂದಿರದ ಇತಿಹಾಸವನ್ನು ಅಚ್ಚುಕಟ್ಟಾಗಿ ಚಿತ್ರರೂಪಕವಾಗಿ ರೂಪಿಸಿದವು. ಮಂದಿರದ ಮೇಲಿನ ಅನ್ಯಧರ್ಮೀಯರ ದಾಳಿ ಮತ್ತು ಮರು ನಿರ್ಮಾಣ ಸಂದರ್ಭ ಚಿತ್ರಗಳನ್ನು ಡ್ರೋನ್‌ಗಳು ಪ್ರಸ್ತುಪಡಿಸಿದವು. ಗಾಳಿಯಲ್ಲಿ ತೇಲುತ್ತಿದ್ದ ವರ್ಣಮಯ ಕಲಾಕೃತಿ ನೆರೆದಿದ್ದ ಶಿವಭಕ್ತರನ್ನು ಚಕಿತಗೊಳಿಸಿತು.

ಶೌರ್ಯ ಯಾತ್ರೆ: ಕೈಯಲ್ಲಿ ಢಮರು

ಸೋಮನಾಥ ಮಂದಿರದ ಪುನರುತ್ಥಾನದಲ್ಲಿ ಶ್ರಮಿಸಿದವರ ಸ್ಮರಣೆಯಲ್ಲಿ ಆಯೋಜಿಸಲಾಗಿದ್ದ 'ಶೌರ್ಯ ಯಾತ್ರೆ'ಯಲ್ಲಿಯೂ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದರು. ಸೋಮನಾಥ ದೇವಾಲಯವನ್ನು ರಕ್ಷಿಸುವಲ್ಲಿ ಪ್ರಾಣ ತ್ಯಾಗ ಮಾಡಿದ ಅಸಂಖ್ಯಾತ ವೀರ ಯೋಧರಿಗೆ ಗೌರವ ಸಲ್ಲಿಸಲು ಬೃಹತ್ ಮೆರವಣಿಗೆ ಆಯೋಜಿಸಲಾಗಿತ್ತು. ದೇಗುಲ ರಕ್ಷಕರ ಶೌರ್ಯ, ಧೈರ್ಯ ಮತ್ತು ತ್ಯಾಗದ ಸಂಕೇತವಾಗಿ 108 ಕುದುರೆಗಳು ಮೆರವಣಿಗೆಯ ಲ್ಲಿದ್ದವು. ಶೌರ್ಯಯಾತ್ರೆ ರಥದಲ್ಲಿ ಸಾಗಿದ ಪ್ರಧಾನಿ ಮೋದಿ ಕೈಯಲ್ಲಿ ದೊಡ್ಡ ಢಮರುಗವಿತ್ತು. ಹರ ಹರ ಮಹಾದೇವ್ ಘೋಷಣೆ ಮೊಳಗಿಸುತ್ತಾ, ಢಮರು ಗವನ್ನು ಪದೇ ಪದೇ ಅಲುಗಿಸಿ ನಿನಾದ ಹೊರಡಿಸುತ್ತಾ ಸಾಗಿದ ಮೋದಿ, ಭಕ್ತಿ ಭಾವದಲ್ಲಿ ಮಿಂದೆದ್ದರು. ಮೆರವಣಿಗೆಯಲ್ಲಿ ಸಾಗಿಬಂದ ಶಿವಭಕ್ತರು, ರಸ್ತೆಯ ಇಕ್ಕೆಲಗಳಲ್ಲಿಯೂ ನಿಂತಿದ್ದವರಲ್ಲಿಯೂ ಭಕ್ತಿಯ ಭಾವ ಮೂಡುವಂತೆ ಮಾಡಿ ದರು. ಈ ಸಂದರ್ಭ ಮೆರವಣಿಗೆಯ ಉದ್ದಕ್ಕೂ, ಎಲ್ಲೆಲ್ಲೂ ಹರ ಹರ ಮಹಾ ದೇವ ಘೋಷಣೆ ಮಾರ್ದನಿಸಿತು. ಇದಕ್ಕೂ ಮುನ್ನ ಶನಿವಾರ ರಾತ್ರಿ ಶ್ರೀ ಸೋಮನಾಥ ದೇವಾಲಯ ಸಂಕೀರ್ಣದಲ್ಲಿ ನಡೆದ 1,000 ಸೆಕೆಂಡುಗಳ ಸಾಮೂಹಿಕ ಓಂಕಾರ ಘೋಷದಲ್ಲಿಯೂ ಮೋದಿ ಪಾಲ್ಗೊಂಡು ಶಿವಭಕ್ತಿ ಪ್ರದರ್ಶಿಸಿದ್ದರು.

ಐಸಿಸ್ ಉಗ್ರರ 36 ನೆಲೆ ಧ್ವಂಸಗೊಳಿಸಿದ ಅಮೆರಿಕ

ಸಿರಿಯ ಮೇಲೆ ಆಪರೇಷನ್ ಹಾಕ್ ಐ

ವಾಷಿಂಗ್ಟನ್: 'ಇಸ್ಲಾಮಿಕ್ ಸ್ಟೇಟ್'(ಐಎಸ್‌ಐಎಸ್) ಭಯೋತ್ಪಾದಕ ಸಂಘಟನೆ ನಾಮಾವಶೇಷಕ್ಕೆ ಮುಂದಾಗಿರುವ ಅಮೆರಿಕ, ಸಿರಿಯ ದೇಶದ ಮೇಲೆ ಮತ್ತೊಮ್ಮೆ ದಾಳಿ ನಡೆಸಿದೆ. 'ಆಪರೇಷನ್ ಹಾಕ್ ಐ' ಹೆಸರಿನಲ್ಲಿ ಶನಿವಾರ ರಾತ್ರಿ ಭಾರೀ ಪ್ರಮಾಣದಲ್ಲಿ ವೈಮಾನಿಕ ಕಾರ್ಯಾಚರಣೆ ನಡೆಸಿ ಸಿರಿಯ ದೇಶದ ವಿವಿಧೆಡೆ ಇರುವ ಐಎಸ್‌ಐಎಸ್ ಉಗ್ರರ 36 ಅಡಗುತಾಣಗಳ ಮೇಲೆ ಪ್ರಬಲ ಬಾಂಬ್‌ಗಳನ್ನು ಎಸೆದಿದೆ. ಸುರಂಗಗಳೂ ಸೇರಿದಂತೆ ಐಎಸ್‌ಐಎಸ್ ಉಗ್ರರ 36 ನೆಲೆಗಳು ಧ್ವಂಸಗೊಂಡಿವೆ.

ಸಿರಿಯದಲ್ಲಿ ಐಎಸ್‌ಐಎಸ್ ನೆಲೆಗಳ ಮೇಲೆ ಅಮೆರಿಕ ಬಾಂಬ್ ದಾಳಿ.

ಸಿರಿಯದಲ್ಲಿರುವ ಅಮೆರಿಕದ ಸೇನಾಪಡೆಗಳ ಶಿಬಿರದ ಮೇಲೆ 2025ರ ಡಿಸೆಂಬರ್‌ನಲ್ಲಿ ಐಎಸ್‌ಐಎಸ್ ಉಗ್ರರು ನಡೆಸಿದ ಭಯೋತ್ಪಾದಕ ದಾಳಿಯಲ್ಲಿ ಇಬ್ಬರು ಯೋಧರು ಮತ್ತೊಬ್ಬ ಭಾಷಾಂತರಕಾರನ ಹತ್ಯೆಯಾಗಿತ್ತು. ಆ ದಾಳಿಗೆ ಪ್ರತೀಕಾರವಾಗಿ ಅಮೆರಿಕ ಈಗ 2ನೇ ಬಾರಿ ವೈಮಾನಿಕ ದಾಳಿ ನಡೆಸಿದೆ. ಐಎಸ್‌ಐಎಸ್‌ನ 36 ನೆಲೆಗಳ ಮೇಲೆ ಅಮೆರಿಕದ ಯುದ್ಧ ವಿಮಾನಗಳು ಹಾಗೂ ಡ್ರೋನ್‌ಗಳ ಮೂಲಕ 90ಕ್ಕೂ ಹೆಚ್ಚು ಬಾಂಬ್ ದಾಳಿ ನಡೆಸಲಾಗಿದೆ. ಈ ದಾಳಿಗೆ ಎಫ್-15ಇ, ಎ-10ಎಸ್, ಎಸಿ-130ಜೆಎಸ್, ಎಂಕ್ಯು-9 ಮತ್ತು ಜೋರ್ಡಾನಿಯನ್ ಎಫ್-16 ಯುದ್ಧ ವಿಮಾನಗಳು, ನೂರಾರು ಡ್ರೋನ್‌ಗಳನ್ನು ಬಳಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್‌ನ ವಕ್ತಾರ ಕ್ಯಾಪ್ಟನ್ ಟಿಮ್ ಹಾಕಿನ್ಸ್ ಸುದ್ದಿಸಂಸ್ಥೆಗೆ ಭಾನುವಾರ ಮಾಹಿತಿ ನೀಡಿದ್ದಾರೆ. ಆದರೆ ಸಾವು-ನೋವು ಕುರಿತ ಅಂಕಿ ಅಂಶವನ್ನು ಅಮೆರಿಕ ಸೇನೆಯಾಗಲೀ, ಸಿರಿಯ ಸರಕಾರವಾಗಲೀ ಹಂಚಿಕೊಂಡಿಲ್ಲ.

ಬಾಂಗ್ಲಾದೇಶೀ, ರೊಹಿಂಗ್ಯಾ ಅಕ್ರಮ ವಲಸಿಗರ ಗಡಿಪಾರು ಶೀಘ್ರ

ಬಾಂಗ್ಲಾದೇಶೀ ಪತ್ತೆಗೆ 'ಎಐ' ನೆರವು: ಫಡ್ನವೀಸ್

ಮುಂಬೈ: ಕಳ್ಳ ಮಾರ್ಗದಲ್ಲಿ ಭಾರತದೊಳಕ್ಕೆ ನುಸುಳಿಕೊಂಡು ಬಂದು ಮಹಾರಾಷ್ಟ್ರದ ವಿವಿಧೆಡೆ ಅಕ್ರಮವಾಗಿ ನೆಲೆ ಕಂಡುಕೊಂಡಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಗುರುತಿಸಿ ಬಂಧಿಸಲು 'ಕೃತಕ ಬುದ್ಧಿಮತ್ತೆ' (ಎಐ) ತಂತ್ರಜ್ಞಾನ ಬಳಸಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಭಾನುವಾರ ಹೇಳಿದ್ದಾರೆ.

ಬಾಂಗ್ಲಾದೇಶದ ಪ್ರಜೆಗಳು, ರೊಹಿಂಗ್ಯಾ ಸಮುದಾಯವರು ಭಾರೀ ಸಂಖ್ಯೆಯಲ್ಲಿ ಮಹಾರಾಷ್ಟ್ರದಲ್ಲಿ ನೆಲೆ ಕಂಡುಕೊಂಡಿರುವ ಬಗ್ಗೆ ಮಾಹಿತಿ ಇದೆ. ಅವರನ್ನು ಗುರುತಿಸಿ ಬಂಧಿಸುವುದು ಪೊಲೀಸರಿಂದಷ್ಟೇ ಸಾಧ್ಯವಾಗದು. ಹಾಗಾಗಿಯೇ 'ಎಐ' ತಂತ್ರಜ್ಞಾನದ ನೆರವು ಪಡೆಯಲಾಗುವುದು ಎಂದು ಫಡ್ನವಿಸ್ ಹೇಳಿದ್ದಾರೆ.

ಅಕ್ರಮ ವಲಸಿಗ ಬಾಂಗ್ಲಾದೇಶಿಯರು, ರೊಹಿಂಗ್ಯಾಗಳಲ್ಲಿ ಹೆಚ್ಚಿನ ಸಂಖ್ಯೆಯವರು ಮುಂಬೈ ಮಹಾನಗರದಲ್ಲಿಯೇ ನೆಲೆಸಿದ್ದಾರೆ. ನಕಲಿ ದಾಖಲೆಗಳನ್ನು ಬಳಸಿಕೊಂಡು ಆಧಾರ್ ಕಾರ್ಡ್, ಬಿಪಿಎಲ್ ರೇಷನ್ ಕಾರ್ಡ್ ಮಾಡಿಸಿಕೊಂಡು ರಾಜ್ಯ ಮತ್ತು ಕೇಂದ್ರ ಸರಕಾರದ ಹತ್ತಾರು ಸವಲತ್ತುಗಳ ಪ್ರಯೋಜನವನ್ನೂ ಪಡೆದುಕೊಳ್ಳುತ್ತಿದ್ದಾರೆ ಎಂಬುದು ತಿಳಿದಿದೆ. ಅವರನ್ನೆಲ್ಲಾ ಮುಂಬೈ, ಮಹಾರಾಷ್ಟ್ರದಿಂದಷ್ಟೇ ಅಲ್ಲ, ದೇಶದಿಂದಲೇ ಹೊರಹಾಕಲಾಗುವುದು ಎಂದು ಸುದ್ದಿಸಂಸ್ಥೆಗೆ ತಿಳಿಸಿದರು. ಈ ಬಾಂಗ್ಲಾದೇಶೀಯರು, ರೊಹಿಂಗ್ಯಾಗಳು ಒಂದು ಮಾದರಿ ಕಂಡುಕೊಂಡಿದ್ದಾರೆ. ಮೊದಲಿಗೆ ಸುಲಭ ಮಾರ್ಗದಲ್ಲಿ ಗಡಿ ನುಸುಳುತ್ತಾರೆ, ಬಳಿಕ ಪಶ್ಚಿಮ ಬಂಗಾಳದಲ್ಲಿ ಕೆಲ ಸಮಯ ಇದ್ದು, ಆಧಾರ್, ರೇಷನ್ ಕಾರ್ಡ್, ಮತದಾರರ ಗುರುತಿನ ಚೀಟಿ ಮಾಡಿಸಿಕೊಳ್ಳುತ್ತಾರೆ. ಬಳಿಕ ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧೆಡೆಗೆ ಚದುರಿ ಹೋಗುತ್ತಾರೆ ಎಂದು ವಿವರಿಸಿದರು.

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ-ಬಾಂಬೆ) ಸಹಯೋಗದಲ್ಲಿ ಬಾಂಗ್ಲಾದೇಶಿ ಮತ್ತು ರೊಹಿಂಗ್ಯಾಗಳ ಮುಖಚಹರೆ ಗುರುತಿಸಬಲ್ಲ ಎಐ ತಂತ್ರಜ್ಞಾನ ಆಧಾರಿತ ಅಪ್ಲಿಕೇಷನ್ ಅಭಿವೃದ್ಧಿ ಪಡಿಸಲಾಗುತ್ತಿದೆ. ಅದು ಮೊದಲಿಗೆ ಶೇ.60ರಷ್ಟು ನಿಖರವಾಗಿ ಚಹರೆ ಗುರುತಿಸಬಲ್ಲಷ್ಟು ಸಮರ್ಥವಾಗಿರಲಿದೆ. 4 ತಿಂಗಳಲ್ಲಿ ಸಾಮರ್ಥ್ಯವನ್ನು ಶೇ.100ರ ಮಟ್ಟಕ್ಕೆ ಹೆಚ್ಚಿಸಿಕೊಳ್ಳಲಿದೆ.

-ದೇವೇಂದ್ರ ಫಡ್ನವಿಸ್ ಮಹಾರಾಷ್ಟ್ರ ಸಿಎಂ

ವಿಶ್ವಸಂಸ್ಥೆಯಲ್ಲಿ 48 ವರ್ಷ ವೈದ್ಯ ಸೇವೆ | ನಿವೃತ್ತಿ ಬಳಿಕ ದೆಹಲಿ ಸಮಾಜಸೇವೆ

ದೆಹಲಿ ದಂಪತಿ ಡಿಜಿ ಅರೆಸ್ಟ್: ₹15 ಕೋಟಿ ಲೂಟಿ

ದೆಹಲಿ: ದೆಹಲಿ ಗ್ರೇಟರ್ ಕೈಲಾಶ್ ಪ್ರದೇಶ ನಿವಾಸಿ ವೃದ್ಧ ವೈದ್ಯ ದಂಪತಿ ದೊಡ್ಡ ಮಟ್ಟದಲ್ಲಿ ಸೈಬರ್ ವಂಚನೆಗೊಳಗಾಗಿದ್ದಾರೆ. 2 ವಾರಕ್ಕೂ ಹೆಚ್ಚು ಕಾಲ ಡಿಜಿಟಲ್ ಅರೆಸ್ಟ್ ಭಯದಲ್ಲೇ ಮುಳುಗಿದ್ದು, 14.85 ಕೋಟಿ ರು.ಗಳನ್ನು ಕಳೆದುಕೊಂಡಿದ್ದಾರೆ. ಈ ಸುದ್ದಿಯನ್ನು ದೆಹಲಿ ಸೈಬರ್ ಅಪರಾಧ ತನಿಖಾ ವಿಭಾಗದ ಹಿರಿಯ ಅಧಿಕಾರಿ ಸುದ್ದಿಸಂಸ್ಥೆಗಳಿಗೆ ಶನಿವಾರ ತಿಳಿಸಿದ್ದಾರೆ.

ಡಾ.ಓಂ ತನೇಜ(80) ಮತ್ತು ಡಾ. ಇಂದಿರಾ ತನೇಜ(77) ಅಮೆರಿಕದಲ್ಲಿ ವಿಶ್ವಸಂಸ್ಥೆಗಾಗಿ 48 ವರ್ಷಗಳ ಕಾಲ ವೈದ್ಯಕೀಯ ಸೇವೆಯಲ್ಲಿದ್ದರು. ನಿವೃತ್ತಿ ಬಳಿಕ 2015ರಲ್ಲಿ ದೆಹಲಿಗೆ ಬಂದು ನೆಲೆಸಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು.

ವೃದ್ಧ ವೈದ್ಯ ದಂಪತಿಯ ಸಂಕಷ್ಟ ಡಿ.24ರ ಬೆಳಗ್ಗೆ ಶುರುವಾಗಿದೆ. ಸೈಬರ್ ವಂಚಕರಲ್ಲೊಬ್ಬ ಡಿ.24ರಂದು ಕರೆ ಮಾಡಿ 'ನಾನು ಜಾರಿ ನಿರ್ದೇಶನಾಲಯದ ಹಿರಿಯ ಅಧಿಕಾರಿ. ನೀವು ಅಕ್ರಮ ಹಣ ವರ್ಗಾವಣೆ ನಡೆಸಿ ರಾಷ್ಟ್ರೀಯ ಭದ್ರತಾ ನಿಯಮಗಳನ್ನು ಉಲ್ಲಂಘಿಸಿದ್ದೀರಿ. 'ಪಿಎಂಎಲ್ಎ' ಸೆಕ್ಷನ್‌ಗಳಡಿ ನಿಮ್ಮನ್ನು ಡಿಜಿಟಲ್ ಅರೆಸ್ಟ್ ಮಾಡಲಾಗಿದೆ' ಎಂದು ಹೆದರಿಸಿದ್ದಾನೆ. ಅದೇ ಭಯದಲ್ಲಿ ಜ.10ರವರೆಗೂ ವೃದ್ಧರನ್ನು ವಂಚಕರು ಮನೆಯಲ್ಲೇ ಕೂಡಿ ಹಾಕಿದ್ದಾರೆ. ಯಾರಿಗೂ ದೂರವಾಣಿ ಕರೆ ಮಾಡದಂತೆ ಹೆದರಿಸಿದ್ದಾರೆ. ವಿಡಿಯೊ ಕರೆ ಮೂಲಕ ಸತತ ನಿಗಾ ಇರಿಸಿರುವುದಾಗಿಯೂ ಹೆದರಿಸಿದ್ದಾರೆ. ದಂಪತಿ ಸೈಬರ್ ವಂಚಕರು ಹೇಳಿದಂತೆಲ್ಲಾ ಕೇಳುವಂತಾಗಿದೆ.

ನಂತರ, ಜಾಮೀನಿನಡಿ ಬಿಡುಗಡೆ ಮಾಡುವ ಭರವಸೆ ಮೂಡಿಸಿದ ವಂಚಕರು, ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ಗೆ ಮುಂಗಡ ಠೇವಣಿ ಇರಿಸಬೇಕಿದೆ ಎಂದು ನಂಬಿಸಿ 2-2.5 ಕೋಟಿ ರು. ಲೆಕ್ಕದಲ್ಲಿ ಹಲವು ಬಾರಿ 8 ವಿವಿಧ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿಸಿಕೊಂಡಿದ್ದಾರೆ. 17 ದಿನಗಳಲ್ಲಿ ಒಟ್ಟು 14.85 ಕೋಟಿ ರು. ಲೂಟಿ ಮಾಡಿದ್ದಾರೆ. ಕೊನೆಗೆ ಜ.10ರಂದು ವಿಡಿಯೊ ಕರೆ ಮಾಡಿದ ಸೈಬರ್ ವಂಚಕರು, ನಿಮ್ಮನ್ನು ಈಗ ಬಿಡುಗಡೆ ಮಾಡಲಾಗುತ್ತದೆ. ನಿಮ್ಮಿಂದ ಆರ್‌ಬಿಐಗೆ ಮುಂಗಡ ಠೇವಣಿಯಾಗಿ ಇರಿಸಿದ್ದ ಹಣವೂ ವಾಪಸ್ ಆಗಲಿದೆ. ಸಮೀಪದ ಪೊಲೀಸ್ ಠಾಣೆಗೆ ಈಗಲೇ ತೆರಳಿ ಎಂದಿದ್ದಾನೆ. ಡಾ.ಇಂದಿರಾ ವಿಡಿಯೊ ಕರೆಯಲ್ಲಿರುವಾಗಲೇ ಸ್ಥಳೀಯ ಪೊಲೀಸ್ ಠಾಣೆಗೆ ತೆರಳಿ ಪೊಲೀಸ್ ಅಧಿಕಾರಿಗೆ ಮೊಬೈಲ್ ಕೊಟ್ಟಿದ್ದಾರೆ. ಸೈಬರ್ ವಂಚಕ ಪೊಲೀಸ್ ಅಧಿಕಾರಿಯನ್ನೇ ತರಾಟೆಗೆ ತೆಗೆದುಕೊಂಡಿದ್ದಾನೆ.

ವೃದ್ಧರು, ಹಣವಂತರೇ ಬಲಿಪಶು

ಸೈಬರ್ ಅಪರಾಧ ಲೋಕದ ವಂಚಕರು ಹಣವಂತರು, ವೃದ್ಧರನ್ನೇ ಗುರಿಯಾಗಿಸಿಕೊಂಡು ನಡೆಸುತ್ತಿರುವ 'ಡಿಜಿಟಲ್ ಅರೆಸ್ಟ್' ದಿನೇ ದಿನೇ ಹೆಚ್ಚುತ್ತಲೇ ಇದೆ. 2026ರ ವರ್ಷಾರಂಭದಲ್ಲೇ ದೆಹಲಿಯ ವೃದ್ಧ ವೈದ್ಯ ದಂಪತಿ 17 ದಿನಗಳ ಕಾಲ ಡಿಜಿಟಲ್ ಅರೆಸ್ಟ್ ಭಯದಲ್ಲಿ ಸಿಲುಕಿಕೊಂಡು ಸುಮಾರು 15 ಕೋಟಿ ರು.ಗಳನ್ನು ಕಳೆದುಕೊಂಡಿದ್ದಾರೆ. ಸದ್ಯ ಡಿಜಿಟಲ್ ಅರೆಸ್ಟ್ ಎಂಬುದೀಗ 'ರಾಷ್ಟ್ರೀಯ ಭದ್ರತೆ'ಯ ದೊಡ್ಡ ಪ್ರಶ್ನೆಯಾಗಿಬಿಟ್ಟಿದೆ.

ಬಳಿಕ ಡಾ.ಇಂದಿರಾ, 'ತನ್ನನ್ನೂ ಮತ್ತು ಪತಿಯನ್ನೂ ಡಿಜಿಟಲ್ ಅರೆಸ್ಟ್‌ನಿಂದ ಬಿಡುಗಡೆ ಮಾಡಿ. ಅಲ್ಲದೇ, ಆರ್‌ಬಿಐನಿಂದ 14.85 ಕೋಟಿ ರು. ವಾಪಸ್ ಕೊಡಿಸಿ ಎಂದು ಮನವಿ ಮಾಡಿದ್ದಾರೆ. ಆಗ ಪೊಲೀಸ್ ಅಧಿಕಾರಿಯೇ ಕಕ್ಕಾಬಿಕ್ಕಿ ಆಗಿದ್ದಾರೆ.

ಬಳಿಕ ಪೊಲೀಸ್ ಅಧಿಕಾರಿ ಡಾ.ಇಂದಿರಾರಿಂದ ಎಲ್ಲಾ ಮಾಹಿತಿ ಪಡೆದುಕೊಂಡಿದ್ದು, ವೈದ್ಯ ದಂಪತಿ ಹೇಗೆಲ್ಲಾ ಸೈಬರ್ ವಂಚನೆಗೆ ಒಳಗಾಗಿದ್ದಾರೆ ಎಂಬುದನ್ನು ಮನವರಿಕೆ ಮಾಡಿದ್ದಾರೆ. ಬಳಿಕ 'ಸೈಬರ್ ವಂಚನೆ' ಪ್ರಕರಣ ದಾಖಲಿಸಿಕೊಂಡು ವಿಶೇಷ ಸೈಬರ್ ಅಪರಾಧ ಪತ್ತೆಯ 'ದಿ ಇಂಟೆಲಿಜೆನ್ಸ್ ಫ್ಯೂಷನ್ ಅಂಡ್ ಸ್ಟ್ರಾಟೆಜಿಕ್ ಆಪರೇಷನ್ಸ್' ವಿಭಾಗಕ್ಕೆ ವರ್ಗಾಯಿಸಿದ್ದಾರೆ.

ಆರ್‌ಎಸ್‌ಎಸ್ ಕುರಿತು ಡಾ.ಭಾಗವತ್ ನುಡಿ

ವೃಕ್ಷವಾಗಿ ಬದಲಾದರೂ ಮೂಲಗುಣವೇ ಶಾಶ್ವತ

ದೆಹಲಿ: 100 ವರ್ಷಗಳ ಹಿಂದೆ ಬಿತ್ತಿದ ಬೀಜವೊಂದು ವಟವೃಕ್ಷವಾಗಿ ಬೆಳೆದುನಿಂತಿದೆ. ಸಂಘಟನಾತ್ಮಕವಾಗಿ ಭಾರೀ ಪ್ರಮಾಣದಲ್ಲಿ ಬೆಳೆದಿದ್ದರೂ, ಹೊಸ ರೂಪಗಳನ್ನು ತಳೆದಿದ್ದರೂ ಮೂಲಭೂತವಾಗಿ ಯಾವುದೇ ಬದಲಾವಣೆ ಹೊಂದಿಲ್ಲ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ್ ಡಾ. ಮೋಹನ್ ಭಾಗವತ್ ಅವರು ಹೇಳಿದ್ದಾರೆ.

ರಾಷ್ಟ್ರರಾಜಧಾನಿ ದೆಹಲಿಯಲ್ಲಿರುವ ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಭಾನುವಾರ ಮಾತನಾಡಿದ ಭಾಗವತ್ ಅವರು, ಆರ್‌ಎಸ್‌ಎಸ್ ಈಗ ಶತಮಾನ ಸಂಭ್ರಮದಲ್ಲಿದೆ. ಈ ವರ್ಷಗಳಲ್ಲಿ ಸಂಘಟನೆಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಆ ಬದಲಾವಣೆಗಳನ್ನು ಜನರೂ ಒಪ್ಪಿಕೊಂಡಿದ್ದಾರೆ. ವಾಸ್ತವದಲ್ಲಿ ಇದೆಲ್ಲವೂ ಬದಲಾಗುತ್ತಿರುವುದಲ್ಲ, ನಿಧಾನವಾಗಿ ಅರಳಿಕೊಳ್ಳುತ್ತಿರುವುದಾಗಿದೆ ಎಂದೂ ವ್ಯಾಖ್ಯಾನಿಸಿದರು.

ಆರ್‌ಎಸ್‌ಎಸ್‌ನ ಸಂಸ್ಥಾಪಕರಾದ ಡಾ. ಕೇಶವ್ ಬಲಿರಾಮ್ ಹೆಡ್ಗೆವಾರ್ ಜನ್ಮತಃ ದೇಶಭಕ್ತರಾಗಿದವರು. ಅವರ ತಮ್ಮ ಇಡೀ ಬದುಕನ್ನೇ ದೇಶಕ್ಕಾಗಿ, ದೇಶ ಸೇವೆಗಾಗಿ ಮುಡುಪಾಗಿರಿಸಿದರು. ಸಂಘ ಮತ್ತು ಡಾ. ಸಾಹೇಬ್ ಒಂದರಲ್ಲಿ ಇನ್ನೊಂದು ಬೆರೆತಂತಿದ್ದರು ಎಂದು ಭಾಗವತ್ ಸ್ಮರಿಸಿ ನಮಿಸಿದರು.

ಮರ-ಬೀಜ-ಮೂಲಗುಣ: ಸೂಕ್ಷ್ಮ ಗಾತ್ರದ ಬೀಜವೊಂದು ಮಣ್ಣಿಗೆ ಬಿದ್ದು ಮೊಳಕೆಯೊಡೆದು ಗಿಡವಾಗಿ ಅರಳಿ, ದೊಡ್ಡ ಮರವಾಗಿ ಬೆಳೆದು ಹೂವು, ಕಾಯಿ, ಹಣ್ಣುಗಳಿಂದ ಪೂರ್ಣರೂಪ ಪಡೆಯುವುದೇ ಪ್ರಕೃತಿ ನಿಯಮವಾಗಿದೆ. ಆದರೆ, ಈ ವೃಕ್ಷವು ಮೂಲದಲ್ಲಿ ಬೀಜವಾಗಿದ್ದಾಗ ಪಡೆದಿದ್ದ ಮೂಲ ಗುಣಗಳನ್ನೇ ಈಗಲೂ ಹೊಂದಿರುತ್ತದೆ ಎಂಬುದನ್ನು ಮರೆಯುವಂತೆ ಇಲ್ಲ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ್ ಡಾ.ಮೋಹನ್ ಭಾಗವತ್ ಹೇಳಿದ್ದಾರೆ.

ಅತ್ಯಾಚಾರ: ಶಾಸಕ ರಾಹುಲ್ ಮಮ್ಕೂತಥಿಲ್ ಮತ್ತೆ ಸೆರೆ

ಪತ್ತನಂತಿಟ್ಟ: ಕೇರಳದ ಉಚ್ಚಾಟಿತ ಕಾಂಗ್ರೆಸ್ ಶಾಸಕ ರಾಹುಲ್ ಮಮ್ಕೂತಥಿಲ್‌ರನ್ನು ಮತ್ತೊಂದು ಅತ್ಯಾಚಾರ ಪ್ರಕರಣದಲ್ಲಿ ಪೊಲೀಸರು ಶನಿವಾರ ತಡರಾತ್ರಿ ಬಂಧಿಸಿದ್ದಾರೆ. ಪಾಲಕ್ಕಾಡ್‌ನ ಹೋಟೆಲ್‌ನಲ್ಲಿದ್ದ ಶಾಸಕ ರಾಹುಲ್‌ರನ್ನು ಬಂಧಿಸಿ ವಶಕ್ಕೆ ತೆಗೆದುಕೊಂಡು ಪತ್ತನಂತಿಟ್ಟದ ಎಆರ್ ಕ್ಯಾಂಪ್‌ನಲ್ಲಿ ವಿಚಾರಣೆಗೆ ಒಳಪಡಿಸಿದ್ದಾರೆ. ನಂತರ, ಭಾನುವಾರ ಬೆಳಗ್ಗೆ ತಿರುವಲ್ಲಾ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅವರೆದುರು ಹಾಜರುಪಡಿಸಿದ್ದಾರೆ. ಡಿ.12ರಂದು ಶಾಸಕ ರಾಹುಲ್ ವಿರುದ್ಧ ಮೊದಲ ಅತ್ಯಾಚಾರ ಪ್ರಕರಣ ದಾಖಲಾಗಿತ್ತು. ಮೊದಲು ತಿರುವನಂತಪುರಂ ನಗರ ಪೊಲೀಸ್ ಆಯುಕ್ತರೇ ತನಿಖೆ ಹೊಣೆ ವಹಿಸಿಕೊಂಡಿದ್ದರು. ಬಳಿಕ ತನಿಖೆಯನ್ನು ಪೊಲೀಸ್ ಕ್ರೈಮ್ ಬ್ರಾಂಚ್‌ಗೆ ವರ್ಗಾಯಿಸಲಾಗಿದೆ.

ಮದುವೆಯಾಗುವ ಭರವಸೆ ನೀಡಿ ಅತ್ಯಾಚಾರ ನಡೆಸಿ ಬಳಿಕ ಗರ್ಭಪಾತ ಮಾಡಿಸಿಕೊಳ್ಳುವಂತೆ ಶಾಸಕ ರಾಹುಲ್ ಬಲವಂತ ಮಾಡಿದ್ದಾರೆ ಎಂದು ಆರೋಪಿಸಿ 2ನೇ ಮಹಿಳೆ ದೂರಿದ್ದಾರೆ. ಈಗ ಎರಡೂ ಅತ್ಯಾಚಾರ ಪ್ರಕರಣಗಳ ತನಿಖೆಯನ್ನು ಸಹಾಯಕ ಇನ್‌ಸ್ಪೆಕ್ಟರ್ ಜನರಲ್ ಪೂಂಗುಝಲಿ ಅವರ ಉಸ್ತುವಾರಿಯಲ್ಲಿ ನಡೆಸಲಾಗುತ್ತಿದೆ. ಮೊದಲ ಪ್ರಕರಣದಲ್ಲಿ ತಿರುವನಂತಪುರಂ ಪ್ರಧಾನ ಸೆಷನ್ಸ್ ನ್ಯಾಯಾಲಯ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ್ದರಿಂದ ಶಾಸಕ ರಾಹುಲ್ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಅಮೆರಿಕ ಪ್ರವಾಸದಲ್ಲಿ ಬಾಂಗ್ಲಾ 'ಎನ್‌ಎಸ್‌ಎ'

ಢಾಕಾ: ಅಮೆರಿಕಕ್ಕೆ ಭೇಟಿ ನೀಡಿರುವ ಬಾಂಗ್ಲಾದೇಶದ ರಾಷ್ಟ್ರೀಯ ಭದ್ರತಾ ಸಲಹೆಗಾರ ಖಲೀಲುರ್ ರೆಹಮಾನ್, ವಾಷಿಂಗ್ಟನ್ ಡಿಸಿಯಲ್ಲಿ ಶನಿವಾರ ವಿದೇಶಾಂಗ ಇಲಾಖೆ ರಾಜಕೀಯ ವ್ಯವಹಾರಗಳ ಅಧೀನ ಕಾರ್ಯದರ್ಶಿ ಆಲಿಸನ್ ಹೂಕರ್ ಮತ್ತು ಸಹಾಯಕ ವಿದೇಶಾಂಗ ಕಾರ್ಯದರ್ಶಿ ಪಾಲ್ ಕಪೂರ್‌ರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಬಾಂಗ್ಲಾದೇಶದಲ್ಲಿ ಮುಂಬರಲಿರುವ ಸಾರ್ವತ್ರಿಕ ಚುನಾವಣೆ, ಅಮೆರಿಕ-ಬಾಂಗ್ಲಾದೇಶ ನಡುವಿನ ಆರ್ಥಿಕ-ವ್ಯಾಪಾರ ಸಂಬಂಧ, ರೋಹಿಂಗ್ಯಾಗಳ ಸಮಸ್ಯೆ ಮತ್ತು ಪ್ರಾದೇಶಿಕ ವಿಷಯಗಳ ಕುರಿತು ಚರ್ಚಿಸಿದರು ಎಂದು ಬಾಂಗ್ಲಾದೇಶದ ಮುಖ್ಯ ಸಲಹೆಗಾರ ಪತ್ರಿಕಾ ಹೇಳಿಕೆಯಲ್ಲಿ ಶನಿವಾರ ತಿಳಿಸಿದ್ದಾರೆ. ಬಾಂಗ್ಲಾ ಉದ್ಯಮಿಗಳು ಅಮೆರಿಕಕ್ಕೆ ಪ್ರಯಾಣಿಸಲು ಸುಗಮ ಪ್ರಕ್ರಿಯೆ ವ್ಯವಸ್ಥೆ ಮಾಡಿಕೊಡುವಂತೆ ಮತ್ತು ಬಾಂಗ್ಲಾ ಉದ್ಯಮಿಗಳಿಗೆ ಬಿ1 ಅಲ್ಪಾವಧಿ ವ್ಯಾಪಾರಿ ವೀಸಾಕ್ಕೆ ಬಾಂಡ್‌ಗಳಿಂದ ವಿನಾಯಿತಿ ನೀಡುವಂತೆ ರೆಹಮಾನ್ ವಿನಂತಿಸಿದ್ದಾರೆ. ಬಾಂಗ್ಲಾದೇಶದಿಂದ ಅಮೆರಿಕದ ಕೃಷಿ ಉತ್ಪನ್ನಗಳ ಆಮದು ಗಣನೀಯ ಪ್ರಮಾಣದಲ್ಲಿ ಹೆಚ್ಚಿದ ನಂತರ ಉಭಯ ದೇಶಗಳ ನಡುವಿನ ವ್ಯಾಪಾರ ಹೆಚ್ಚುವ ಸಾಧ್ಯತೆ ಇದೆ ಎಂದೂ ರೆಹಮಾನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತನಿಖೆಗೆ ದೀದಿ ಅಡ್ಡಿ: ಸುಪ್ರೀಂಗೆ ಇ.ಡಿ ಅರ್ಜಿ

ಕೊಲ್ಕತ್ತ: ಕಲ್ಲಿದ್ದಲು ಕಳವು ಪ್ರಕರಣ ಸಂಬಂಧ 'ಐ-ಪ್ಯಾಕ್' ಕಚೇರಿಯಲ್ಲಿ ನಡೆಸಿದ್ದ ತನಿಖೆಗೆ ಪಶ್ಚಿಮ ಬಂಗಾಳ ಸರಕಾರ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅಡ್ಡಿಪಡಿಸಿದ್ದಾರೆ. ಪ್ರಮುಖ ಸಾಕ್ಷ್ಯಗಳನ್ನೇ ಹೊತ್ತೊಯ್ದಿದ್ದಾರೆ ಎಂದು ಆರೋಪಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸುಪ್ರೀಂ ಕೋರ್ಟ್ ಗೆ ಅರ್ಜಿ ಸಲ್ಲಿಸಿದೆ. ನ್ಯಾಯಯುತ ಮತ್ತು ಸ್ವತಂತ್ರ ತನಿಖೆ ನಡೆಸುವ ಕೇಂದ್ರದ ತನಿಖಾ ಸಂಸ್ಥೆಯ ಅಧಿಕಾರಕ್ಕೇ ರಾಜ್ಯ ಸರಕಾರ ತೊಡಕು ಉಂಟು ಮಾಡಿದೆ ಎಂದೂ ಇ.ಡಿ ತನ್ನ ಅರ್ಜಿ ಯಲ್ಲಿ ಹೇಳಿದೆ. ಕೊಲ್ಕತ್ತದಲ್ಲಿರುವ ತೃಣಮೂಲ ಕಾಂಗ್ರೆಸ್ ಪಕ್ಷದ(ಟಿಎಂಸಿ) ರಾಜಕೀಯ ಸಲಹಾ ಸಂಸ್ಥೆ 'ಐ-ಪ್ಯಾಕ್' ಬಳಿ ಗೋವಾದಲ್ಲಿನ ಕಲ್ಲಿದ್ದಲು ಕಳವು ಪ್ರಕರಣದ ದಾಖಲೆಗಳಿದ್ದುದರಿಂದ ತನಿಖೆಗಾಗಿ ಐ-ಪ್ಯಾಕ್ ಕಚೇರಿ(ಸಂಸ್ಥೆಯ ಮಾಲೀಕನ ಮನೆ) ಮೇಲೆ ಇ.ಡಿ ಅಧಿಕಾರಿಗಳ ತಂಡ ಶೋಧ ನಡೆಸಿದ್ದಾಗ, ಪೊಲೀಸರೊಂದಿಗೆ ಅಲ್ಲಿಗೆ ದಿಢೀರ್ ನುಗ್ಗಿದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತನಿಖೆಗೆ ಅಡ್ಡಿಪಡಿಸಿದರು. ಅಲ್ಲದೇ, 'ಐ-ಪ್ಯಾಕ್' ಕಚೇರಿಯಲ್ಲಿದ್ದ ಪ್ರಮುಖ ದಾಖಲೆಗಳ 'ಹಸಿರು ಬಣ್ಣ'ದ ಕಡತ, ಐ-ಪ್ಯಾಕ್ ನಿರ್ದೇಶಕ ಪ್ರತೀಕ್ ಜೈನ್‌ರ ಮೊಬೈಲ್‌ಫೋನ್, ಲ್ಯಾಪ್‌ಟಾಪ್, ಕಂಪ್ಯೂಟರ್ ಹಾರ್ಡ್ ಡಿಸ್ಕ್ ಹೊತ್ತೊಯ್ದರು ಎಂದೂ ಇ.ಡಿ. ಅರ್ಜಿಯಲ್ಲಿ ವಿವರಿಸಿದೆ.

ಇಒಎಸ್-ಎನ್1 ಇಂದು ಉಡಾವಣೆ

ಶ್ರೀಹರಿಕೋಟಾ: 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ'(ಇಸ್ರೊ) ವಾಣಿಜ್ಯ ವಿಭಾಗ 'ನ್ಯೂಸ್ಪೇಸ್ ಇಂಡಿಯ ಲಿ.' (ಎನ್‌ಎಸ್‌ಐಎಲ್) 'ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್'(ಪಿಎಸ್‌ಎಲ್‌ವಿ)-ಸಿ62 ಮೂಲಕ 1 ದೇಶೀ ಮತ್ತು ವಿವಿಧ ದೇಶ-ಸಂಸ್ಥೆಗಳ 14 ಉಪಗ್ರಹಗಳು ಸೇರಿ ಒಟ್ಟಿಗೇ 15 ಉಪಗ್ರಹಗಳನ್ನು ಉಡಾವಣೆ ಮಾಡುತ್ತಿದೆ. ಆಂಧ್ರಪ್ರದೇಶದ ಕರಾವಳಿ ಭಾಗದಲ್ಲಿನ ಶ್ರೀಹರಿಕೋಟಾ ನಗರದ ಹೊರವಲಯದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಉಡಾವಣಾ ವೇದಿಕೆ-1ರಿಂದ ಪಿಎಸ್‌ಎಲ್‌ವಿ-ಸಿ62 ಮಿಷನ್ ಸೋಮವಾರ ಬೆಳಗ್ಗೆ 10.17ಕ್ಕೆ ಗಗನಕ್ಕೆ ಜಿಗಿಯಲಿದೆ ಎಂದು ಇಸ್ರೊ ತಿಳಿಸಿದೆ. ಇದು ಪಿಎಸ್‌ಎಲ್‌ವಿ ರಾಕೆಟ್‌ನ 64ನೇ ಹಾರಾಟ. 'ಇಒಎಸ್-ಎನ್ 1' ಭೂ ವೀಕ್ಷಣಾ ಉಪಗ್ರಹವನ್ನು ಥಾಯ್ಲೆಂಟ್-ಯುನೈಟೆಡ್ ಕಿಂಗ್ಡಮ್(ಯುಕೆ) ಜಂಟಿಯಾಗಿ ನಿರ್ಮಿಸಿವೆ. ಉಡಾವಣಾ ವಾಹನ ಮತ್ತು ಉಪಗ್ರಹಗಳ ಏಕೀಕರಣ ಕಾರ್ಯ ಪೂರ್ಣಗೊಂಡಿದ್ದು, ಭಾನುವಾರ ಬೆಳಗ್ಗೆಯೇ ಕೌಂಟ್‌ಡೌನ್ ಕೂಡಾ ಶುರುವಾಗಿದೆ.

ಸಮಾಚಾರ ಸಣ್ಣದಲ್ಲ

ಡಾ. ಲತಾ.ಟಿ.ಎಸ್. ಪಿಆರ್‌ಸಿಐ ಉಪಾಧ್ಯಕ್ಷೆ

ಬೆಂಗಳೂರು: ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾದ ನೂತನ ಉಪಾಧ್ಯಕ್ಷೆಯಾಗಿ ಕೆಎಸ್‌ಆರ್‌ಟಿಸಿಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಲತಾ.ಟಿಎಸ್ ಪದಗ್ರಹಣ ಮಾಡಿದರು. ಪಿಆರ್‌ಸಿಐ ಪದಗ್ರಹಣ ಮತ್ತು ಹಸ್ತಾಂತರ ಸಮಾರಂಭ ನಡೆಯಿತು. ಪಬ್ಲಿಕ್ ರಿಲೇಷನ್ಸ್ ಕೌನ್ಸಿಲ್ ಆಫ್ ಇಂಡಿಯಾ ವತಿಯಿಂದ ಬೆಂಗಳೂರು ಜೆ.ಪಿ.ನಗರ ಸಾಂಸ್ಕೃತಿಕ ಸಂಘದಲ್ಲಿ ಪದಗ್ರಹಣ ಹಾಗೂ ಅಧಿಕಾರ ಹಸ್ತಾಂತರ ಸಮಾರಂಭದಲ್ಲಿ ಡಾ. ದೇವಾನಂದ ಗೋಪಾಲ್, ಮುಖ್ಯ ಅತಿಥಿಯಾಗಿ ಎಂ.ಬಿ. ಜಯರಾಮ್ (ಚೇರ್ಮನ್ ಎಮೆರಿಟಸ್ ಮತ್ತು ಮುಖ್ಯ ಮಾರ್ಗದರ್ಶಕರು) ಹಾಗೂ ಗೀತಾ ಶಂಕರ್ ಭಾಗವಹಿಸಿದ್ದರು. ಈ ವೇಳೆ ಡಾ.ಟಿ.ವಿನಯ ಕುಮಾರ್ ಅವರು ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಹಾಗೂ ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಲತಾ ಟಿ.ಎಸ್. ಅವರು ಆಡಳಿತ ಮಂಡಳಿಯ ಉಪಾಧ್ಯಕ್ಷರಾಗಿ ಪದಗ್ರಹಣ ಮಾಡಿದರು. ಚಿನ್ಮಯಿ ಪ್ರವೀಣ್ ಕಾರ್ಯದರ್ಶಿಯಾಗಿ ಪದಗ್ರಹಣ ಮಾಡಿದರು. ಆಡಳಿತ ಮಂಡಳಿಯ ಹೆಚ್ಚುವರಿ ನಿರ್ದೇಶಕರಾಗಿ ಡಾ. ಬಿ.ಕೆ. ರವಿ (ಉಪಕುಲಪತಿ, ಉತ್ತರ ಬೆಂಗಳೂರು ವಿಶ್ವವಿದ್ಯಾಲಯ), ರವೀಂದ್ರನ್, ಸಿ.ಜೆ. ಸಿಂಗ್, ಆರ್.ಎನ್. ಮಹಾಪಾತ್ರ ಹಾಗೂ ಅರಿಜಿತ್ ಸಿಂಗ್ ಅವರು ಜವಾಬ್ದಾರಿ ಸ್ವೀಕರಿಸಿದರು. ಈ ವೇಳೆ ಡಾ. ಪ್ರಶಾಂತ್ ವೇಣುಗೋಪಾಲ್ ಅವರು ಯಂಗ್ ಕಮ್ಯುನಿಕೇಟರ್ಸ್ ಕ್ಲಬ್‌ನ ರಾಷ್ಟ್ರೀಯ ಮುಖ್ಯಸ್ಥರಾಗಿ ಹಾಗೂ ಪಶುಪತಿ ಶರ್ಮಾ ಅವರು ಪಿಆರ್‌ಸಿಐಯ ಪ್ರಧಾನ ಕಾರ್ಯದರ್ಶಿಯಾಗಿ ಪದಗ್ರಹಣ ಮಾಡಿದರು.

ಕೇಂದ್ರ ಪಾಲಿಕೆಯಲ್ಲಿ ಸಾಮೂಹಿಕ ಸ್ವಚ್ಛತೆ

ಬೆಂಗಳೂರು: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯ ಹಮ್ಮಿಕೊಳ್ಳಲಾಗಿತ್ತು. ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಪಾಲಿಕೆ ವ್ಯಾಪ್ತಿಯ 6 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ನಗರದ ಸ್ವಚ್ಛತೆ ಸುಂದರತೆ ಹಾಗೂ ನೈರ್ಮಲ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಸಿದರು. ಹಲವು ಸ್ಥಳಗಳಿಗೆ ಪರಿಶೀಲನೆಗೆ ಹೋದ ಸಂದರ್ಭದಲ್ಲಿ ಅಲ್ಲಲ್ಲಿ ಕಟ್ಟಡ ತ್ಯಾಜ್ಯ, ಬ್ಯಾನರ್‌ಗಳು, ಇನ್ನಿತರೆ ಅನುಪಯುಕ್ತ ವಸ್ತುಗಳು ರಸ್ತೆಯಲ್ಲಿ ಹಾಗೂ ಪಾದಚಾರಿಗಳಲ್ಲಿ ಹಾಕಿದ್ದು ಗಮನಿಸಿ, ಅಧಿಕಾರಿಗಳಿಗೆ ಸ್ವಚ್ಛತೆ ಕಾರ್ಯ ಕೈಗೊಳ್ಳಬೇಕು ಎಂದು ನೀಡಿದ ಸೂಚನೆಯಂತೆ ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ 6 ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾರ್ಯ ಹಮ್ಮಿಕೊಳ್ಳಲಾಗಿದೆ. ಮರದ ಒಣಗಿದ ರೆಂಬೆ ಕೊಂಬೆ ತೆರವು, ಸ್ಕೈವಾಕ್ ಸ್ವಚ್ಛತೆ, ಪಾದಚಾರಿ ಮಾರ್ಗ ಸ್ವಚ್ಛತೆ, ಒತ್ತುವರಿ ತೆರವು, ಅನಧಿಕೃತ ಕೇಬಲ್ ತೆರವು ಹಾಗೂ ಬ್ಲಾಕ್ ಸ್ಪಾಟ್‌ಗಳ ತೆರವುಗೊಳಿಸಲಾಗಿದೆ.

{ ಶಿವಲಿಂಗೇಗೌಡ } ಶಾಸಕ

ನಾನು ಕಾಂಗ್ರೆಸ್‌ಗೆ ಕದ್ದುಮುಚ್ಚಿ ಹೋಗಿಲ್ಲ. ನೀವು ರಾಜಕೀಯ ಮಾಡಿಕೊಂಡು ಹೋದ್ರಿ. ಹಾಸನ ಜಿಲ್ಲೆಯಲ್ಲಿ ಬೇರೆ ಯಾರು ಬೆಳೆಯೋದು ಬೇಡವೇ? ನಾನು ಬಂದು ಅರಸೀಕೆರೆ ಶಾಸಕನಾದಾಗ ಜೆಡಿಎಸ್ ಪಕ್ಷಕ್ಕೆ 85 ಸಾವಿರ ಮತಗಳನ್ನು ಹಾಕಿಸಿದ್ದೇನೆ. ನೀವು ಅರಸೀಕರೆಗೆ ಏನು ಮಾಡಿದ್ದೀರಿ ಎಂಬುದು ಜನರಿಗೆ ಗೊತ್ತಿದೆ.



ಸಿಎಂ ಮೇಲೆ ಹೆಚ್ಚಿದ ಸಚಿವ ಸಂಪುಟ ಪುನಾರಚನೆ ಒತ್ತಡ | ಅವಕಾಶ ಕೈತಪ್ಪುವ ಆತಂಕದಲ್ಲಿ ಆಕಾಂಕ್ಷಿಗಳು

ಸಂಕ್ರಾಂತಿ ನಂತರ ಸಂಪುಟ ಸರ್ಜರಿಗೆ ಸಿಎಂ ಸಿದ್ಧತೆ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ರಾಜ್ಯ ಸಚಿವ ಸಂಪುಟ ಪುನಾ ರಚನೆಗೆ ಸಕಲ ಸಿದ್ಧತೆ ನಡೆಯು ತ್ತಿದ್ದು, ಸುಗ್ಗಿಯ ಹಬ್ಬ ಸಂಕ್ರಾಂತಿಯ ನಂತರ ಪುನಾ ರಚನೆ ಚಟುವಟಿಕೆಗಳು ತೀವ್ರ ಗೊಳ್ಳುವ ಸಾಧ್ಯತೆ ದಟ್ಟವಾಗಿದೆ.

ಪಕ್ಷದ ಹೈಕಮಾಂಡ್ ಒಪ್ಪಿಗೆ ಸೂಚಿಸಿದರೆ ಸಂಕ್ರಾಂತಿ ಮುಗಿದ ವಾರದೊಳಗೆ 10ರಿಂದ 12 ಮಂದಿ ಶಾಸಕರು ಸಂಪುಟಕ್ಕೆ ಸೇರುವ ಸಾಧ್ಯತೆ ಹೆಚ್ಚಾಗಿದೆ. ಹೀಗಾಗಿ ಈಗಿನಿಂದಲೇ ಆಕಾಂಕ್ಷಿಗಳ ಲಾಬಿಯ ಕಣ ರಂಗೇರಲಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ. ಹಾಲಿ ಸಚಿವರು ಎರಡೂ ವರೆ ವರ್ಷ ಪೂರೈಸಿ ಸಾಕಷ್ಟು ಸಮಯ ಆಗಿರುವ ಕಾರಣ ಸಂಪುಟ ಸೇರಬಯಸುವ ಸುಮಾರು 100ಕ್ಕೂ ಹೆಚ್ಚು ಆಕಾಂಕ್ಷಿಗಳು, ಅದರೊಳಗೆ 25ಕ್ಕೂ ಅಧಿಕ ಪ್ರಬಲ ಆಕಾಂಕ್ಷಿಗಳು ಮುಖ್ಯಮಂತ್ರಿ ಸಿದ್ದರಾಮಯ್ಯರ ಮೇಲೆ ಇನ್ನಿಲ್ಲದ ಒತ್ತಡ ಹೇರಿದ್ದಾರೆ.

ನಾಯಕತ್ವ ಬದಲಾವಣೆ ಆಗುವುದೋ, ಇಲ್ಲವೋ ನಮಗೆ ಮಾತ್ರ ಸಂಪುಟದಲ್ಲಿ ಅವಕಾಶ ಕೊಡಿಸಬೇಕು, ಈ ನಿಟ್ಟಿನಲ್ಲಿ ಕೂಡಲೇ ಪಕ್ಷದ ವರಿಷ್ಠರ ಒಪ್ಪಿಗೆ ಪಡೆಯಿರಿ ಎಂದು ಸಿಎಂ ಸಿದ್ದರಾಮಯ್ಯ ಮೇಲೆ ಸಚಿವ ಆಕಾಂಕ್ಷಿಗಳು ತೀವ್ರ ಒತ್ತಡ ಹೇರಿದ್ದಾರೆ. ಇದರಿಂದ ಅನಿವಾರ್ಯ ಸ್ಥಿತಿಗೆ ಸಿಲುಕಿರುವ ಸಿಎಂ ಸಿದ್ದರಾಮಯ್ಯ ಈಗಾಗಲೇ ಪಕ್ಷದ ವರಿಷ್ಠರ ಭೇಟಿಗೆ ಸಮಯ ಕೇಳಿದ್ದಾರೆ. ಇದಕ್ಕೆ ಸ್ಪಂದನೆ ಸಿಗದ ಕಾರಣ ಈಗ ಮತ್ತೆ ಹೈಕಮಾಂಡ್ ಕದವನ್ನು ಕೊಂಚ ಜೋರಾಗಿಯೇ ತಟ್ಟಿದ್ದಾರೆ ಎಂದು ತಿಳಿದುಬಂದಿದೆ. ಇದು ಫಲ ನೀಡಿದ್ದೇ ಆದರೆ, ಸಂಕಾಂತ್ರಿ ಬಳಿಕ ಸಿದ್ದರಾಮಯ್ಯ ಅವರು ದೆಹಲಿ ಪ್ರವಾಸ ಕೈಗೊಂಡು ಸಂಪುಟ ಪುನಾರಚನೆ ಕುರಿತು ಚರ್ಚಿಸಲಿದ್ದಾರೆ. ಈ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಹಾಜರಿರುತ್ತಾರೆ ಎನ್ನಲಾಗಿದೆ.

ಇವರ ಪ್ರಸ್ತಾಪದ ನಂತರ ಪಕ್ಷದ ವರಿಷ್ಠರು ಸಂಪುಟ ಪುನಾರಚನೆಗೆ ಒಪ್ಪಿಕೊಂಡರೆ 10ರಿಂದ 15 ಮಂದಿ ಸಚಿವರಿಗೆ ಕೊಕ್ ನೀಡಿ, ಆ ಸ್ಥಾನಗಳಿಗೆ ಜಾತಿಜನಾಂಗದ ಹಾಗೂ ಪ್ರಾದೇಶಿಕವಾರು ಮತ್ತು ಯುವನಾಯಕರನ್ನು ಸಚಿವ ಸಂಪುಟಕ್ಕೆ ಸೇರಿಸುವ ಸಾಧ್ಯತೆ ಇದೆ. ಮತ್ತೊಂದು ಮೂಲಗಳು ಪ್ರಕಾರ, ಈ ಬಾರಿ ಸರ್ಜರಿಯ ಬಳಿಕ ಮುಂದಿನ 6 ತಿಂಗಳಲ್ಲಿ ಮತ್ತೊಂದು ಸುತ್ತಿನ ಸರ್ಜರಿಯಾಗುವ ಬಗ್ಗೆಯೂ ಹೈಕಮಾಂಡ್ ಚಿಂತಿಸಿದೆ ಎನ್ನಲಾಗಿದೆ. ಆ ಸಂದರ್ಭದಲ್ಲಿ ಪ್ರಥಮ ಸರ್ಜರಿಯಲ್ಲಿ ಬಚಾವ್ ಆದವರಿಗೆ ಕೊಕ್ ನೀಡಿ ಯುವಕರಿಗೆ ಅವಕಾಶ ನೀಡಿದರೂ ಅಚ್ಚರಿ ಇಲ್ಲ ಎಂದು ಕಾಂಗ್ರೆಸ್ ಉನ್ನತ ಮೂಲಗಳು ತಿಳಿಸಿವೆ.

ಸಂಕ್ರಾಂತಿಗೇ ಏಕೆ ಸಚಿವರಾಗಬೇಕು?

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಬರುವ ಮೇ ತಿಂಗಳಿಗೆ 3 ವರ್ಷ ಪೂರೈಸಲಿದೆ. ಮಾರ್ಚ್‌ನಲ್ಲಿ ಸಿದ್ದರಾಮಯ್ಯ ಅವರು ಬಜೆಟ್ ನಡೆಸಲು ಸಿದ್ಧತೆಯನ್ನೂ ನಡೆಸಿದ್ದಾರೆ. ಹೀಗಾಗಿ ಸರಕಾರ ಯಾವುದೇ ಅಡ್ಡಿ ಇಲ್ಲದೆ ಮುನ್ನಡೆದರೆ ಇನ್ನು ಎರಡು ಬಜೆಟ್ ಮಾತ್ರ ಉಳಿಯಲಿದೆ. ಆದ್ದರಿಂದ ಸಂಕ್ರಾಂತಿ ವೇಳೆಗೆ ಸಂಪುಟ ಸೇರಿ ಸಚಿವರಾದವರಿಗೆ ಮೂರು ಬಜೆಟ್ ಅವಧಿ ಸಿಗಲಿದೆ. ಒಂದೊಮ್ಮೆ ಮಾರ್ಚ್ ನಂತರ, ಅಂದರೆ ಮುಂಬರುವ ಬಜೆಟ್ ನಂತರ ಸಚಿವರಾದರೆ ಅವರಿಗೆ ಬರೀ ಎರಡೂ ಬಜೆಟ್ ಮಾತ್ರ ಸಿಗಲಿದೆ. ಇದರಲ್ಲಿ ಕೊನೆಯ ಬಜೆಟ್‌ನಲ್ಲಿ ನಿರೀಕ್ಷೆಯಂತೆ ಅನುದಾನ ಸಿಗುವುದಿಲ್ಲ, ಕೆಲಸಗಳೂ ನಡೆಯುವುದಿಲ್ಲ. ಹೀಗಾಗಿ ಮಂತ್ರಿಯಾಗುವುದಾದರೆ ಸಂಕ್ರಾಂತಿ ಒಳಗೆ ಆಗಬೇಕೆಂದು ಪ್ರಬಲ ಆಕಾಂಕ್ಷಿಗಳು ಸಿಎಂ ಮತ್ತು ಡಿಸಿಎಂ ಇಬ್ಬರಲ್ಲೂ ತೀವ್ರ ಒತ್ತಡ ಹೇರಿದ್ದಾರೆ.

ಆದರೆ ರಾಜಕೀಯ ಕ್ರಾಂತಿ ಹೆಸರಿನಲ್ಲಿ ಸಾಕಷ್ಟು ಸಮಯ ಕಳೆದಿರು ವುದರಿಂದ ಮತ್ತೆ ಸಂಪುಟ ಪುನಾರಚನೆಯನ್ನು ಮುಂದೆ ಹಾಕಲು ಸಿದ್ದರಾಮಯ್ಯ ಅವರಿಗೆ ಕಷ್ಟ ಸಾಧ್ಯವಾಗಿದೆ. ಹೀಗಾಗಿ ಸಿದ್ದರಾಮಯ್ಯ ಅವರ ಪುನಾರಚನೆ ವಿಚಾರಕ್ಕಾಗಿ ಪಕ್ಷದ ಹೈಕಮಾಂಡ್ ಆಹ್ವಾನವನ್ನು ಎದುರು ನೋಡುತ್ತಿದ್ದಾರೆ.

ಇವರಿಗೆ ಅಪಾಯ, ಅವರಿಗೆ ಅವಕಾಶ

ಒಟ್ಟು 33 ಮಂದಿಯ ಸಚಿವ ಸಂಪುಟದಲ್ಲಿ ನಾಗೇಂದ್ರ ಮತ್ತು ರಾಜಣ್ಣ ರಾಜೀನಾಮೆ ನಂತರ ಸಂಪುಟದಲ್ಲಿ 31ಮಂದಿ ಮಂತ್ರಿಗಳಿದ್ದಾರೆ. ಈ ಪಟ್ಟಿಯಲ್ಲಿ ಸಚಿವರಾದ ಡಿ. ಸುಧಾಕರ್ ಭೋಸ ರಾಜ್, ಮಂಕಾಳ ವೈದ್ಯ, ಶರಣಪ್ಪ ದರ್ಶನಾ ಪುರ, ಎಚ್.ಕೆ.ಪಾಟೀಲ್, ಭೈರತಿ ಸುರೇಶ್, ರಹೀಮ್ ಖಾನ್, ಲಕ್ಷ್ಮೀ ಹೆಬ್ಬಾಳ್ಕರ್, ಶಿವಾನಂದ ಪಾಟೀಲ್ ಸೇರಿದಂತೆ 12ರಿಂದ 15 ಮಂದಿಗೆ ಕೊಕ್ ನೀಡುವ ಚಿಂತನೆಯಲ್ಲಿ ಸಿಎಂ ಇದ್ದಾರೆ ಎನ್ನಲಾಗಿದೆ. ಅದರಲ್ಲೂ ಭ್ರಷ್ಟಾಚಾರದ ಆರೋಪ ಹೊತ್ತ ಮತ್ತು ಅಕ್ರಮಗಳಿಗೆ ಹೆಸರಾದ ಸಚಿವರನ್ನು ತೆಗೆಯಿರಿ ಎಂದು ಹೈಕಮಾಂಡ್ ಈ ಹಿಂದೆಯೇ ಸೂಚಿಸಿದ್ದರಿಂದ ಅಂಥವರಿಗೆ ಹೆಚ್ಚಿನ ಅಪಾಯ ವಿದೆ ಎಂದು ಮೂಲಗಳು ಹೇಳಿವೆ. ಅದೇ ರೀತಿ ಈ ಸ್ಥಾನಗಳಿಗೆ ಶಾಸಕರಾದ ನರೇಂದ್ರ ಸ್ವಾಮಿ, ಎಂ.ಕೃಷ್ಣಪ್ಪ, ಎ.ಎಸ್. ಪೊನ್ನಣ್ಣ, ಎನ್. ಎ. ಹ್ಯಾರೀಸ್, ಸಲೀಂ ಮಹಮ್ಮದ್, ರುದ್ರಪ್ಪ ಲಮಾಣಿ, ಟಿ.ಬಿ. ಜಯಚಂದ್ರ, ಕೆ. ಷಡಕ್ಷರಿ, ಎನ್.ವೈ. ಗೋಪಾಲ ಕೃಷ್ಣ ಹಾಗೂ ಬಿ.ಕೆ. ಹರಿ ಪ್ರಸಾದ್ ಸೇರಿದಂತೆ ಅನೇಕರು ಪ್ರಯತ್ನಿಸು ತ್ತಿದ್ದು, ಇವರಲ್ಲಿ ಬಹುತೇಕರಿಗೆ ಅವಕಾಶ ಸಿಗುವ ಸಂಭವವಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಛಲಬಿಡದ ಸತತ ಪ್ರಯತ್ನ ಮುಖ್ಯ: ಎಂ.ವಿ.ರಾಜೀವ್ ಗೌಡ

ಬೆಂಗಳೂರು: ಜೀವನದಲ್ಲಿ ಉನ್ನತ ಗುರಿ ಹೊಂದಲು ವಿದ್ಯಾರ್ಥಿಗಳಲ್ಲಿ ಸತತ ಪ್ರಯತ್ನ ಮುಖ್ಯಮಂತ್ರಿ ಮಾಜಿ ರಾಜ್ಯಸಭಾ ಸದಸ್ಯ ಪ್ರೊ. ಎಂ.ವಿ ರಾಜೀವ್ ಗೌಡ ಅಭಿಪ್ರಾಯಪಟ್ಟರು.

ಬಾಲ್ಕ್ ಸಂಕಲ್ಪ 2026, ಸ್ವಾಮಿ ವಿವೇಕಾನಂದ ಜಯಂತಿ, ರಾಷ್ಟ್ರಕವಿ ಕುವೆಂಪು ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ಗಳು ಜೀವನದಲ್ಲಿ ಉನ್ನತ ಗುರಿಗಳನ್ನು ಹೊಂದು ವುದು ಮಾತ್ರವಲ್ಲ, ಮಹತ್ವಾಕಾಂಕ್ಷೆಗಳಿಗೆ ಕಾವಲಾಗಿ ನಿಂತು, ಛಲಬಿಡದ ಸತತ ಪ್ರಯತ್ನ ದಿಂದ ಯಶಸ್ಸನ್ನು ಕಲ್ಪಿಸಿಕೊಳ್ಳಬೇಕು. ಇಂದಿನ ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆಯನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವ ಮೂಲಕ, ಬಾಲ್ಕ್ ಸಂಸ್ಥೆಯು ಮುಂದಿನ ಹಂತಕ್ಕೆ ಬೆಳೆದು ರಾಜ್ಯ ಹಾಗೂ ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿ ಎಂದರು.

ಐಪಿಎಸ್ ಅಧಿಕಾರಿ ಅಹ್ಮದ್ ಅಸಾದ್ ಮಾತನಾಡಿ, ಬಾಲ್ಕ್ ವಿದ್ಯಾರ್ಥಿಗಳು ಕೇವಲ ಗುರಿ ಹೊಂದುವುದಷ್ಟೇ ಅಲ್ಲ, ಬದುಕಿನಲ್ಲಿ ಶ್ರೇಷ್ಠ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸ್ವಾಮಿ ವಿವೇಕಾನಂದರಂತೆ ಮೇರು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ನಿಮ್ಮ ಸಕಾರಾತ್ಮಕ ಬೆಳವಣಿಗೆ ಮತ್ತು ಸಾಧನೆಯನ್ನು ಕಂಡು ನಿಮ್ಮ ಪೋಷಕರು ಸಮಾಜದಲ್ಲಿ ಹೆಮ್ಮೆಯಿಂದ ತಲೆ ಎತ್ತಿ ನಿಲ್ಲುವಂತೆ ನೀವು ಬಾಳಿ ತೋರಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಬಾಲ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಎನ್. ನಟರಾಜ್ ಗೌಡ, ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ, ಗ್ರೇಟರ್ ಬೆಂಗಳೂರು ಐಟಿ ಕಂಪನಿಗಳು ಮತ್ತು ಕೈಗಾರಿಕೆಗಳ ಸಂಘದ ಮುಖ್ಯ ಕಾರ್ಯದರ್ಶಿ ಗಿರೀಶ್, ಅಧ್ಯಕ್ಷ ಅಧಿತ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬಾಲ್ಕ್ ಸಂಕಲ್ಪ 2026 ಕಾರ್ಯಕ್ರಮದಲ್ಲಿ ಮಾಜಿ ರಾಜ್ಯಸಭಾ ಸದಸ್ಯ ಪ್ರೊ. ಎಂ.ವಿ. ರಾಜೀವ್ ಗೌಡ, ಐಪಿಎಸ್ ಅಧಿಕಾರಿ ಅಹ್ಮದ್ ಅಸಾದ್, ಬಾಲ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಎನ್. ನಟರಾಜ್ ಗೌಡ, ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ, ಗ್ರೇಟರ್ ಬೆಂಗಳೂರು ಐಟಿ ಕಂಪನಿಗಳು ಮತ್ತು ಕೈಗಾರಿಕೆಗಳ ಸಂಘದ ಮುಖ್ಯ ಕಾರ್ಯದರ್ಶಿ ಗಿರೀಶ್, ಅಧ್ಯಕ್ಷ ಅಧಿತ್ಯ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಗರದಲ್ಲಿ ಮುಂದುವರಿದ ಚಳಿ, ತುಂತುರು ಮಳೆ

ಬೆಂಗಳೂರು: ನಗರದಲ್ಲಿ ಮುಂದಿನ ಎರಡು ದಿನಗಳವರೆಗೆ ಹಗುರ ಮಳೆಯಾಗುವ ನಿರೀಕೆಯಿದ್ದು, ತಾಪಮಾನ ಕಡಿಮೆಯಾಗುವ ನಿರೀಕ್ಷೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ನಗರದ ತಾಪಮಾನದಲ್ಲಿ ಇಳಿಕೆ ಕಂಡುಬರುತ್ತಿದ್ದು, ಇದೇ ರೀತಿಯ ಹವಾಮಾನ ಪರಿಸ್ಥಿತಿ ಮುಂದುವರಿಯಲಿದೆ. ಇಂದಿನಿಂದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಹಗುರದಿಂದ ಮಧ್ಯಮ ಮಳೆಯಾಗುವ ಸಾಧ್ಯತೆ ಇದೆ. ಮಳೆಯ ಜತೆಗೆ ತಂಪಾದ ಗಾಳಿಯ ಪ್ರಭಾವ ಹೆಚ್ಚಾಗುವ ಕಾರಣ ಗರಿಷ್ಠ ಹಾಗೂ ಕನಿಷ್ಠ ತಾಪಮಾನದಲ್ಲಿ ಇಳಿಕೆ ಕಂಡುಬರುವ ನಿರೀಕ್ಷೆಯಿದೆ. ವಿಶೇಷವಾಗಿ ಬೆಳಗ್ಗೆ ಹಾಗೂ ರಾತ್ರಿ ವೇಳೆ ಚಳಿ ಹೆಚ್ಚು ಅನುಭವವಾಗುವ ಸಾಧ್ಯತೆ ಇದೆ. ಮಳೆ ಹಾಗೂ ಮೋಡಗಳ ಕಾರಣದಿಂದ ಕೆಲವಡೆ ರಸ್ತೆಗಳು ಒದ್ದೆಯಾಗುವ ಸಾಧ್ಯತೆ ಇದ್ದು, ವಾಹನ ಸಂಚಾರದಲ್ಲಿ ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಒಟ್ಟಾರೆ, ಬೆಂಗಳೂರು ಮತ್ತು ಸುತ್ತಮುತ್ತಲ ಜಿಲ್ಲೆಗಳಲ್ಲಿ ಮುಂದಿನ ಎರಡು ದಿನಗಳು ಮಳೆ-ಚಳಿ ಮಿಶ್ರಿತ ವಾತಾವರಣ ಮುಂದುವರಿಯಲಿದೆ ಎಂದು ಇಲಾಖೆ ಹೇಳಿದೆ.

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಎಳ್ಳು, ಬೆಲ್ಲ, ಕೊಬ್ಬರಿ ಖರೀದಿ ಜೋರು.

ಚಿತ್ರ: ಸುಧಾಕರ ದೇವರಾಜ್

ಪೂರ್ವ ಭಾರತಕ್ಕೆ ರೈಲು ಸಂಪರ್ಕ ಹೆಚ್ಚಳ: ಸೋಮಣ್ಣ

ಬೆಂಗಳೂರು: ಬೆಂಗಳೂರಿನಿಂದ ಭಾರತದ ಪೂರ್ವ ಭಾಗಕ್ಕೆ ರೈಲ್ವೆ ಸಂಪರ್ಕ ಹೆಚ್ಚಿಸಲಾಗಿದೆ ಎಂದು ಕೇಂದ್ರ ಸಚಿವ ವಿ ಸೋಮಣ್ಣ ಅವರು ಹಂಚಿಕೊಂಡಿದ್ದು, ಕನ್ನಡಿಗರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಬೆಂಗಳೂರು ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ರೈಲು ಸಂಖ್ಯೆ ಹೆಚ್ಚಳವಾಗಿಲ್ಲ. ಉತ್ತರ ಕರ್ನಾಟಕ ಹಾಗೂ ಬೆಂಗಳೂರಿನ ನಡುವೆ ರೈಲುಗಳ ಸಂಖ್ಯೆ ಹೆಚ್ಚಳ ಮಾಡಬೇಕು ಎಂದು ಕನ್ನಡಿಗರು ಆಗ್ರಹಿಸುತ್ತಿದ್ದು, ಆದರೆ ಈ ರೀತಿ ಇರುವಾಗ ಬೆಂಗಳೂರಿನಿಂದ ಭಾರತದ ಪೂರ್ವ ಭಾಗಕ್ಕೆ ರೈಲುಗಳ ಸಂಖ್ಯೆ ಹೆಚ್ಚಳ ಮಾಡಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಬೆಂಗಳೂರಿನಿಂದ ಭಾರತದ ಪೂರ್ವ ಭಾಗಕ್ಕೆ ರೈಲ್ವೆ ಸಂಪರ್ಕ ಹೆಚ್ಚಿಸಲಾಗಿದ್ದು, ಪಶ್ಚಿಮ ಬಂಗಾಳದ ಬಾಲೂರ್‌ಘಾಟ್ ಮತ್ತು ರಾಧಿಕಾಪುರವನ್ನು ಸಂಪರ್ಕಿಸುವ ಎರಡು ಎಕ್ಸ್‌ಪ್ರೆಸ್ ರೈಲುಗಳ ಜತೆಗೆ ಬೆಂಗಳೂರಿನಿಂದ ಅಲಿಪುರ್ ದುವಾರ್‌ಗೆ ಒಂದು ಅಮೃತ್ ಭಾರತ್ ಎಕ್ಸ್‌ಪ್ರೆಸ್‌ನ್ನು ಆರಂಭಿಸಲಾಗುತ್ತಿದೆ ಎಂದು ಹೇಳಿದ್ದಾರೆ.

ಚಿದಾನಂದಮೂರ್ತಿ, ಭೈರಪ್ಪ ಕನ್ನಡಕ್ಕೆ ಮಿಡಿದವರು: ಸಿದ್ದರಾಮಯ್ಯ

ಬೆಂಗಳೂರು: ಪ್ರಾಮಾಣಿಕ ಸಂಶೋಧನೆಗೆ ಹೆಸರಾಗಿದ್ದ ಎಂ.ಚಿದಾನಂದಮೂರ್ತಿ ಮತ್ತು ತಮ್ಮ ಕಾದಂಬರಿಗಳ ಮೂಲಕ ಅಪಾರ ಓದುಗರನ್ನು ಸೃಷ್ಟಿಸಿದ ಎಸ್.ಎಲ್ ಭೈರಪ್ಪ ಇಬ್ಬರೂ ಕನ್ನಡ ಮತ್ತು ಕನ್ನಡಿಗರ ಪರವಾಗಿ ಮಿಡಿದವರಾಗಿದ್ದಾರೆ ಎಂದು ಹಿರಿಯ ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ತಿಳಿಸಿದರು.

ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ ಮತ್ತು ಸಪ್ನ ವತಿಯಿಂದ ಆಯೋಜಿಸಿದ್ದ ಚಿದಾನಂದಮೂರ್ತಿ ಸಂಸ್ಮರಣೆ ಮತ್ತು ಎಸ್.ಎಲ್ .ಭೈರಪ್ಪ ನೆನಪು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊದಲು ಕೇವಲ 12 ಪುಟಗಳ ಕರಪತ್ರದ ರೂಪದಲ್ಲಿ ಬಂದ 'ಕನ್ನಡ-ಕನ್ನಡಿಗ-ಕರ್ನಾಟಕ'ವು ಈಗ 480 ಪುಟಗಳ ಸಮಗ್ರ ಸಂಪುಟದ ಮಟ್ಟಕ್ಕೆ ಬೆಳೆದಿರುವುದು ಅದರ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಇದರಲ್ಲಿ ಕನ್ನಡಿಗರ ಹಿತದೃಷ್ಟಿಯಿಂದ ಆಗಬೇಕಾದ ಕೆಲಸಗಳು ಏನೇನು ಎಂಬುದು ಗೊತ್ತಾಗುತ್ತದೆ ಎಂದರು.

ಚಿದಾನಂದಮೂರ್ತಿಗಳು ಗುರುವಿನ ಸ್ಥಾನದ ಮೌಲ್ಯಗಳ ಮೂರ್ತಿರೂಪದಂತೆ ಬಾಳಿ ಬದುಕಿದರು. ಅವರು ಪ್ರಾಮಾಣಿಕತೆ, ಅಧಿಕಾರ ನಿರ್ಲಿಪ್ತಿ ಇವುಗಳಿಗೆ ಹೆಸರಾಗಿದ್ದರು. ಒಕ್ಕೂಟ ಧರ್ಮಕ್ಕೆ ಅಪಾಯ ಬಂದಿರುವ ಸಂದರ್ಭದಲ್ಲಿ ಇಂತಹ ಕೃತಿಗಳು ನೆರವಿಗೆ ಬರುತ್ತವೆ ಎಂದರು.

ಸಂಶೋಧಕ ಡಾ.ಆರ್ ಶೇಷಶಾಸ್ತ್ರಿ ಮಾತನಾಡಿ, ಚಿದಾನಂದಮೂರ್ತಿಗಳು ಖಚಿತ ಪುರಾವೆಗಳನ್ನು ಆಧರಿಸಿ ಸಂಶೋಧನೆ ನಡೆಸುತ್ತಿದ್ದರು. ಇನ್ನೊಬ್ಬರ ಅಭಿಪ್ರಾಯವನ್ನು ಯಾವತ್ತೂ ತಮ್ಮದೆಂದು ಹೇಳಿಕೊಳ್ಳುತ್ತಿರಲಿಲ್ಲ. ಇಡೀ ಕರ್ನಾಟಕಕ್ಕೆ ಸಂಬಂಧಿಸಿದ ಬಹುಮುಖಿ ಧಾರೆಗಳ ಪರಿಪೂರ್ಣ ಗ್ರಂಥಾಲಯ ಸ್ಥಾಪಿಸಬೇಕು ಎಂಬ ಕನಸು ಹೊಂದಿದ್ದರ ಅದನ್ನು ಸರಕಾರ ಈಡೇರಿಸಬೇಕು ಎಂದರು.

ಈ ವೇಳೆ ಕಾರ್ಯಕ್ರಮದಲ್ಲಿ ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ.ಚಂದ್ರಶೇಖರ್, ಅನುವಾದಕ ಬಿ.ಎಸ್. ಜಯಪ್ರಕಾಶ್ ನಾರಾಯಣ, ಕನ್ನಡ ಹೋರಾಟಗಾರ ಮ. ಚಂದ್ರಶೇಖರ್, ಲೇಖಕ ಕೆ.ಎನ್.ಭಗವಾನ್, ಬೆ. ರಾ.ನಾಗರಾಜ್, ರಮೇಶ್ ಬಾಬು, ಸುರೇಶ್, ಸಪ್ನ ಪುಸ್ತಕ ಮಳಿಗೆಯ ಕನ್ನಡ ವಿಭಾಗದ ಮುಖ್ಯಸ್ಥ ಆರ್.ದೊಡ್ಡೇಗೌಡ ಸೇರಿದಂತೆ ಇನ್ನಿತತರು ಉಪಸ್ಥಿತರಿದ್ದರು.



ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ ಮತ್ತು ಸಪ್ನ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ-ಕನ್ನಡಿಗ- ಕರ್ನಾಟಕ ಕೃತಿಯ 17ನೇ ಮುದ್ರಣ ಬಿಡುಗಡೆ ಮಾಡಲಾಯಿತು. ಹಿರಿಯ ಕವಿ ಎಸ್.ಜಿ. ಸಿದ್ದರಾಮಯ್ಯ, ಸಂಶೋಧಕ ಡಾ.ಆರ್ ಶೇಷಶಾಸ್ತ್ರಿ ವ.ಚ.ಚನ್ನೇಗೌಡ, ರಾ.ನಂ.ಚಂದ್ರಶೇಖರ್, ಬಿ.ಎಸ್. ಜಯಪ್ರಕಾಶ ನಾರಾಯಣ ಇದ್ದರು.

ಕೇಂದ್ರ, ಪೂರ್ವಭಾವಿ ಬಜೆಟ್‌ನಲ್ಲಿ ರಾಜ್ಯದ ಪರವಾಗಿ ಬೇಡಿಕೆ

ತುಂಬಾಕು ಸೆಸ್‌ನಲ್ಲಿ ಸಮಪಾಲು ನೀಡಿ

ಬೆಂಗಳೂರು: ಕೇಂದ್ರ ಚುನಾವಣಾ ಬಜೆಟ್‌ಗೆ ಕೇಂದ್ರ ಸರಕಾರ ಸಿದ್ಧತೆಯ ನಡುವೆಯೇ, ಕರ್ನಾಟಕ ಸರಕಾರದಿಂದ ತಂಬಾಕು ಹಾಗೂ ಪಾನ್ ಮಸಾಲ ಮೇಲಿನ ಸುಂಕದಲ್ಲಿ ಪಾಲು ನೀಡಬೇಕೆಂಬ ಬೇಡಿಕೆ ಸಲ್ಲಿಕೆಯಾಗಿದೆ.

ಕೇಂದ್ರ ಆರ್ಥಿಕ ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ಶನಿವಾರ ದೆಹಲಿಯಲ್ಲಿ ನಡೆದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ರಾಜ್ಯದ ಹಲವು ಬೇಡಿಕೆಗಳನ್ನು ಮುಂದಿಟ್ಟರು. ಪ್ರಮುಖವಾಗಿ ಜಿಎಸ್‌ಟಿ ಸರಳೀಕರಣದಿಂದ ರಾಜ್ಯಗಳ ಆದಾಯಕ್ಕೆ ಹೊಡೆತ ಬೀಳುತ್ತಿದೆ. ಆದ್ದರಿಂದ ಇದನ್ನು ಸರಿದೂಗಿಸಲು ಕೇಂದ್ರ ಸರಕಾರ ಕ್ರಮ ವಹಿಸಬೇಕು ಎನ್ನುವ ಒತ್ತಡವನ್ನು ಹೇರಿ ದ್ದಾರೆ. ಪ್ರಮುಖವಾಗಿ ಜಿಎಸ್‌ಟಿ ದರ ಬದಲಾವಣೆ, ಹವಾಮಾನ ವೈಪರೀತ್ಯ, ಹೆಚ್ಚುತ್ತಿರುವ ಸಾಮಾಜಿಕ ಬದ್ಧತೆ ಹಾಗೂ ವೇಗದ ನಗರೀಕರಣದಿಂದ ಹಣಕಾಸು ಸ್ಥಿತಿ ಸಂಕೀರ್ಣಗೊಳ್ಳುತ್ತಿದೆ. ರಾಜ್ಯಗಳ ಹೊಣೆ ಗಾರಿಕೆಗಳು ಅವುಗಳ ಆದಾಯಗಳಿಗಿಂತ ವೇಗವಾಗಿ ವಿಸ್ತರಿಸಿಕೊಂಡಿದ್ದು, 2026-27 ಬಜೆಟ್‌ನಲ್ಲಿ ಸರಿಯಾದ ಹಣಕಾಸು ಉಪಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯ ಇದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಾಕಿ ಹಣ ಬಿಡುಗಡೆಗೆ ಮನವಿ: ಕೇಂದ್ರ ಸರಕಾರದಿಂದ ಜಲಜೀವನ ಮಿಷನ್ ಯೋಜನೆಯನ್ನು ಕರ್ನಾಟಕದಲ್ಲಿ ಯಶಸ್ವಿ ಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ ಕೇಂದ್ರ ಸರಕಾರದಿಂದ ಈವರೆಗೆ 11,786 ಕೋಟಿ ಹಣ ಬಿಡುಗಡೆ ಮಾಡಿದ್ದರೆ, ರಾಜ್ಯ ಸರಕಾರ 24,598 ಕೋಟಿ ರು. ಹಣ ಬಿಡುಗಡೆ ಮಾಡಿದೆ. ಯೋಜನೆ ಅನುಷ್ಠಾನಕ್ಕೆ ಅಡ್ಡಿಯಾಗದಂತೆ ರಾಜ್ಯ ಸರಕಾರ ಮುಂಗಡವಾಗಿ ಹೆಚ್ಚುವರಿ 13,004 ಕೋಟಿ ರು. ಬಿಡುಗಡೆ ಮಾಡಿ ಎಂದು ಕೋರಿದ್ದಾರೆ.

ಜಿ ರಾಮ್ ಜಿ ಯೋಜನೆ ಮರುಪರಿಶೀಲಿಸಲು ಮನವಿ

ಬೇಡಿಕೆ ಆಧಾರಿತ ಮನರೇಗಾ ಯೋಜನೆಯಿಂದ, ಅನುದಾನ ಹಂಚಿಕೆಯ ಜಿ ರಾಮ್ ಜಿ ಯೋಜನೆಗೆ ಬದಲಾಯಿಸುವುದರಿಂದ ಉದ್ಯೋಗ ದಿನಗಳು ಕಡಿಮೆಯಾಗಿವೆ. ಇದರಿಂದಾಗಿ 13 ಕೋಟಿ ಮಾನವ ದಿನಗಳ ಜೀವನೋಪಾಯ ಭದ್ರತೆಯನ್ನು ಒದಗಿಸುವುದನ್ನು ಮುಂದುವರಿಸಲು, ಕರ್ನಾಟಕಕ್ಕೆ ಸುಮಾರು 2,000 ಕೋಟಿ ರು.ಗಳು ಬೇಕಾಗುತ್ತವೆ. ಇದನ್ನು ಒದಗಿಸಲು ವಿತ್ತೀಯ ಅವಕಾಶವಿರುವುದಿಲ್ಲ. ಅಲ್ಲದೆ ವಿ ಬಿ ರಾಮ್‌ಜಿ ಯೋಜನೆಯಲ್ಲಿ ರಾಜ್ಯಗಳು ಕೂಡಾ ಅನುದಾನ ಹಂಚಿಕೆ ಮಾಡಬೇಕಾಗಿದ್ದು, ರಾಜ್ಯದ ಹೊರೆಯನ್ನು ಇದು ಹೆಚ್ಚಿಸಿದೆ. ಆದ್ದರಿಂದ ಯೋಜನಾ ವಿನ್ಯಾಸವನ್ನು ಮರುಪರಿಶೀಲಿಸಿ, ಬೇಡಿಕೆ ಆಧಾರಿತ ಉದ್ಯೋಗ ವ್ಯವಸ್ಥೆಯನ್ನು ಪುನಃ ಸ್ಥಾಪಿಸಿ, ಸಮರ್ಪಕ ಮತ್ತು ಮಿತಿರಹಿತ ಕೇಂದ್ರ ಅನುದಾನ ಒದಗಿಸುವಂತೆ ವಿನಂತಿಸಿದ್ದಾರೆ.

ರಾಜ್ಯದಿಂದ ಸಲ್ಲಿಕೆಯಾದ ಇತರೆ ಬೇಡಿಕೆ

- ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಅಡುಗೆ ಸಿಬ್ಬಂದಿ ಸಹಾಯಕಿಯರಿಗೆ ಕೇಂದ್ರ ಸರಕಾರದ ಗೌರವಧನ ಹೆಚ್ಚಾಗಿಲ್ಲ
- ಕೇಂದ್ರ ಪಾಲನ್ನು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ತಿಂಗಳಿಗೆ 8,000 ರು. ಅಡುಗೆ ಸಿಬ್ಬಂದಿ ಮತ್ತು ಸಹಾಯಕಿಯರಿಗೆ ತಿಂಗಳಿಗೆ 5,000 ರು. ಹೆಚ್ಚಿಸಬೇಕು.
- 2023-24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಘೋಷಿಸಿದಂತೆ ಭದ್ರ ಮೇಲ್ದಂಡೆ ಯೋಜನೆಗೆ 5,300 ಕೋಟಿ ರು.ಬಿಡುಗಡೆಗೆ ಮನವಿ
- 15ನೇ ಹಣಕಾಸು ಆಯೋಗದ ಬಾಕಿ ಅನುದಾನ ಮತ್ತು ವಿಪತ್ತು ಪರಿಹಾರ ಮೊತ್ತಗಳನ್ನು ತ್ವರಿತವಾಗಿ ಬಿಡುಗಡೆಗೊಳಿಸಿ
- ವಿಶೇಷ ಅನುದಾನ 5,495 ಕೋಟಿ, ರಾಜ್ಯ ಕೇಂದ್ರಿತ ಅನುದಾನ 6,000 ಕೋಟಿ, 15ನೇ ಹಣಕಾಸು ಆಯೋಗದ ಅನುದಾನ ಕೊರತೆ 4,044 ಕೋಟಿ ಬಾಕಿ ಬಿಡುಗಡೆಗೊಳಿಸಿ
- ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕಲ್ಯಾಣ ಕರ್ನಾಟಕ ಕಡಿಮೆ ಅಂಕ ಹೊಂದಿದ್ದು, ಉತ್ತಮಗೊಳಿಸಲು ವಾರ್ಷಿಕ 5,000 ಕೋಟಿ ಅನುದಾನ ನೀಡಿ

ಮಕ್ಕಳ ಏಕಾಗ್ರತೆ, ಸಹನೆ ಮತ್ತು ಗಣಿತ ಕೌಶಲ್ಯವೃದ್ಧಿಗೆ ಅಬಾಕಸ್ ಪಾತ್ರ ಪ್ರಮುಖ

ಅಬಾಕಸ್‌ನಿಂದ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಳ: ನರೇಂದ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮಕ್ಕಳ ಏಕಾಗ್ರತೆ, ಸಹನೆ ಮತ್ತು ಗಣಿತ ಕೌಶಲ್ಯವೃದ್ಧಿಗೆ ಅಬಾಕಸ್ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಎಸ್‌ಐಪಿ ಅಬಾಕಸ್ ಸಂಸ್ಥೆಯ ರಾಜ್ಯ ಮುಖ್ಯಸ್ಥ ನರೇಂದ್ರ ತಿಳಿಸಿದರು.

ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯ ಮಟ್ಟದ 20ನೇ ಅಬಾಕಸ್ ಬೌದ್ಧಿಕ ಅಂಕ ಗಣಿತ ಸ್ಪರ್ಧೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳ ಪ್ರತಿಭೆ ಮತ್ತು ಮಾನಸಿಕ ಬೆಳವಣಿಗೆಗೆ ಪೂರಕವಾಗಿ ಇತ್ತೀಚಿನ ದಿನಗಳಲ್ಲಿ ಅಬಾಕಸ್ ಪದ್ಧತಿಯ ಮೂಲಕ ಕಲಿಕಾ ಸಾಮರ್ಥ್ಯ ಹೆಚ್ಚಾಗುತ್ತಿರುವುದು ಗಮನಾರ್ಹ. ಅಬಾಕಸ್‌ನಿಂದ ಜ್ಞಾಪಕ ಶಕ್ತಿ ಹೆಚ್ಚಳ, ತಾರ್ಕಿಕ ಶಕ್ತಿ ಮತ್ತು ಕಲಾತ್ಮಕ ಗುಣಗಳ ಬೆಳವಣಿಗೆ, ಭಯ, ಆತಂಕ ನಿವಾರಣೆ ಆಗಲಿದೆ ಎಂದರು.

ರಾಜ್ಯಾದ್ಯಂತ ಇರುವ 87 ಕೇಂದ್ರಗಳಿಂದ ಸುಮಾರು 4,100 ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

2 ಹಂತದಲ್ಲಿ ತಲಾ 2,050 ಮಕ್ಕಳ ಸ್ಪರ್ಧೆ ಎದುರಿಸಿದ್ದು, ಐದು ನಿಮಿಷ ಗಳಲ್ಲಿ ಮಕ್ಕಳು ಅಬಾಕಸ್ ಬಳಸಿ ಸುಮಾರು 100 ಲೆಕ್ಕಗಳನ್ನು, ಅಬಾಕಸ್ ಇಲ್ಲದೆ ದೃಶ್ಯ ಪದ್ಧತಿಯಲ್ಲಿ 120 ಲೆಕ್ಕಗಳನ್ನು ಹಾಗೂ ಗುಣಾಕಾರ-ಭಾಗಾಕಾರದಲ್ಲಿ 140 ಲೆಕ್ಕಗಳನ್ನು ಮಾಡಿ ಒಟ್ಟು ಸುಮಾರು 360 ಲೆಕ್ಕಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯ ಪ್ರದರ್ಶಿಸಿ ದ್ದಾರೆ. ಇಂತಹ ದೊಡ್ಡ ಮಟ್ಟದ ಸ್ಪರ್ಧೆಯನ್ನು ಆಯೋಜಿಸಿ ಅದೇ ದಿನ ಮೌಲ್ಯಮಾಪನ ಮತ್ತು ಬಹುಮಾನ ವಿತರಣೆ ಮಾಡಿದಕ್ಕಾಗಿ ಸಂಸ್ಥೆಗೆ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಗೌರವವೂ ಲಭಿಸಿದೆ ಎಂದರು.

ಎಸ್‌ಐಪಿ ಸಂಸ್ಥೆಯ ವಿಜಯನಗರ ಮತ್ತು ನಾಗರಬಾವಿ ಕೇಂದ್ರಗಳ ಮುಖ್ಯಸ್ಥ ದಿನೇಶ್ ಕುಮಾರ್ ಮಾತನಾಡಿ, ಅಬಾಕಸ್ ತರಬೇತಿ ಮಕ್ಕಳಲ್ಲಿ ಏಕಾಗ್ರತೆ, ಶ್ರವಣಶಕ್ತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ. ಒಂದೂವರೆ ವರ್ಷದಲ್ಲಿ ಮಕ್ಕಳ ಸಾಮರ್ಥ್ಯ ಐದು ಪಟ್ಟು ಹೆಚ್ಚಾಗುತ್ತದೆ.

ಮೂರುವರೆ ವರ್ಷದ ಕೋರ್ಸ್ ಮುಗಿಸಿದ ಬಳಿಕ ಮಕ್ಕಳಿಗೆ ಮುಂದಿನ ವಿದ್ಯಾಭ್ಯಾಸದಲ್ಲಿ ಟ್ಯೂಷನ್ ಅಗತ್ಯವಿಲ್ಲದ ಮಟ್ಟಿಗೆ ಅವರು ಸ್ವಾವಲಂಬಿ ಗಳಾಗುತ್ತಾರೆ ಎಂದರು.

ಇಂದಿನ ದಿನಗಳಲ್ಲಿ ಮಕ್ಕಳಲ್ಲಿ ಏಕಾಗ್ರತೆಯ ಕೊರತೆ ಹಾಗೂ ಸಾಮಾಜಿಕ ಜಾಲತಾಣದ ಪ್ರಭಾವ ಹೆಚ್ಚಾಗುತ್ತಿರುವ ನಡುವೆಯ, ಅಬಾಕಸ್ ತರಬೇತಿ ಮಕ್ಕಳ ಅಕಾಡೆಮಿಕ್ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸುತ್ತಿದೆ. ಭವಿಷ್ಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಬರವಣಿಗೆ ವೇಳೆ ಸಮಯ ನಿರ್ವಹಣೆ ಬಹಳ ಮುಖ್ಯ. ಮೂರು ಗಂಟೆಯ ಪರೀಕ್ಷೆ ಒಂದು ಗಂಟೆಯೊಳಗೆ ಮುಗಿಸುವ ಮಟ್ಟಿಗೆ ಮಕ್ಕಳ ಸಾಮರ್ಥ್ಯವು ಅಬಾಕಸ್ ಹೆಚ್ಚುತ್ತದೆ.

- ರವಿ ಶೀಲವಂತ,
ಪ್ರತಿನಿಧಿ ಎಸ್‌ಐಪಿ ಕಲಬುರಗಿ ಕೇಂದ್ರ

ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ 20ನೇ ಅಬಾಕಸ್ ಬೌದ್ಧಿಕ ಅಂಕಗಣಿತ ಸ್ಪರ್ಧೆಯನ್ನು ಎಸ್‌ಐಪಿ ಅಬಾಕಸ್ ಸಂಸ್ಥೆಯ ರಾಜ್ಯ ಮುಖ್ಯಸ್ಥ ನರೇಂದ್ರ ಉದ್ಘಾಟಿಸಿದರು. ಎಸ್‌ಐಪಿ ಸಂಸ್ಥೆಯ ವಿಜಯನಗರ ಮತ್ತು ನಾಗರಬಾವಿ ಕೇಂದ್ರಗಳ ಮುಖ್ಯಸ್ಥ ದಿನೇಶ್ ಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಆರ್‌ಸಿಬಿಯ ಪೂಜಾ ವಸ್ತ್ರಕರ್ ಗಾಯಾಳು

ಮುಂಬೈ: ಆರ್‌ಸಿಬಿ ತಂಡವು ಮುಂಬೈ ವಿರುದ್ಧ ರೋಚಕ ಗೆಲುವಿನ ಸಂಭ್ರಮದ ಬಳಿಕ ತಂಡಕ್ಕೆ ಭಾರೀ ಹಿನ್ನಡೆ ಯಾಗಿದೆ. ತಂಡದ ಆಟಗಾರ್ತಿ ಪೂಜಾ ವಸ್ತ್ರಕರ್ ಗಾಯ ಗೊಂಡು ಆವೃತ್ತಿಯ ಅರ್ಧ ಟೂರ್ನಿಯಿಂದ ಹೊರಗುಳಿ

ಯುವಂತಾಗಿದೆ. ಮಂಡಿನೋವಿನಿಂದ ಗಾಯಗೊಂಡಿರುವ ಪೂಜಾ ಅವರು ಸಂಪೂರ್ಣವಾಗಿ ಚೇತರಿಸಿಕೊಳ್ಳಲು ಕನಿಷ್ಠ ಎರಡು ವಾರ ಬೇಕಾಗುತ್ತದೆ. ಈ ವರ್ಷ ಆರ್‌ಸಿಬಿ ಹರಾಜಿನಲ್ಲಿ 85 ಲಕ್ಷ ಖರ್ಚು ಮಾಡುವ ಮೂಲಕ ಪೂಜಾ ವಸ್ತ್ರಕರ್ ಅವರನ್ನು ತನ್ನ ತಂಡಕ್ಕೆ ಸೇರಿಸಿಕೊಂಡಿದೆ. ಕಳೆದ ಆವೃತ್ತಿಯಲ್ಲಿ ಪೂಜಾ ವಸ್ತ್ರಕರ್ ಮುಂಬೈ ಇಂಡಿಯನ್ಸ್ ತಂಡದ ಆಟಗಾರ್ತಿಯಾಗಿದ್ದರು, ಆದರೆ ಈ ಬಾರಿ ಫ್ರಾಂಚೈಸಿ ಅವರನ್ನು ಉಳಿಸಿಕೊಂಡಿಲ್ಲ. ಇದುವರೆಗೆ 16 ಟಿ20 ಪಂದ್ಯಗಳಲ್ಲಿ ಕಾಣಿಸಿಕೊಂಡ ಅವರು, 28.85 ಸರಾಸರಿಯಲ್ಲಿ 7 ವಿಕೆಟ್‌ಗಳನ್ನು ಪಡೆದಿದ್ದಾರಲ್ಲದೆ, 16 ಪಂದ್ಯಗಳಲ್ಲಿ 116.66 ಸ್ಟ್ರೈಕ್‌ರೇಟ್‌ನಲ್ಲಿ 126 ರನ್ ಗಳಿಸಿದ್ದಾರೆ. ಭಾರತೀಯ ತಂಡ ದಲ್ಲಿ ಪೂಜಾ ಅವರಿಗೆ ಇದುವರೆಗೆ 5 ಟೆಸ್ಟ್, 33 ಏಕದಿನ ಮತ್ತು 72 ಟಿ20 ಪಂದ್ಯಗಳಲ್ಲಿ ಆಡುವ ಅವಕಾಶ ಸಿಕ್ಕಿದೆ.

ಒಲಿಂಪಿಕ್ಸ್ ಆಯೋಜನೆ: ಮೋದಿಗೆ ಅಂಬಾನಿ ಬೆಂಬಲ

ಗಾಂಧಿನಗರ: 2036ರ ಒಲಿಂಪಿಕ್ಸ್ ಕ್ರೀಡಾಕೂಟವನ್ನ ಭಾರತಕ್ಕೆ ತರುವ ಪ್ರಧಾನಿ ಮೋದಿ ಅವರ ದೃಷ್ಟಿಕೋನವನ್ನು ರಿಲಯನ್ಸ್ ಸಂಸ್ಥೆ ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್



ಲಿಮಿಟೆಡ್ ಅಧ್ಯಕ್ಷ ಮುಕೇಶ್ ಅಂಬಾನಿ ಹೇಳಿದ್ದಾರೆ. ಇದು ದೇಶದಲ್ಲಿರುವ ಜಾಗತೀಕ ಕ್ರೀಡಾ ಮಹತ್ವಾಕಾಂಕ್ಷಿಗಳಿಗೂ ದೊಡ್ಡ ವೇದಿಕೆಯಾಗಲಿದೆ ಎಂದು ಅವರು ಶ್ಲಾಘಿಸಿದರು. ರಾಜ್‌ಕೋಟ್‌ನಲ್ಲಿ ವೈಬ್ರಂಟ್ ಗುಜರಾತ್ ಪ್ರಾದೇಶಿಕ ಸಮ್ಮೇಳನದ ಭಾಗವಾಗಿ ಆಯೋಜಿಸಲಾಗಿರುವ ಕಚ್–ಸೌರಾಷ್ಟ್ರಕ್ಕಾಗಿ ವೈಬ್ರಂಟ್ ಗುಜರಾತ್ ಪ್ರಾದೇಶಿಕ ವ್ಯಾಪಾರ ಪ್ರದರ್ಶನವನ್ನು ಪ್ರಧಾನಿ ಮೋದಿ ಉದ್ಘಾಟಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮುಕೇಶ್ ಅಂಬಾನಿ ಅವರು, ಪ್ರಧಾನಿ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದರು. ಒಲಿಂಪಿಕ್ಸ್ ಕ್ರೀಡಾಕೂಟವು ಪ್ರತಿ 4 ವರ್ಷಗಳಿಗೊಮ್ಮೆ ನಡೆಯುತ್ತದೆ. 2024ರ ಒಲಿಂಪಿಕ್ಸ್ ಪ್ಯಾರಿಸ್‌ನಲ್ಲಿ 2028ರ ಒಲಿಂಪಿಕ್ಸ್ ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿವೆ. 2032ರ ಆತಿಥ್ಯ ಆಸ್ಟ್ರೇಲಿಯಾದ ಪಾಲಾಗಿದೆ. ಈಗ 2036, 2040ರ ಸರದಿ ಬಾಕಿಯಿದ್ದು, ಹೇಗಾದರೂ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸಲು ಭಾರತ ಪ್ರಬಲ ಆಕಾಂಕ್ಷಿಯಾಗಿದೆ.

ಭಾರತ–ನ್ಯೂಜಿಲೆಂಡ್ ಮೊದಲ ಏಕದಿನ | ಟೀಮ್ ಇಂಡಿಯಾಕ್ಕೆ ಸರಣಿಯಲ್ಲಿ 1–0 ಮುನ್ನಡೆ

ಕಿವೀಸ್ ವಿರುದ್ಧ ಭಾರತಕ್ಕೆ ಜಯ

ವಡೋದರ: ವಿರಾಟ್ ಕೊಹ್ಲಿ ಅವರ ಅಮೋಘ ಬ್ಯಾಟಿಂಗ್ ಮತ್ತು ನಾಯಕ ಶುಭ್‌ಮನ್ ಆಕರ್ಷಕ ಅರ್ಧಶತಕ ಹಾಗೂ ಕೆಎಲ್ ರಾಹುಲ್ ಅವರ ಸಮಯೋಚಿತ ಬ್ಯಾಟಿಂಗ್ ನೆರವಿನಿಂದ ಟೀಮ್ ಇಂಡಿಯಾ ಭಾನುವಾರ ಇಲ್ಲಿ ನಡೆದ ಮೊದಲ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 4 ವಿಕೆಟ್‌ಗಳ ಜಯ ಗಳಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದಿಂದ ಮುನ್ನಡೆ ಗಳಿಸಿದೆ.

ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ ತಂಡವು ನಿಗದಿತ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 300 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ಭಾರತ ತಂಡ 49 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು ತನ್ನ ಗುರಿ ತಲುಪಿತು. ಕರ್ನಾಟಕದ ಕೆಎಲ್ ರಾಹುಲ್ ಅವರು ಭರ್ಜರಿ ಸಿಕ್ಸರ್ ಬಾರಿಸುವುದರೊಂದಿಗೆ ತಂಡವನ್ನು ಜಯದ ದಡದತ್ತ ಸೇರಿಸಿದರು.

ಮಾಜಿ ನಾಯಕ ರೋಹಿತ್ ಶರ್ಮಾ 26 ರನ್ ಗಳಿಸಿ ಔಟಾಗಿ ಅಭಿಮಾನಿಗಳಲ್ಲಿ ನಿರಾಸೆ ಮೂಡಿಸಿದರು. ಅವರು ಔಟಾದ ಬಳಿಕ ನಾಯಕ ಶುಭ್‌ಮನ್ ಗಿಲ್ (71 ಎಸೆತದಲ್ಲಿ 56) ಮತ್ತು ವಿರಾಟ್ ಕೊಹ್ಲಿ (91 ಎಸೆತದಲ್ಲಿ 93) ಎರಡನೇ ವಿಕೆಟ್‌ಗೆ 118 ರನ್‌ಗಳ ಜತೆಯಾಟವಾಡಿದರು. ಈ ಹಂತದಲ್ಲಿ ಕೊಹ್ಲಿ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅತೀ ವೇಗವಾಗಿ 28 ಸಾವಿರ ರನ್ ಗಳ ಮೈಲಿಗಲ್ಲನ್ನು ತಲುಪಿದ ವಿಶ್ವದಾಖಲೆ ನಿರ್ಮಿಸಿದರು.

ಉತ್ತಮವಾಗಿ ಆಡುತ್ತಿದ್ದ ಗಿಲ್ ಅವರು ಲೆಗ್ ಸ್ಪಿನ್ನರ್ ಆದಿತ್ಯ ಅಶೋಕ್ ಬೌಲಿಂಗ್‌ನಲ್ಲಿ ಗ್ಲೆನ್ ಫಿಲಿಪ್ಸ್‌ಗೆ ಕ್ಯಾಚಿತ್ತರು. ಅದಾದ ಬಳಿಕ ವಿರಾಟ್ ಕೊಹ್ಲಿ ಅವರು ಶ್ರೇಯಸ್ ಅಯ್ಯರ್ ಅವರ ಜತೆ ಸೇರಿ 3ನೇ ವಿಕೆಟ್‌ಗೆ 77 ರನ್‌ಗಳ ಜತೆಯಾಟವಾಡಿದರು.

ಈ ಸಂದರ್ಭದಲ್ಲಿ ಪಂದ್ಯ ಸಂಪೂರ್ಣವಾಗಿ ಭಾರತದ ಕೈಗೆ ಬಂತು. ಆದರೆ ಎರಡು ಓವರ್‌ಗಳ ಅಂತರದಲ್ಲಿ ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್ ಮತ್ತು ರವೀಂದ್ರ ಜಡೇಜಾ ಅವರ ವಿಕೆಟ್‌ಗಳನ್ನು ಉರುಳಿಸಿದ ಮಧ್ಯಮ ವೇಗಿ ಕೈಲ್ ಜಾಮಿಸನ್ ಕಿವೀಸ್ ಪಾಳಯದಲ್ಲಿ ಜಯದ ಆಸೆ ಮೂಡಿಸಿದ್ದರು. ಆದರೆ ಭಡ್ತಿ ಪಡೆದು 7ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದ ಹರ್ಷಿತ್ ರಾಣಾ (23 ಎಸೆತದಲ್ಲಿ 29) ಅವರು ವೇಗವಾಗಿ ಬ್ಯಾಟಿಂಗ್ ಮಾಡದ್ದರಿಂದ ಭಾರತ ತಂಡ ಅಂತಿಮವಾಗಿ ಗೆಲುವಿನ ನಗೆ ಬೀರುವಂತಾಯಿತು.

ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್ ಗೆ ಇಳಿಸಲ್ಪಟ್ಟ ನ್ಯೂಜಿಲೆಂಡ್ ತಂಡದ ಪರವಾಗಿ ಡವೊನ್ ಕಾನ್ವೆ (56) ಮತ್ತು ಹೆನ್ರಿ ನಿಕೋಲ್ಸ್ (62) ಮೊದಲ ವಿಕೆಟ್‌ಗೆ 21.4 ಓವರ್‌ಗಳಲ್ಲಿ 117ರನ್‌ಗಳ ಮಹತ್ವದ ಜತೆಯಾಟ ಆಡಿದರು. ಈ ಜೋಡಿ ಬೇರ್ಪಟ್ಟ ಬಳಿಕ ನ್ಯೂಜಿಲೆಂಡ್ ಕಡೆಯಿಂದ ಉತ್ತಮ ಜತೆಯಾಟ ಮೂಡಿ ಬರಲಿಲ್ಲ.

ಆದರೆ 4ನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಇಳಿದ ಡೇರಿಲ್ ಮಿಚಲ್ ಮಾತ್ರ ಮಿಂಚಿನ ಬ್ಯಾಟಿಂಗ್ ನಡೆಸಿದ್ದರಿಂದ ನ್ಯೂಜಿಲೆಂಡ್ ಸವಾಲಿನ ಮೊತ್ತ ಪೇರಿಸುವಂತಾಯಿತು. 71 ಎಸೆತಗಳನ್ನು ಎದುರಿಸಿದ ಅವರು 5 ಬೌಂಡರಿ ಮತ್ತು 3 ಸಿಕ್ಸರ್ ಗಳಿದ್ದ 84 ರನ್ ಗಳಿಸಿದರು. ಭಾರತದ ಪರ ಮಧ್ಯಮ ವೇಗಿಗಳಾದ ಮೊಹಮ್ಮದ್ ಸಿರಾಜ್, ಹರ್ಷಿತ್ ರಾಣಾ ಮತ್ತು ಕನ್ನಡಿಗ ಪ್ರಸಿದ್ಧ್ ಕೃಷ್ಣ ಅವರು ತಲಾ 2 ವಿಕೆಟ್ ಕಬಳಿಸಿದರು.

ಕೊಹ್ಲಿಗೆ 2ನೇ ಸ್ಥಾನ

ವಿರಾಟ್ ಕೊಹ್ಲಿ ತಮ್ಮ ಅಂತಾರಾಷ್ಟ್ರೀಯ ಕ್ರಿಕೆಟ್ ವೃತ್ತಿಜೀವನದ 557 ಪಂದ್ಯಗಳಲ್ಲಿ 624 ಇನ್ನಿಂಗ್ಸ್‌ಗಳಲ್ಲಿ ಭಾನುವಾರ 28,017 ರನ್ ತಲುಪಿದ್ದಾರೆ. ಈ ಸಾಧನೆಯೊಂದಿಗೆ ಅವರು ಲಂಕಾದ ಕುಮಾರ ಸಂಗಕ್ಕಾರ ಅವರ 2ನೇ ಸ್ಥಾನದ ದಾಖಲೆಯನ್ನು ಮುರಿದಿದ್ದಾರೆ. ಕೊಹ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸಚಿನ್ ತೆಂಡೂಲ್ಕರ್‌ರ ನಂತರದ ಸ್ಥಾನಕ್ಕೇರಿದ್ದಾರೆ. ಸಚಿನ್ 664 ಪಂದ್ಯಗಳಲ್ಲಿ 34,357 ರನ್ ಗಳಿಸಿದ್ದು, ಹೆಚ್ಚು ರನ್‌ಗಳ ವಿಶ್ವದಾಖಲೆ ಮಾಡಿದ್ದಾರೆ.

ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳು

ಸಚಿನ್ ತೆಂಡೂಲ್ಕರ್: 34,357 ರನ್
ವಿರಾಟ್ ಕೊಹ್ಲಿ: 28,017★ ರನ್
ಕುಮಾರ್ ಸಂಗಕ್ಕಾರ: 28,016 ರನ್
ರಿಕಿ ಪಾಂಟಿಂಗ್: 27,483 ರನ್
ಮಹೇಲಾ ಜಯವರ್ಧನೆ: 25,957 ರನ್

ಮಹಿಳಾ ಪ್ರೀಮಿಯರ್ ಲೀಗ್ | ಡೆಲ್ಲಿಗೆ ಸೋಲು

ಗುಜರಾತ್ ಜೈಂಟ್ಸ್‌ಗೆ ರೋಚಕ ಗೆಲುವು

ನವಿ ಮುಂಬೈ: ಸೋಫಿ ಡಿವೈನ್ (95) ಅವರ ಮಿಂಚಿನ ಆಟದ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡವು ಇಲ್ಲಿ ಭಾನುವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವಿರುದ್ಧ 4 ರನ್‌ಗಳ ರೋಚಕ ಗೆಲುವನ್ನು ಸಾಧಿಸಿದೆ.

ಗುಜರಾತ್ ನೀಡಿದ 210 ರನ್‌ಗಳ ಗುರಿಯನ್ನು ಬೆಂಬತ್ತಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು 20 ಓವರ್‌ಗಳಲ್ಲಿ 205 ರನ್ ಗಳಿಸಲಷ್ಟೇ ಶಕ್ತವಾಯಿತು.

ಲಿಜೆಲ್ ಲೀ (84) ಮತ್ತು ಲಾರಾ ವೊಲ್ವಾರ್ಡ್ಟ್ (77) ಅವರ ಮಿಂಚಿನ ಆಟ ಡೆಲ್ಲಿಯನ್ನು ಗೆಲುವಿನ ದಡ ಸೇರಿಸಲಿಲ್ಲ, ಅವರಿಬ್ಬರನ್ನು ಹೊರತುಪಡಿಸಿ ಡೆಲ್ಲಿ ತಂಡದ ಪರ ಜೆಮಿಮಾ ರೋಡ್ರಿಗಸ್ 15 ರನ್ ಗಳಿಸಿದರೆ, ಶಫಾಲಿ ವರ್ಮಾ 14 ರನ್ ಗಳಿಸಿದರು.

ಟಾಸ್ ಸೋತು ಮೊದಲು ಬ್ಯಾಟಿಂಗ್‌ಗೆ ಆಹ್ವಾನಿಸಲ್ಪಟ್ಟ ಗುಜರಾತ್ ತಂಡಕ್ಕೆ ಸೋಫಿ ಡಿವೈನ್ (95) ಹಾಗೂ ಬೆತ್ ಮೂನಿ (19) ಬಿರುಸಿನ ಆರಂಭ ಒದಗಿಸಿದರು. ಅಶ್ಲೇಗ್ ಗಾರ್ಡ್ನರ್ ಜತೆ ಸೇರಿದ ಸೋಫಿ ಡಿವೈನ್

ಆಕ್ರಮಣಕಾರಿ ಬ್ಯಾಟಿಂಗ್ ಪ್ರದರ್ಶಿಸಿದರು. ಅವರು ಕೇವಲ ಐದು ರನ್ ಅಂತರದಿಂದ ಶತಕ ವಂಚಿತರಾದರು, ಕೇವಲ 42 ಎಸೆತಗಳಲ್ಲಿ 95 ರನ್ ಗಳಿಸಿ ಅಬ್ಬರಿಸಿದರು. ಅವರ ಇನ್ನಿಂಗ್ಸ್‌ನಲ್ಲಿ ಎಂಟು ಸಿಕ್ಸರ್ ಹಾಗೂ ಏಳು ಬೌಂಡರಿಗಳು ಇದ್ದವು.

ಸೋಫಿ ಡಿವೈನ್‌ಗೆ ಉತ್ತಮ ಜತೆ ನೀಡಿದ ಗಾರ್ಡ್ನರ್ 24 ಎಸೆತಗಳಲ್ಲಿ 49 ರನ್ (3 ಸಿಕ್ಸರ್, 4 ಬೌಂಡರಿ) ರನ್ ಗಳಿಸಿದರು, ಆದರೆ ಗುಜರಾತ್ ತಂಡದ ಕೆಳ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯವನ್ನು ಅನುಭವಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ಪರ ನಂದನಿ ಶರ್ಮಾ 33 ರನ್ ನೀಡಿ ಐದು ವಿಕೆಟ್ ಗಳಿಸಿ ಮಿಂಚಿದರು.

ಇಂದಿನಿಂದ ಮೂಡುಬಿದಿರೆಯಲ್ಲಿ 5 ದಿನಗಳ ಅಂತರ ವಿವಿ ಅಥ್ಲೆಟಿಕ್ ಚಾಂಪಿಯನ್‌ಶಿಪ್ | 4,288 ಅಥ್ಲೀಟ್‌ಗಳು ಕ್ರೀಡೋತ್ಸವದಲ್ಲಿ ಭಾಗಿ

ಅಂತರ ವಿ.ವಿ ಅಥ್ಲೆಟಿಕ್ ಕ್ರೀಡಾಕೂಟ

ಮೂಡುಬಿದಿರೆ: ಇಲ್ಲಿನ ಸ್ವರಾಜ್ಯ ಮೈದಾನ ಈಗ ರಾಷ್ಟ್ರಮಟ್ಟದ ಕ್ರೀಡಾ ಹಬ್ಬಕ್ಕೆ ಸಜ್ಜಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಸಹಯೋಗದೊಂದಿಗೆ 85ನೇ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಅಥ್ಲೆಟಿಕ್ ಚಾಂಪಿಯನ್ ಶಿಪ್–2026 ಇಂದಿನಿಂದ ಆರಂಭವಾಗಲಿದೆ.

ಜ. 12ರಿಂದ 16ರ ವರೆಗೆ ಐದು ದಿನಗಳ ಕಾಲ ನಡೆಯಲಿರುವ ಈ ಬೃಹತ್ ಕ್ರೀಡಾಕೂಟದಲ್ಲಿ ದೇಶದ 312ಕ್ಕೂ ಅಧಿಕ ವಿಶ್ವವಿದ್ಯಾಲಯಗಳ 4,288 ಅಥ್ಲೀಟ್‌ಗಳು ಹಾಗೂ 1,000ಕ್ಕೂ ಹೆಚ್ಚು ಕ್ರೀಡಾಧಿಕಾರಿಗಳು ಭಾಗವಹಿಸಲಿದ್ದಾರೆ.

ಸೋಮವಾರ ಸಂಜೆ 4.30ಕ್ಕೆ ನಡೆಯಲಿರುವ ಸಮಾರಂಭದಲ್ಲಿ ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್ ಕ್ರೀಡಾಕೂಟವನ್ನು ಉದ್ಘಾಟಿಸಿ, ಕ್ರೀಡಾಜ್ಯೋತಿಯನ್ನು ಸ್ವೀಕರಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ

ಪ್ರಕಾಶ್ ಆರ್. ಪಾಟೀಲ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಆರ್‌ಜಿಯುಎಚ್ಎಸ್ ಕುಲಪತಿ ಡಾ. ಭಗವಾನ್ ಬಿ.ಸಿ. ಅಧ್ಯಕ್ಷತೆ ವಹಿಸಲಿದ್ದು, ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕರಾದ ಉಮಾನಾಥ ಎ. ಕೋಟ್ಯಾನ್, ರಿಜ್ವಾನ್ ಅರ್ಷದ್, ಎಚ್.ಸಿ. ಬಾಲಕೃಷ್ಣ, ಡಾ. ಶ್ರೀನಿವಾಸ್ ಎನ್.ಟಿ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ಗೋವಿಂದ ರಾಜ್, ಮಾಜಿ ಸಚಿವ ಅಭಯಚಂದ್ರ ಜೈನ್, ಆಳ್ವಾಸ್ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ ಆಳ್ವ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.

6ನೇ ಬಾರಿಗೆ ಆಳ್ವಾಸ್ ಅತಿಥ್ಯ: ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ರಾಷ್ಟ್ರಮಟ್ಟದ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ಗೆ ಅತಿಥ್ಯ ನೀಡುತ್ತಿರುವುದು ಇದು 6ನೇ ಬಾರಿ. ಈ ಹಿಂದೆ 72, 75 ಹಾಗೂ 80ನೇ ಕ್ರೀಡಾಕೂಟಗಳನ್ನು ಆರ್‌ಜಿಯುಎಚ್‌ಎಸ್ ಅಡಿಯಲ್ಲಿ ಹಾಗೂ 79 ಮತ್ತು 81ನೇ ಕೂಟಗಳನ್ನು ಮಂಗಳೂರು ವಿವಿ ಅಡಿಯಲ್ಲಿ ಯಶಸ್ವಿಯಾಗಿ ಆಯೋಜಿಸಿತ್ತು.

ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಒಟ್ಟು 47 ಸ್ಪರ್ಧೆಗಳು ನಡೆಯಲಿದ್ದು, ಅತ್ಯಾಧುನಿಕ ಫೋಟೋ ಫಿನಿಶಿಂಗ್ ತಂತ್ರಜ್ಞಾನ ಹಾಗೂ ಹೊನಲು ಬೆಳಕಿನ ವ್ಯವಸ್ಥೆಯಡಿಯಲ್ಲಿ ಪಂದ್ಯಗಳು ನಡೆಯಲಿವೆ.

2ನೇ ಖೇಲೊ ಇಂಡಿಯಾ ಬೀಚ್ ಗೇಮ್ಸ್ ಓಪನ್ ವಾಟರ್ ಸ್ವಿಮ್ಮಿಂಗ್‌ನಲ್ಲಿ ಪ್ರಾಬಲ್ಯ

ರಾಜ್ಯದ ಮುಡಿಗೆ ಸಮಗ್ರ ಪ್ರಶಸ್ತಿ

ದಿಯು: ಈಜುಪಟುಗಳಾದ ಅಶ್ಮಿತಾ ಚಂದ್ರ ಮತ್ತು ದ್ರುಪದ್ ರಾಮಕೃಷ್ಣ ಅವರ ಅಮೋಘ ಪ್ರದರ್ಶನದ ನೆರವಿನಿಂದ ಇಲ್ಲಿನ ಘೋಘ್ಲಾ ಕಡಲ ಕಿನಾರೆಯಲ್ಲಿ ಮುಗಿದ ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಕರ್ನಾಟಕವು ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಪದಕ ಪಟ್ಟಿಯಲ್ಲಿ 18ನೇ ಸ್ಥಾನದಲ್ಲಿದ್ದ ಕರ್ನಾಟಕ ಕೊನೆಯ ಎರಡು ದಿನಗಳಲ್ಲಿ ನಡೆದ ಓಪನ್ ವಾಟರ್ ಸ್ವಿಮ್ಮಿಂಗ್‌ನಲ್ಲಿ ಮಿಂಚಿನ ಸಂಚಲನ ಮೂಡಿಸಿತು. 10 ಕಿ.ಮೀ. ಮತ್ತು 5 ಕಿ.ಮೀ. ಪುರುಷರ ಹಾಗೂ ಮಹಿಳೆಯರ ಈಜು ಸ್ಪರ್ಧೆಯಲ್ಲಿದ್ದ ಒಟ್ಟು 12 ಪದಕಗಳ ಪೈಕಿ ಎಂಟನ್ನು ಬಾಚಿಕೊಂಡಿತು. ಹೀಗಾಗಿ ರಾಜ್ಯವು 11 ಪದಕಗಳೊಂದಿಗೆ ಅಭಿಯಾನವನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿತು. ಕಳೆದ ಆವೃತ್ತಿಯಲ್ಲಿ ನಾಲ್ಕು (2 ಚಿನ್ನ, 2 ಕಂಚು) ಪದಕ ಗೆದ್ದು 11ನೇ ಸ್ಥಾನ ಗಳಿಸಿತ್ತು.

ಅಶ್ಮಿತಾಗೆ ಡಬಲ್ ಚಿನ್ನ: 10 ಕಿ.ಮೀ. ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದ 20 ವರ್ಷದ ಅಶ್ಮಿತಾ, ಕೂಟದ ಕೊನೆಯ ದಿನ 5 ಕಿ.ಮೀ.ನಲ್ಲೂ ಚಾಂಪಿಯನ್ ಆದರು. ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ನಾಲ್ಕು ಬಾರಿ ಭಾರತವನ್ನು ಪ್ರತಿನಿಧಿಸಿದ್ದ ಅವರು 1 ಗಂಟೆ 35:11 ನಿಮಿಷದಲ್ಲಿ ಗುರಿ ತಲುಪಿದರು. ಅವರಿಗೆ ಮಹಾರಾಷ್ಟ್ರದ ದೀಕ್ಷಾ ಸಂದೀಪ್ ಅವರಿಂದ ಪ್ರಬಲ ಸ್ಪರ್ಧೆ ಎದುರಾಯಿತು. ಆರಂಭದಿಂದಲೇ ಮುಂಚೂಣಿಯಲ್ಲಿ ಸಾಗಿದ ಅಶ್ಮಿತಾ ಮುಖಕ್ಕೆ ಬಡಿಯುತ್ತಿದ್ದ ತೀವ್ರ ಸ್ವರೂಪದ ಅಲೆಗಳ ಜತೆ ಹೋರಾಟ ನಡೆಸಿ ಗೆಲುವಿನ ನಗೆ ಬೀರಿದರು.

ವಿಟಾಕೀಸ್

ಕರಿಕಾಡನ ರತುನಿ

ಕರಿಕಾಡ ಶೀರ್ಷಿಕೆಯಲ್ಲಿಯೇ ಗಮನಸೆಳೆಯುತ್ತಿದೆ. ವಿಭಿನ್ನಾವಾದ ಕಥಹಂದರ ಹೊಂದಿರುವ ಈ ಚಿತ್ರ ಮ್ಯೂಸಿಕಲ್ ಜರ್ನಿಯ ಜತೆಗೆ ಅಡ್ವೆಂಚರಸ್ ಎಲಿಮೆಂಟ್ಸ್ ಅನ್ನು ಒಳಗೊಂಡಿದೆ. ಶೂಟಿಂಗ್ ಮುಗಿಸಿ ತೆರೆಗೆ ಸಿದ್ಧವಾಗಿರುವ ಕರಿಕಾಡನ ರತುನಿ ರತುನಿ ...ಹಾಡು ಬಿಡುಗಡೆಯಾಗಿದೆ.

ಸಾಹಸಮಯ ದೃಶ್ಯಕಾವ್ಯವಾಗಿ, ಪ್ರೇಮಕಥೆಯ ರೂಪಕವಾಗಿ, ನಮ್ಮ ಮಣ್ಣಿನ ಸೊಗಡನ್ನ ಸೂಸುವಂತಹ ಕಥಾಹಂದರ ಹೊಂದಿದೆ. ಇಷ್ಟೇ ಅಲ್ಲದೆ ಇದೊಂದು ರಿವೇಂಜ್ ಸ್ಟೋರಿಯಂತೆ ಎದ್ದು ಕಾಣುತ್ತಿದೆ. ಇಷ್ಟೇ ಅಲ್ಲದೆ ಸಿನಿಮಾ ಕಥೆಯ ಜೊತೆಗೆ ತಾಂತ್ರಿಕತೆಯಲ್ಲಿಯೂ ಗಮನ ಸೆಳೆದಿದೆ.

ಈ ಸಿನಿಮಾದಲ್ಲಿ ಕಾಡ ನಟರಾಜ್ ನಾಯಕ ನಟನಾಗಿ ನಟಿಸಿದ್ದಾರೆ. ಇವರೊಂದಿಗೆ ಪ್ರಮುಖ ಪಾತ್ರದಲ್ಲಿ ಯಶ್ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕರಾವಳಿ ಬೆಡಗಿ ನಿರೀಕ್ಷಾ ಶೆಟ್ಟಿ ನಾಯಕಿಯಾಗಿದ್ದಾರೆ. ಉಳಿದಂತೆ ಈ ಸಿನಿಮಾದಲ್ಲಿ ಮಂಜು ಸ್ವಾಮಿ, ಗೋವಿಂದ ಗೌಡ , ದೀವಾಕರ್, ಕಾಮಿಡಿ ಕಿಲಾಡಿ ಸೂರ್ಯ, ದಿ. ರಾಕೇಶ್ ಪೂಜಾರಿ, ವಿಜಯ್ ಚಂಡೂರು, ಚಂದ್ರಪ್ರಭ, ಕರಿಸುಬ್ಬು, ಗಿರಿ, ಮಾಸ್ಟರ್ ಆರ್ಯನ್, ಬಾಲನಟಿ ರಿದ್ಧಿ ಸೇರಿದಂತೆ ಹಲವು ಕಲಾವಿದರು ನಟಿಸಿದ್ದಾರೆ. ಇನ್ನು ಈ ಸಿನಿಮಾವನ್ನು ರಿದ್ಧಿ ಎಂಟರ್ ಟೇನ್ ಮೆಂಟ್ ಬ್ಯಾನರ್‌ನಲ್ಲಿ ಕಾಡ ನಟರಾಜ್ ಪತ್ನಿ ದೀಪ್ತಿ ದಾಮೋದರ್ ಚಿತ್ರ ನಿರ್ಮಾಣ

ಮಾಡಿದ್ದಾರೆ. ಪತಿಯ ಕನಸಿನ ಈ ಸಿನಿಮಾ ಮೂಲಕ ಈಡೇರಿಸಿದ್ದಾರೆ. ಇನ್ನು ಇವರ ಕನಸಿಗೆ ಸ್ನೇಹಿತ ರವಿಕುಮಾರ್ ಎಸ್.ಆರ್ ಸಹ ನಿರ್ಮಾಣಕ್ಕೆ ಸಾಥ್ ನೀಡಿದ್ದಾರೆ.

ಕರಿಕಾಡ ಸಿನಿಮಾವನ್ನು ಗಿಲ್ಲಿ ವೆಂಕಟೇಶ್ ನಿರ್ದೇಶನ ಮಾಡಿದ್ದು, ಸಿನಿಮಾದ ನಾಯಕ ಕಾಡ ನಟರಾಜ ಅವರೇ ಸಿನಿಮಾದಹ ಕಥೆ ಬರೆದಿದ್ದಾರೆ. ಅತೀಶಯ್ ಜೈನ್ ಹಾಗೂ ಶಶಾಂಕ್ ಶೇಷಾಗಿರಿ ಸಂಗೀತ ಮಾಡಿದ್ದಾರೆ. ಶಶಾಂಕ್ ಶೇಷಾಗರಿ ಅವರು ರಾಗ ಸಂಯೋಜನೆ ಜೊತೆಗೆ ಜಬರ್ದಸ್ತ್ ಹಿನ್ನೆಲೆ ಸಂಗೀತ ನೀಡಿದ್ದಾರೆ. ಜೀವನ್ ಗೌಡ ಛಾಯಾಗ್ರಹಣ, ದೀಪಕ್ ಸಂಕಲನವಿದೆ.

ರಕ್ಷಿತ್‌ಗೆ ದೈವದ ಅಭಯ

ಸಿಂಪಲ್ ಸ್ಟಾರ್ ರಕ್ಷಿತ್ ಶೆಟ್ಟಿ ಸಪ್ತ ಸಾಗರದಾಚೆ ಎಲ್ಲೋ ಸಿನಿಮಾದ ಬಳಿಕ ಯಾವ ಸಿನಿಮಾದಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ರಕ್ಷಿತ್ , ಸಪ್ತ ಸಾಗರದಾಚೆ ದಾಟಿ ಹೊಸ ಸಿನಿಮಾದ ಕಥೆ ಸಿದ್ಧ ಮಾಡುತ್ತಿದ್ದರು. ಹೌದು ರಕ್ಷಿತ್ ಶೆಟ್ಟಿ , ರಿಚರ್ಡ್ ಆಂಟನಿ ಸಿನಿಮಾದಲ್ಲಿ ನಟಿಸಲು ಸಿದ್ಧತೆ ನಟಿಸಲು ಸಿದ್ಧತೆ ನಡೆಸಿದ್ದರು. ಸಿನಿಮಾದ ಕಥೆ ಬರೆದು ತಯಾರಿ ನಡೆಸಿದ್ದರು. ಅದ್ದೂರಿ ವೆಚ್ಚದ ಈ ಚಿತ್ರವನ್ನು ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಬೇಕಿತ್ತು. ಆದರೆ ಕಾರಣಾಂತರಗಳಿಂದ ಹೊಂಬಾಳೆ ಫಿಲಂಸ್ ಈ ಚಿತ್ರದಿಂದ ಹೊರ ನಡೆಯಿತು. ಹಾಗಾಗಿ ರಕ್ಷಿತ್ ಶೆಟ್ಟಿ ಅವರೇ ರಿಚರ್ಡ್ ಆಂಟನಿಯ ನಿರ್ಮಾಣದ ಜವಾಬ್ದಾರಿ ವಹಿಸಿಕೊಳ್ಳಲು ನಿರ್ಧರಿಸಿದರು. ಅಂತೆಯೇ ಈಗ ಸಿನಿಮಾದ ನಿರ್ದೇಶನದ ಜತೆಗೆ ನಿರ್ಮಾಣವನ್ನು ಮಾಡಲು ರೆಡಿಯಾಗಿದ್ದಾರೆ. ಅದಕ್ಕಾಗಿಯೇ ತಿಂಗಳುಗಳಿಂದ ಅಮೇರಿಕಾದಲ್ಲಿ ಇದ್ದುಕೊಂಡು ಚಿತ್ರದ ಕಥೆ ಸಿದ್ಧ ಮಾಡಿಕೊಂಡು ತಮ್ಮ ಹುಟ್ಟೂರಿಗೆ ಮರಳಿದ್ದಾರೆ.

ತಮ್ಮೂರಿಗೆ ಬಂದ ರಕ್ಷಿತ್ ಶೆಟ್ಟಿ, ಕರಾವಳಿ ದೈವರಾಜ, ಬಬ್ಬುಸ್ವಾಮಿ ಕಾರ್ಣಿಕನ ಮುಂದೆ ಪ್ರತ್ಯಕ್ಷವಾಗಿದ್ದು, ತಮ್ಮ ಮುಂದಿನ



ಸಿನಿಮಾಗಾಗಿ ದೈವದ ಆಶೀರ್ವಾದ ಪಡೆದಿದ್ದಾರೆ. ರಕ್ಷಿತ್ ಮನದಾಳ ಆಲಿಸಿದ ಕಾರ್ಣಿಕ ಬಬ್ಬುಸ್ವಾಮಿ,

ರಕ್ಷಿತ್ ಸಿನಿಮಾಗೆ ಅಭಯ ನೀಡಿದೆ. ತಮ್ಮ ಆರಾಧ್ಯ ದೈವದ ಅಭಯದಿಂದ ಸಂತಸಗೊಂಡಿರುವ ರಕ್ಷಿತ್ ತಮ್ಮ ಹೊಸ ಸಿನಿಮಾ ರಿಚರ್ಡ್ ಆಂಟನಿಯ ಕಾರ್ಯಗಳನ್ನು ಆರಂಭಿಸಲಿದ್ದಾರೆ.

ಈ ಹಿಂದೆಯೇ ರಿಚರ್ಡ್ ಆಂಟನಿ ಚಿತ್ರದ ಟೈಟಲ್ ಟೀಸರ್ ರಿಲೀಸ್ ಆಗಿತ್ತು. ಟೀಸರ್ ನಲ್ಲಿ ಅಚ್ಯುತ್ ಕುಮಾರ್ ಕಂಗೊಳಿಸಿದ್ದರು. ಈ ಟೈಟಲ್ ಟೀಸರ್ ನೋಡಿದರೆ ಇದು ಉಳಿದವರು ಕಂಡಂತೆ ಮುಂದುವರಿದ ಭಾಗವೇ ಎಂಬ ಕುತೂಹಲ ಮೂಡುತ್ತದೆ. ಆದರೆ ಈ ಬಗ್ಗೆ ಚಿತ್ರತಂಡ ಎಲ್ಲಿಯೂ ಗುಟ್ಟುಬಿಟ್ಟುಕೊಟ್ಟಿಲ್ಲ. ರಿಚರ್ಡ್ ಆಂಟನಿ ಸಿನಿಮಾದಲ್ಲಿ ರಕ್ಷಿತ್, ಅಚ್ಯುತ್ ಸೇರಿದಂತೆ ದೊಡ್ಡ ತಾರಾಬಳಗವೇ ಇರಲಿದೆ. ಶೀಘ್ರದಲ್ಲಿಯೇ ಸಿನಿಮಾದ ಮುಹೂರ್ತ ನೆರವೇರಲಿದೆ.

ರಕ್ಕಸಪುರದಿಂದ ಬಂದ ಹಾಡು

ರಾಜ್ ಬಿ ಶೆಟ್ಟಿ ಪ್ರಮುಖ ಪಾತ್ರದಲ್ಲಿ ನಟಿಸರುವ ರಕ್ಕಸಪುರದೋಳ್ ಚಿತ್ರದ ಫಸ್ಟ್ ಲುಕ್ ಪೋಸ್ಟರ್ ಹಾಗೂ ಟೀಸರ್ ಬಿಡುಗಡೆಯಾಗಿದೆ. ಈಗ ಚಿತ್ರತಂಡ ಹಾಡೊಂದನ್ನು ಬಿಡುಗಡೆ ಮಾಡಿದೆ. ನೀನಾ ನೀನಾ... ನೀನೇನಾ...ಎಂಬ ಅಪ್ಪಟ ಮೆಲೋಡಿ ಹಾಡು ಇದಾಗಿದ್ದು, ಕೇಳುಗರ ಮನಸೂರೆಗೊಳ್ಳುತ್ತಿದೆ. ಅರ್ಜುನ್ ಜನ್ಯ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಈ ಹಾಡಿಗೆ ವಿಜಯ ಪ್ರಕಾಶ್ ದನಿಯಾಗಿದ್ದಾರೆ. ಮಂಜುನಾಥ್ ಸಾಹಿತ್ಯದಲ್ಲಿ ಹಾಡು ಮೂಡಿಬಂದಿದೆ. ಬಿ.ರಾಜ್ ಬಿ ಶೆಟ್ಟಿ ಹಾಗೂ ಬೇಬಿ ನಿಶಾ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಕಳೆದ ಒಂದು ದಶಕದಿಂದ ಜೋಗಿ ಪ್ರೇಮ್ ಬಳಿ ಕಾರ್ಯ ನಿರ್ವಹಿಸಿರುವ ರವಿ ಸಾರಂಗ ರಕ್ಕಸಪುರದೋಳ್ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಕ್ರೈಂ–ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಕಥೆ ಕೊಳ್ಳೇಗಾಲದ ಸುತ್ತಮುತ್ತದಲ್ಲಿ ಸಾಗುತ್ತದೆ. ಎಲ್ಲರೊಳಗಿರುವ ರಾಕ್ಷಸರ ಕುರಿತಾದ ಕಥೆ ಇದಾಗಿದ್ದು, ಮನುಷ್ಯನಲ್ಲಿ ಎರಡು ಗುಣಗಳಿರುತ್ತದೆ. ಒಂದು ಒಳ್ಳೆಯದು. ಮತ್ತೊಂದು ಕೆಟ್ಟದ್ದು. ಆ ಕೆಟ್ಟ ಗುಣಗಳನ್ನು ರಕ್ಕಸ ಎನ್ನಬಹುದು. ಅದನ್ನು ಹೇಗೆ ನಾಯಕ ಮೀರುತ್ತಾನೆ ಎಂಬುದೇ ಚಿತ್ರದ ಕಥೆ ಎನ್ನುತ್ತಾರೆ ನಿರ್ದೇಶಕ ರವಿ ಸಾರಂಗ.

ಕೆ.ಎನ್.ಎಂಟರ್‌ಟೇನ್ ಮೆಂಟ್ ಬ್ಯಾನರ್ ನಲ್ಲಿ ರಕ್ಕಸಪುರದೋಳ್ ಚಿತ್ರ ನಿರ್ಮಾಣವಾಗಿದ್ದು, ಸಾಹಸ ನಿರ್ದೇಶಕ ಕೆ.ರವಿವರ್ಮ ಬಂಡವಾಳ ಹೂಡಿದ್ದಾರೆ. ರಾಜ್ ಬಿ ಶೆಟ್ಟಿ ಜೋಡಿಯಾಗಿ ಸ್ವಾತಿಷ್ಟಾ ಕೃಷ್ಣ, ಅರ್ಚನಾ ಕೊಟ್ಟಿಗೆ ಬಣ್ಣಹಚ್ಚಿದ್ದಾರೆ. ಬಿ.ಸುರೇಶ, ಅನಿರುದ್ಧ ಭಟ್, ಗೋಪಾಲ್ ದೇಶಪಾಂಡೆ, ಜಹಾಂಗೀರ್, ಗೌರವ್ ಶೆಟ್ಟಿ ಹಾಗೂ ಸಿದ್ದಣ್ಣ ಮುಂತಾದವರು ತಾರಾಗಣ ದಲ್ಲಿದ್ದಾರೆ.

ಅರ್ಜುನ್ ಜನ್ಯ ಸಂಗೀತ ಸಂಯೋಜನೆ, ವಿಲಿಯಂ ಡೇವಿಡ್ ಛಾಯಾಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಈ ಚಿತ್ರಕ್ಕಿದ್ದು, ಕ್ರಾಂತಿ ಕುಮಾರ್ ಸಂಭಾಷಣೆ ಬರೆದಿದ್ದಾರೆ. ಮಂಜುನಾಥ್ ಬಿ.ಎಸ್, ಕ್ರಾಂತಿ ಕುಮಾರ್, ದೇವರಾಜ್ ಸುಲೋಕ್ ಹಾಗೂ ಭರತ್ ಎಲ್ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಫೆಬ್ರವರಿ 6 ರಂದು ಚಿತ್ರ ತೆರೆಗೆ ಬರಲಿದೆ.



ಏಕಂ ಬಿಡುಗಡೆ

ಏಕಂ ವೆಬ್ ಸರಣಿ ಒಟಿಟಿಯಲ್ಲಿ ಬಿಡುಗಡೆಯಾಗಿದೆ. ಏಕಂ ಒಂದು ವಿಭಿನ್ನವಾದ ಕಥಾ ಸಂಗ್ರಹವಾಗಿದೆ. ಈ ವೆಬ್ ಸರಣಿಯು ಕರಾವಳಿ ಕರ್ನಾಟಕದಲ್ಲಿ ನಡೆಯುವ ಏಳು ವಿವಿಧ ಕಥೆಗಳನ್ನು ಏಳು ಸಂಚಿಕೆಗಳಲ್ಲಿ ಹೇಳಲಾಗಿದೆ.

ಬಹುರಾತಾಗಣದ ಈ ವೆಬ್ ಸರಣಿಯಲ್ಲಿ ಪ್ರಕಾಶ್ ರಾಜ್, ರಾಜ್ ಬಿ ಶೆಟ್ಟಿ, ಶೈನ್ ಶೆಟ್ಟಿ, ಪ್ರಕಾಶ್ ತುಮಿನಾಡ್, ಕಿಶೋರ್ ಕುಮಾರ್ ಜಿ ಮುಂತಾದವರು ನಟಿಸಿದ್ದಾರೆ. ಈ ಕಥಾ ಸಂಗ್ರಹವನ್ನು ಸುಮಂತ್ ಭಟ್, ಶಂಕರ್ ಗಂಗಾಧರನ್, ವಿವೇಕ್ ವಿನೋದ್, ಜಿಷ್ಣು ಚಟರ್ಜಿ, ಸ್ವರೂಪ್ ಎಲಾಮನ್ ಮತ್ತು ಸನಲ್ ಅಮನ್ ನಿರ್ದೇಶಿಸಿರುತ್ತಾರೆ. ನಟ ರಕ್ಷಿತ್ ಶೆಟ್ಟಿ ಅವರ ಪರಂವಃ ಸ್ಟೂಡಿಯೋಸ್ ನಿರ್ಮಾಣದಲ್ಲಿ ಏಕಂ ನಿರ್ಮಾಣವಾಗಿದ್ದು, ಜೀ5ನಲ್ಲಿ ಬಿಡುಗಡೆಯಾಗಿದೆ.